**ಜನವರಿ 31** — **ಸಂತಸದ ನೆರಳು!** — ಬೆಳಿಗ್ಗೆ : ವಿಮೋ 25,26 ಸಂಜೆ : ಮತ್ತಾ 20:17-34

**'ಹಗಲಿನ ಬಿಸಿಲಲ್ಲಿ ನೆರಳನ್ನೂ, ಸಣ್ಣ ದೊಡ್ಡ ಮಳೆಗಳಲ್ಲಿ ಆಶ್ರಯವನ್ನೂ ಕೊಡುವ ಮಂಟಪವಿರುವದು'** (ಯೆಶಾ 4:6).

ಅರಸನಾದ ದಾವೀದನ ಜೀವಿತವನ್ನು ನೋಡುವಾಗ, ಅವನು ತನ್ನ ಜೀವಿತದಲ್ಲಿ ಅನೇಕ ಅಪಾಯಗಳನ್ನು ಸಂಕಷ್ಟಗಳನ್ನು ಎದುರಿಸಬೇಕಾಯಿತು. ಅಂಥಹ ಸಮಯಗಳಲ್ಲಿ ಅವನು ಮರೆಹೋದ ಆಶ್ರಯ, ಕರ್ತನೇ ಆಗಿದ್ದನು. ಅವನ ಪೂರ್ಣವಾದ ನಂಬಿಕೆ ಕರ್ತನಲ್ಲಿತ್ತು. ಆದ್ದರಿಂದ "ಅಪಾಯ ಕಾಲದಲ್ಲಿ ಆತನು ನನ್ನನ್ನು ಗುಪ್ತಸ್ಥಳದಲ್ಲಿ ಅಡಗಿಸುವನು; ತನ್ನ ಗುಡಾರವೆಂಬ ಆಶ್ರಯ ಸ್ಥಾನದಲ್ಲಿ ನನ್ನನ್ನು ಭದ್ರಪಡಿಸುವನು ಪರ್ವತಾಗ್ರದಲ್ಲಿ ನನ್ನನ್ನು ಸುರಕ್ಷಿತವಾಗಿರಿಸುವನು" (ಕೀರ್ತ 27:5).

ಈ ಒಂದು ಉದ್ದೇಶಕ್ಕಾಗಿಯೇ, ಕರ್ತನು ಮೋಶೆಗೆ, "ದೇವದರ್ಶನ ಗುಡಾರವನ್ನು ನಿರ್ಮಿಸಬೇಕೆಂದು ಹೇಳಿದನು. ಪಾಪದಲ್ಲಿ ಸಾಗಿನೊಂದವರು ಶಾಪದಿಂದ ನೊಂದವರು ಅಲ್ಲಿಗೆ ಬಂದು ತಮ್ಮ ಪಾಪ ಪರಿಹಾರಕ್ಕಾಗಿ ಯಜ್ಞಗಳನ್ನು ಸಮರ್ಪಿಸುತ್ತಿದ್ದರು, ಮನಸ್ಸಮಾಧಾನವನ್ನು ಪಡೆಯುತ್ತಿದ್ದರು. ಆ ಗುಡಾರದ ನೆರಳು, ಪಾಪಗಳನ್ನೂ ಶಾಪಗಳನ್ನು, ನೀಗಿಸುವ ವಿಮೋಚಕನ ನೆರಳಾಗಿದ್ದಿತು. ಇದು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿದೆ; ಇವುಗಳ ನಿಜಸ್ವರೂಪ ಕ್ರಿಸ್ತನೇ" (ಕೊಲೆಸ್ಸೆ 2:17) ಎಂದು ಸತ್ಯವೇದ ಹೇಳುತ್ತದೆ. ಹಳೆಯ ಒಡಂಬಡಿಕೆಯಲ್ಲಿರುವ, ದೇವದರ್ಶನ ಗುಡಾರದ ನೆರಳು, ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನಿಗೂ ಆತನ ಸಭೆಗೂ ಗುರುತಾಗಿರುವದು. ಹಗಲಿನ ಬಿಸಿಲಿನಲ್ಲಿ, ಕೆಲಸ ಮಾಡಿದ ಒಬ್ಬ ಕೂಲಿಯವನು, ಯಾವದಾದರೊಂದು ನೆರಳು ಸಿಗುವದಾ ಎಂದು ಬಯಸುವದು, ಸಹಜವೇ. ಹಾಗೆಯೇ ಈ ಪ್ರಪಂಚದಲ್ಲಿ ಶೋಧನೆ, ಕಷ್ಟ, ಸಂಕಟಗಳೆಂಬ ಕಡು ಬಿಸಿಲಿನ ಬೇಗೆಯಲ್ಲಿ ನೊಂದ ಜನರು, ತಮಗೆ ಆಧರಣೆ, ಸಮಾಧಾನ ನೀಡುವ ಯಾವುದಾದರೊಂದು ಆಶ್ರಯವನ್ನು ಹುಡುಕಿ ಓಡುವರು. ಕೆಲವರು, ಅಲ್ಪ ಕಾಲದ ಸಂತೋಷ ನೀಡುವ ಮಧ್ಯಪಾನ, ಧೂಮಪಾನ, ವ್ಯಭಿಚಾರ ಮುಂತಾದವುಗಳ ನೆರಳಿಗೆ ಓಡುವರು. ಆದರೆ ಅವು ನಾಗರ ಹಾವಿನ ವಿಷದಂತೆ ಮರೆಹೋದವರನ್ನೇ, ಆಹುತಿ ತೆಗೆದುಕೊಳ್ಳುವದು. ಆದರೆ ಕ್ರಿಸ್ತನ ನೆರಳನ್ನು ಆಶ್ರಯಿಸುವವರೋ, ನಿತ್ಯ ನಿರಂತರವಾದ ಸಮಾಧಾನವನ್ನೂ ಸಂತೋಷವನ್ನು ಪಡೆಯುವರು.

ದೇವಮಕ್ಕಳೇ, ನಿಮಗೆ ವಿಶ್ರಾಂತಿಯ ಅವಶ್ಯಕತೆ ಇರುವದೆಂದು ತಿಳಿದ ಯೇಸು, "ಎಲೈ ಕಷ್ಟಪಡುವವರೇ ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿಕೊಡುವೆನು" (ಮತ್ತಾ 11:28) ಎಂದು ಕರೆಯುತ್ತಿರುವನು, ಇಂದೇ ಆತನ ಬಳಿಗೆ ಬನ್ನಿರಿ.

**ನೆನಪಿಗೆ : 'ತನ್ನ ಕೈಯ ನೆರಳಿನಲ್ಲಿ ನನ್ನನ್ನು ಹುದುಗಿಸಿದ್ದಾನೆ; ನನ್ನನ್ನು ಚೂಪಾದ ಬಾಣವನ್ನಾಗಿ ರೂಪಿಸಿ ತನ್ನ ಬತ್ತಳಿಕೆಯಲ್ಲಿ ಮುಚ್ಚಿಟ್ಟಿದ್ದಾನೆ'** (ಯೆಶಾ 49:2).




# ಅನುದಿನದ ಆಹಾರ
# Anudhinada Ahara

ಜನವರಿ 2018 JANUARY

ಮರ 19 ಹಣ್ಣು 01 — Tree 19 Fruit 01


## ಎಲ್‌ಷಡಾಯ್!

**'ಅಬ್ರಾಮನು ತೊಂಭತ್ತೊಂಭತ್ತು ವರುಷದವನಾದಾಗ ಯೆಹೋವನು ಅವನಿಗೆ ದರ್ಶನಕೊಟ್ಟು-ನಾನು ಸರ್ವಶಕ್ತನಾದ ದೇವರು. ನನಗೆ ನಡಕೊಂಡು ದೋಷವಿಲ್ಲದವನಾಗಿರು'** (ಆದಿ 17:1).

ಇಬ್ರಿಯ ಭಾಷೆಯಲ್ಲಿ ಎಲ್ ಷಡಾಯ್ ಎಂದರೆ "ನಾನು ಸರ್ವಶಕ್ತನಾದ ದೇವರು" ಎಂದು ಅರ್ಥ. ನಮ್ಮ ದೇವರಿಗೆ 272 ಹೆಸರುಗಳಿವೆ. ಪ್ರತಿಯೊಂದು ಹೆಸರೂ ಆತನ ಗುಣಗಳನ್ನು ಪ್ರಕಟಿಸುತ್ತದೆ. ಒಂದು ವಜ್ರಕ್ಕೆ ಅನೇಕ ಪಾರ್ಶ್ವಗಳಿವೆ. ಪ್ರತಿಯೊಂದು ಪಾರ್ಶ್ವವೂ ತನ್ನದೇ ಆದ ಸೌಂದರ್ಯ ಹೊಳಪನ್ನು ಹೊಂದಿದೆ. ಎಲ್ಲಾ ಪಾರ್ಶ್ವಗಳೂ ಒಂದಾಗಿ ಒಂದು ದೊಡ್ಡ ವಜ್ರವಾಗುತ್ತದೆ. ನಮ್ಮ ಕರ್ತನ ಗುಣ ಲಕ್ಷಣಗಳನ್ನು ಒಂದು ಹೆಸರಿನಿಂದ ಗ್ರಹಿಸಲು ಸಾಧ್ಯವಿಲ್ಲ. ನಾವು ಎಲ್ಲಾ ಹೆಸರುಗಳ ಬಗ್ಗೆ ಧ್ಯಾನ ಮಾಡುವಾಗ ನಮ್ಮ ಕರ್ತನ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಯೆಶಾಯನ ಪ್ರವಾದನಾ ಗ್ರಂಥ 9ನೇ ಅಧ್ಯಾಯ 6ನೇ ವಚನದಲ್ಲಿ ಕರ್ತನ ಐದು ಹೆಸರುಗಳು ಸೂಚಿಸಲ್ಪಟ್ಟಿದೆ. ಆತನು ಅದ್ಭುತ ಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ ಮತ್ತು ಸಮಾಧಾನದ ಪ್ರಭು. ಆತನ ಪ್ರತಿಯೊಂದು ನಾಮವೂ ದೇವರ ವಾಗ್ದಾನದಿಂದ ಕೂಡಿದೆ. ಆತನು ಅಬ್ರಹಾಮನಿಗೆ ತನ್ನ ಹೆಸರನ್ನು ತಿಳಿಸುವಾಗ ತನ್ನನ್ನು ಸರ್ವಶಕ್ತನಾದ ದೇವರು ಅಥವಾ ಎಲ್ ಷಡಾಯ್ ಎಂದು ಪ್ರಕಟಿಸಿಕೊಂಡನು ಸರ್ವಶಕ್ತನಾದ ದೇವರು ಸಕಲ ಕಾರ್ಯಗಳನ್ನು ಮಾಡಲು ಶಕ್ತನಾಗಿದ್ದಾನೆ. ಯಾವ ಸಂಕಲ್ಪವೂ ಆತನಿಗೆ ಅಸಾಧ್ಯವಲ್ಲ (ಯೋಬ 42:2).

ಅಬ್ರಹಾಮನು ಮೂಲ ಪಿತೃಗಳಲ್ಲಿ ಮೊದಲನೆಯವನು. ಇಬ್ರಿಯ ಜನಾಂಗದಲ್ಲಿ ಮೊದಲನೆಯವನು. ಅವನಿಗೆ ಸಕಲೈಶ್ವರ್ಯಗಳಿದ್ದರೂ ಸಂತಾನವಿಲ್ಲದವನಾಗಿದ್ದನು. ಅಬ್ರಹಾಮನು ನಂಬಿಕೆಯ ತಂದೆ ಎನಿಸಿಕೊಂಡನು. ಅಬ್ರಹಾಮನು 99 ವರ್ಷದವನಾಗಿದ್ದನು ಮತ್ತು ಸಾರಳು ಗರ್ಭಧರಿಸುವ ಪ್ರಾಯ ಮೀರಿದವಳಾಗಿದ್ದಳು. ಆಗ ದೇವರು ಅಬ್ರಹಾಮನಿಗೆ ಕಾಣಿಸಿಕೊಂಡು ಹೀಗೆ ಹೇಳಿದನು "ನಾನು ಎಲ್ ಷಡಾಯ್, ಸರ್ವಶಕ್ತನಾದ ದೇವರು".

**ಎಲ್ ಷಡಾಯ್ ಎನ್ನುವ ಪದಕ್ಕೆ ಮೂರು ಅರ್ಥವನ್ನು ಹೊಂದಿದೆ:**

1. **ಕರ್ತನು ನಾವು ಆಲೋಚಿಸುವುದಕ್ಕಿಂತ ಮಿಗಿಲಾಗಿ ಆಶೀರ್ವದಿಸುವಾತನು.**
2. **ಕರ್ತನು ಮಹತ್ತುಗಳನ್ನು ಮಾಡುವಾತನು.**
3. **ಕರ್ತನು ತಾಯಿಯ ವಾತ್ಸಲ್ಯದಿಂದ ಕೂಡಿದವನು.**

## 1. ಆತನು ನಾವು ಆಲೋಚಿಸುವುದಕ್ಕಿಂತ ಮಿಗಿಲಾಗಿ ಆಶೀರ್ವದಿಸುವನು

ಎಲ್ ಷಡಾಯ್ ಪದದ ಮೊದಲನೆಯ ಅರ್ಥ ಆಲೋಚಿಸುವದಕ್ಕಿಂತಲೂ ಮಿಗಿಲಾಗಿ ಆಶೀರ್ವದಿಸುವ ಕರ್ತನು. ಅಬ್ರಹಾಮನು ಒಂದು ಮಗುವನ್ನು ಹಾರೈಸಿದ. ಆದರೆ ಕರ್ತನು ಅವನ ಮೂಲಕ ನಂಬಿಕೆಯ ಒಂದು ದೊಡ್ಡ ಜನಾಂಗವನ್ನೇ ಎಬ್ಬಿಸಿದನು. ಸರ್ವಶಕ್ತನಾದ ದೇವರು ಅಬ್ರಹಾಮನನ್ನು ಒಂಟಿಯಾಗಿ ಕರೆದುಕೊಂಡು ಹೋಗಿ ಆಕಾಶದ ಕಡೆಗೆ ತೋರಿಸಿ ಅಲ್ಲಿ ಕಾಣುವ ನಕ್ಷತ್ರಗಳನ್ನು ಎಣಿಸುವಂತೆ ಹೇಳಿದನು. ಮತ್ತು ಅಸಂಖ್ಯಾತ ನಕ್ಷತ್ರಗಳ ರೀತಿಯಲ್ಲಿ ಅವನಿಗೆ ಸಂತತಿಯನ್ನು ಕೊಡುವುದಾಗಿ ವಾಗ್ದಾನ ಮಾಡಿದನು. ಕರ್ತನು ಅಬ್ರಹಾಮನನ್ನು ಮೂರು ವಿಧವಾಗಿ ಆಶೀರ್ವದಿಸಿದನು. 1.ನಿನ್ನ ಸಂತಾನದವರನ್ನು ಭೂಮಿಯ ಧೂಳಿನಷ್ಟು ಅಸಂಖ್ಯವಾಗಿ ಮಾಡುವೆನು (ಆದಿ 13:16). 2.ನಿನ್ನ ಸಂತತಿಯನ್ನು ಸಮುದ್ರ ತೀರದಲ್ಲಿರುವ ಉಸುಬಿನಂತೆ ಅಸಂಖ್ಯಾತವಾಗಿ ಮಾಡುವೆನು (ಆದಿ 22:17). 3.ನಿನ್ನ ಸಂತತಿಯನ್ನು ಆಕಾಶದ ನಕ್ಷತ್ರಗಳಷ್ಟು ಅಸಂಖ್ಯಾತವಾಗಿ ಮಾಡುವೆನು (ಆದಿ 15:5).

ದೇವರು ಅಬ್ರಹಾಮನ ಸಂತತಿಯನ್ನು ಭೂಮಿಯ ಧೂಳಿನಷ್ಟು ಮತ್ತು ಸಮುದ್ರ ತೀರದ ಮರಳಿನಷ್ಟು ಅಸಂಖ್ಯವಾಗಿ ಹೆಚ್ಚಿಸುವೆನು ಎಂದು ಮಾಡಿದ ವಾಗ್ದಾನವು ಅದು ಈ ಭೂಮಿಗೆ ಸಂಬಂಧಪಟ್ಟ ಸಂತತಿಗಳಾಗಿವೆ. ಅಬ್ರಹಾಮ ಮತ್ತು ಹಾಗರಗಳಲ್ಲಿ ಹುಟ್ಟಿದ ಇಷ್ಮಾಯೇಲನ ಸಂತತಿಯು ಭೂಮಿಯ ಮೇಲಿನ ಧೂಳಿನಷ್ಟು ಹೆಚ್ಚಿತು. ಅಬ್ರಹಾಮ ಮತ್ತು ಸಾರಳಲ್ಲಿ ಹುಟ್ಟಿದ ಇಸಾಕನ ಸಂತತಿಯು, ಸಮುದ್ರ ತೀರದ ಮರಳಿನಷ್ಟು ಹೆಚ್ಚಿತು. ದೇವರಿಂದ ಕೊಡಲ್ಪಟ್ಟ ಮೂರನೆಯ ಸಂತತಿಯು ಪರಲೋಕಕ್ಕೆ ಸಂಬಂಧಿಸಿದ್ದು, ಈ ಸಂತತಿಯು ಆಕಾಶದಲ್ಲಿನ ನಕ್ಷತ್ರಗಳಂತೆ ಪ್ರಕಾಶಿಸುವುದು; ಉದಯ ಸೂಚಕ ನಕ್ಷತ್ರವಾದ ಯೇಸುಕ್ರಿಸ್ತನ ಮೂಲಕ ಪರಲೋಕದ ಆಶೀರ್ವಾದಗಳ ಬಾಧ್ಯಸ್ಥರು. ಇವರೇ ದೇವರ ಮಕ್ಕಳಾದ ಕ್ರೈಸ್ತರು.

"ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆಸ 1:3). ದೇವರು ನಮ್ಮನ್ನು ಸ್ವಲ್ಪವಾಗಿ ಅಲ್ಲ, ಹೇರಳವಾಗಿ ಆಶೀರ್ವದಿಸುವವನಾಗಿದ್ದಾನೆ. ಆತನು ಎಲ್ ಷಡಾಯ್ ಆಗಿದ್ದಾನೆ. "ನೀನು ಎಲ್ಲಾ ಕಡೆಗಳಲ್ಲಿಯೂ ಹಬ್ಬಿಕೊಳ್ಳುವಿ. ನಿನ್ನ ಸಂತಾನದವರು ಜನಾಂಗಗಳನ್ನು ವಶಮಾಡಿಕೊಂಡು ಹಾಳುಪಟ್ಟಣಗಳನ್ನು ಜನಭರಿತವಾಗುವಂತೆ ಮಾಡುವರು" (ಯೆಶಾ 54:3). ನಮ್ಮ ದೇವರು ಎಲ್ ಷಡಾಯ್ ಆಗಿದ್ದಾನೆ. ಅರಣ್ಯದಲ್ಲಿ ಇಸ್ರಾಯೇಲ್ಯರಿಗೆ ಮನ್ನವನ್ನು ಕೊಟ್ಟಾತನು. ಅವರು ಮಾಂಸವನ್ನು ಆಶಿಸಿದಾಗ ಅವರ ಪಾಳೆಯದ ಸುತ್ತಲೂ ಲಾವಕ್ಕಿಗಳು ಹೇರಳವಾಗಿ ಬಂದು ಬೀಳುವಂತೆ ಮಾಡಿದಾತನು.

ಕರ್ತನು ರೊಟ್ಟಿ ಮತ್ತು ಮಾಂಸವನ್ನು ಕಾಗೆಗಳ ಮೂಲಕ ಕಳುಹಿಸಿ ಎಲಿಯನನ್ನು ಪೋಷಿಸಿದನು. ಅವನು ಚಾರೆಪ್ತ ಊರಿನ ವಿಧವೆಯ ಮನೆಯಲ್ಲಿದ್ದಾಗ, ಮಡಿಕೆಯಲ್ಲಿದ್ದ ಹಿಟ್ಟು ಮೊಗೆಯಲ್ಲಿದ್ದ ಎಣ್ಣೆ ಮುಗಿಯದಂತೆ ಮಾಡಿದನು. ಆತನು ಎಲ್ ಷಡಾಯ್ ಆಗಿದ್ದಾನೆ.



## 2. ಕರ್ತನು ಮಹತ್ತುಗಳನ್ನು ಮಾಡುವಾತನು

ಎಲ್‍ಷಡಾಯ್ ಎಂದರೆ ಸರ್ವಶಕ್ತನಾದ ದೇವರು ಎಂದರ್ಥ (ಆದಿ 17:1). ಆದರೆ ಕೆಲವು ಭಾಷಾಂತರಗಳು ಹೇಳುವಂತೆ ಆತನು ಪರಾಕ್ರಮಿಯಾದ ದೇವರು. "ಇಗೋ, ನಾನು ಯೆಹೋವನು, ನರಪ್ರಾಣಿಗೆಲ್ಲಾ ದೇವರು; ನನಗೆ ಅಸಾಧ್ಯವಾದದ್ದುಂಟೇ?" (ಯೆರೆ 32:27). "ಮನುಷ್ಯರಿಗೆ ಅಸಾಧ್ಯ; ಆದರೆ ದೇವರಿಗೆ ಎಲ್ಲವೂ ಸಾಧ್ಯ" (ಮತ್ತಾ 19:26). "ಕರ್ತನಾದ ಯೆಹೋವನೇ; ಆಹಾ, ನೀನು ಭುಜವನ್ನೆತ್ತಿ ನಿನ್ನ ಮಹಾಶಕ್ತಿಯಿಂದ ಭೂಮ್ಯಾಕಾಶಗಳನ್ನು ಸೃಷ್ಟಿಸಿದ್ದೀ. ಯಾವ ಕಾರ್ಯವೂ ನಿನಗೆ ಅಸಾಧ್ಯವಲ್ಲ" (ಯೆರೆ 32:17).

ನಮ್ಮ ಕರ್ತನು ಆಕಾಶದಲ್ಲಿ ಅಸಂಖ್ಯಾತವಾದ ನಕ್ಷತ್ರಗಳನ್ನು ಇರಿಸಿದ್ದಾನೆ. ಪ್ರತಿಯೊಂದನ್ನೂ ಹೆಸರು ಹಿಡಿದು ಕರೆಯುತ್ತಾನೆ. ಈ ಲೋಕದಲ್ಲಿ ಅನೇಕ ಶಕ್ತಿಗಳನ್ನು ನೋಡುತ್ತೇವೆ. ಪ್ರಕೃತಿಗೆ ಶಕ್ತಿ ಉಂಟು ವಿದ್ಯುಚ್ಛಕ್ತಿಗೆ ಶಕ್ತಿ ಉಂಟು, ಅಣುಶಕ್ತಿಗೆ ಬಲ ಉಂಟು. ಆದರೆ ಇವೆಲ್ಲವುಗಳಿಗಿಂತ ನಮ್ಮ ಸರ್ವಶಕ್ತನು ಬಲಾಢ್ಯನು. ಆತನಿಗೆ ಸಮನಾದದ್ದು ಯಾವುದೂ ಇಲ್ಲ ದುರಾತ್ಮಗಳ ಶಕ್ತಿಯಿಂದ ಕೆಡುಕರು ಮಾಟಮಂತ್ರಗಳನ್ನು ಮಾಡುತ್ತಾರೆ. ನಿನ್ನಲ್ಲಿರುವ ಕರ್ತನು ಈ ಲೋಕದಲ್ಲಿರುವವನಿಗಿಂತ ದೊಡ್ಡವನು. ಶತ್ರುವಿನ ಮೇಲೆ ಆತನು ನಮಗೆ ಅಧಿಕಾರವನ್ನು ಕೊಟ್ಟಿರುವನು (ಲೂಕ 10:19).

ನಿನ್ನ ಹೃದಯವನ್ನು ಬಿಚ್ಚಿ ನಿನ್ನ ಎಲ್ಲಾ ಅವಶ್ಯಕತೆಗಳನ್ನು ಚಿಂತೆಗಳನ್ನು ಸರ್ವಶಕ್ತನಾದ ದೇವರ ಬಳಿ ಹೇಳು. ಆತನು ನಿನ್ನ ಸಮಸ್ಯೆಗಳನ್ನು ಪರಿಹರಿಸುವನು. ನಿನ್ನ ಜೀವಿತದಲ್ಲಿ ಏಳುವ ಬಿರುಗಾಳಿಯನ್ನು ಶಾಂತಗೊಳಿಸುವನು. "ನೀನು ಸಕಲ ಕಾರ್ಯಗಳನ್ನು ನಡೆಸಬಲ್ಲೆಯೆಂತಲೂ ಯಾವ ಸಂಕಲ್ಪವೂ ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ" (ಯೋಬ 42:2).

## 3. ತಾಯಿಯ ವಾತ್ಸಲ್ಯವುಳ್ಳ ಕರ್ತನು

ನಾವು ಯಾವಾಗಲೂ ಕರ್ತನನ್ನು ತಂದೆಯಂತೆ ಕಾಣುತ್ತೇವೆ. ಆದರೆ ಆತನು ಪ್ರೀತಿಸುವ ತಾಯಿಯೂ ಆಗಿದ್ದಾನೆ. ತಾಯಿಯಂತೆ ಸಂತೈಸುವನಾಗಿದ್ದಾನೆ. "ತಾಯಿ ಮಗನನ್ನು ಸಂತೈಸುವ ಪ್ರಕಾರ ನಾನು ನಿಮ್ಮನ್ನು ಸಂತೈಸುವೆನು" (ಯೆಶಾ 66:13). "ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆಯಿಡದೆ ತನ್ನ ಮೊಲೆ ಕೂಸನ್ನು ಮರೆತಾಳೇ? ಒಂದು ವೇಳೆ ಮರೆತಾಳು, ನಾನಾದರೆ ನಿನ್ನನ್ನು ಮರೆಯೆನು" (ಯೆಶಾ 49:15). ಎಂದು ನಿನ್ನ ತಂದೆಯಾದ ದೇವರು ಅನ್ನುತ್ತಾನೆ.

ಹೌದು ಕರ್ತನು ತಾಯಿಯಂತೆ ನಮ್ಮ ಬಗ್ಗೆ ಅಕ್ಕರೆಯುಳ್ಳವನಾಗಿದ್ದಾನೆ. ಯೇಸು ತನ್ನನ್ನು ಹಿಂಬಾಲಿಸಿ ಬಂದು ತನ್ನ ಉಪದೇಶವನ್ನು ಕೇಳಿದ ಜನಗಳ ಬಗ್ಗೆ ಅಕ್ಕರೆಯುಳ್ಳವನಾಗಿದ್ದು, ಐದು ರೊಟ್ಟಿ ಎರಡು ಮೀನುಗಳಿಂದ ಐದು ಸಾವಿರ ಜನರನ್ನು ಪೋಷಿಸಿದನು. ನಿನ್ನ ತಾಯಿಯನ್ನು ಕಳೆದುಕೊಂಡಿದ್ದಿಯೆ? ಆತನು ನಿನ್ನ ತಾಯಿಯಾಗಿದ್ದಾನೆ. ನಿನ್ನ ತಂದೆಯನ್ನು ಕಳೆದುಕೊಂಡಿದ್ದೀಯೇ? ಆತನು ನಿನ್ನ ತಂದೆಯಾಗಿದ್ದಾನೆ. ಆತನು ನಿನ್ನ ಸ್ನೇಹಿತನು ನಿನ್ನ ಸಹೋದರನು. ಆತನು ನಿನಗೆ ಎಲ್ಲವೂ ಆಗಿದ್ದಾನೆ. ಅಂತ್ಯದವರೆಗೂ ನಂಬಿಗಸ್ತನಾದಂಥಹ ಎಲ್ ಷಡಾಯ್ ಆದ ಕರ್ತನನ್ನು ನೀನು ಸ್ತುತಿಸುವೆಯಾ?

## ಅನುದಿನವೂ ನಮ್ಮೊಂದಿಗಿರಲು ಬಯಸುವ ದೇವರು

ಒಬ್ಬ ಅರಸನಿದ್ದನಂತೆ. ಅವನು ತನ್ನ ಮಗನಿಗೆಂದು ಒಂದು ವರುಷಕ್ಕಾಗುವಷ್ಟು ಖರ್ಚನ್ನು ಒಂದೇ ದಿನದಲ್ಲಿ ಕೊಟ್ಟುಬಿಡುತ್ತಿದ್ದನಂತೆ. ಆ ಮಗನು ಆ ಒಂದು ದಿನ ಮಾತ್ರವೇ ತಂದೆಯನ್ನು ನೋಡಲು ಬರುತ್ತಿದ್ದನಂತೆ. ಹಣವನ್ನು ತೆಗೆದುಕೊಂಡು ಹೋದವನು ತಿರುಗಿ ಒಂದು ವರ್ಷವಾದ ನಂತರ ಮಾತ್ರವೇ ತಿರುಗಿ ತಂದೆಯನ್ನು ನೋಡುವದಕ್ಕೆ ಬರುತ್ತಿದ್ದುದುಂಟು. ರಾಜನು ವರುಷಕ್ಕೊಂದು ಸಾರಿ ಹಣ ಕೊಡುವುದನ್ನು ನಿಲ್ಲಿಸಿಬಿಟ್ಟನಂತೆ. ಪ್ರತಿದಿನವೂ ಅರಮನೆಗೆ ಬಂದು ಹಣವನ್ನು ತೆಗೆದುಕೊಂಡು ಹೋಗಲು ಮಗನಿಗೆ ತಿಳಿಸಿದನು. ಆಗ ಮಗನು ಏಕೆ ಹೀಗೆ ಮಾಡಿದಿ ಎಂದು ತಂದೆಯನ್ನು ಕೇಳಿದನು.

ಅದಕ್ಕೆ ತಂದೆಯು ಹೇಳಿದನು "ಮಗನೇ, ನಿನಗೆ ಒಟ್ಟು ಹಣ ಕೊಟ್ಟುಬಿಟ್ಟರೆ ನಿನ್ನನ್ನು ವರ್ಷಕ್ಕೊಂದು ಬಾರಿ ಮಾತ್ರವೇ ನೋಡಬೇಕು, ಆದರೆ ಪ್ರತಿದಿನವೂ ನಿನ್ನನ್ನು ನೋಡಲು ನಾನು ಆಸೆ ಪಡುತ್ತೇನೆ. ಅದಕ್ಕಾಗಿ ಹೀಗೆ ಮಾಡಿದೆನು" ಅಂದನು.

ಇದನ್ನೇ ನಮ್ಮ ಪರಮ ತಂದೆಯಾದ ದೇವರು ನಮ್ಮಿಂದ ಕೇಳುತ್ತಾನೆ. ಆತನು ಒಟ್ಟಾಗಿ ಸೇರಿಸಿ ಎಲ್ಲವನ್ನೂ ಒಂದೇ ಸಾರಿ ಕೊಡುವದಿಲ್ಲ. ಪ್ರತಿದಿನವೂ ನಮ್ಮೊಂದಿಗೆ ಸಂಚರಿಸಲು ಆತನು ಬಯಸುತ್ತಾನೆ. ಅನುದಿನದ ಆಹಾರವನ್ನು ನಮಗೆ ದಯಪಾಲಿಸು ಎಂಬ ಪ್ರಾರ್ಥನೆಯನ್ನು ನಮಗೆ ಕಲಿಸಿದ್ದಾನೆ ಅಲ್ಲವೇ. ಅನುದಿನವೂ ದೇವರನ್ನು ಆಶ್ರಯಿಸಿಕೊಳ್ಳೋಣ. ಆತನೊಂದಿಗೆ ಪ್ರಾರ್ಥಿಸುತ್ತಾ ಸಂಚರಿಸೋಣ.

## ನೂತನ ವರ್ಷ

"ನಿನ್ನ ಕೃಪೆಯಿಂದ ಸಂವತ್ಸರಕ್ಕೆ ಸುಭಿಕ್ಷ ಕಿರೀಟವನ್ನು ಇಟ್ಟಿದ್ದಿ ನೀನು ಹಾದು ಹೋಗುವ ಮಾರ್ಗದಲ್ಲೆಲ್ಲಾ ಸಮೃದ್ಧಿಕರವಾದ ವೃಷ್ಟಿಯು ಸುರಿಯುವದು" ಕೀರ್ತ 65:11. ಈ ವರ್ಷವನ್ನು ನೀವು ನಿಮ್ಮದಾಗಿಸಿಕೊಳ್ಳುವಿರ ಎಂದು ಕರ್ತನು ಗಮನಿಸುವಾತನಾಗಿದ್ದಾನೆ. ವರ್ಷಾರಂಭದಿಂದ ಕೊನೆಯವರೆಗೂ ಆತನು ಕಟಾಕ್ಷಿಸುವನು. ಮಾತ್ರವಲ್ಲದೆ ನಿಮಗೆ ಆಲೋಚನೆ ಕೊಡಲು ಸಿದ್ಧನಾಗಿರುವನು.

ಈ ನೂತ ವರ್ಷದಲ್ಲಿ ನಿಮ್ಮ ಜೀವಿತದ ಬಗ್ಗೆ ಒಂದು ನಿರ್ದಿಷ್ಟವಾದ ಧೈರ್ಯ, ಗುರಿ ಇರಬೇಕು. ದಿನಗಳನ್ನು ವ್ಯರ್ಥವಾಗಿ ಕಳೆಯಬಾರದು. ಗುರಿ ಇಲ್ಲದ ಜೀವಿತ ವಿಳಾಸವಿಲ್ಲದ ಪತ್ರದಂತೆ, ಇಂದು ಅನೇಕರು ಜೀವಿತದಲ್ಲಿ ಒಂದು ನಿಶ್ಚಿತವಿಲ್ಲದೆ, ಗುರಿ ಇಲ್ಲದೆ ಗಾಳಿ ಬೀಸಿದ ಕಡೆಗೆ ಮೋಡ ಚಲಿಸುವಂತೆ



ಅನೇಕ ಯೌವನಸ್ಥರು ಇದ್ದಾರೆ. ಸಮೃದ್ಧಿಕರವಾದ ಭವಿಷ್ಯವನ್ನು ದೃಢ ಸಂಕಲ್ಪದೊಂದಿಗೆ ಎದುರುಗೊಳ್ಳುವದಿಲ್ಲ. ದೇವರ ಮಕ್ಕಳಿಗೆ ಭವಿಷ್ಯತ್ತನ್ನು ಕುರಿತು, ನಂಬಿಕೆ, ನಿರೀಕ್ಷೆವುಂಟು.

ಈ ನೂತನ ವರ್ಷದಲ್ಲಿ ನಿಮ್ಮ ಉದ್ದೇಶವೆಲ್ಲಾ ನಾವು ಯೇಸುಕ್ರಿಸ್ತನಂತೆ ಮಾರ್ಪಡಬೇಕು ಎಂಬದಾಗಿರಬೇಕು. ಆತನಲ್ಲಿದ್ದಂಥ ಪ್ರೀತಿ, ಪರಿಶುದ್ಧತೆ, ತಾಳ್ಮೆ, ಪ್ರಾರ್ಥನಾ ಜೀವಿತವನ್ನು ಸ್ವಂತ ಮಾಡಿಕೊಳ್ಳಿರಿ. ಆತನಂತೆ ಆಗಬೇಕು ಎಂದು ತವಕಪಡಿರಿ. ಅದೇ ನಿಮ್ಮ ಜೀವಿತದ ಧ್ಯೇಯವಾಗಿರಲಿ. ಆಗ ತುತೂರಿಯ ಶಬ್ಧ ಕೇಳುವಾಗ ಕ್ಷಣಮಾತ್ರದಲ್ಲಿ ನಾವು ರೂಪಾಂತರವಾಗಿ ಯೇಸುಕ್ರಿಸ್ತನಂತೆ ಮಾರ್ಪಡುವೆವು.

## ಮುಂಜಾನೆಯಲ್ಲಿ ಏಕಾಂತ ಪ್ರಾರ್ಥನೆ

1. ಬೆಳಿಗ್ಗೆ ನೀನು ಸಿದ್ಧವಾಗಿದ್ದು ಸೀನಾಯಿ ಬೆಟ್ಟವನ್ನು ಹತ್ತಿ ಅಲ್ಲಿ ಬೆಟ್ಟದ ತುದಿಯ ಮೇಲೆ ನನ್ನ ಸನ್ನಿಧಿಯಲ್ಲಿ ನಿಂತಿರಬೇಕು' (ವಿಮೋ 34:2).
2. ಮುಂಜಾನೆಯ ವೇಳೆಯು ಪ್ರಾರ್ಥಿಸಲು ಬಹು ಉತ್ತಮವಾದ ಸಮಯ, "ಮುಂಜಾನೆ ಇನ್ನೂ ಮೊಬ್ಬಿರುವಾಗ ಆತನು ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸುತ್ತಿದ್ದನು" (ಮಾರ್ಕ 1:35).
3. ಮುಂಜಾನೆಯ ಪ್ರಾರ್ಥನೆಯನ್ನು ಬಿಟ್ಟುಬಿಡದಿರಿ. ಕುಟುಂಬ ಪ್ರಾರ್ಥನೆ ಅವಶ್ಯ ಆದರೆ ಮುಂಜಾನೆಯಲ್ಲಿ ಏಕಾಂತವಾಗಿ ಇದ್ದು ಪ್ರಾರ್ಥಿಸುವದು ಬಹಳ ಅವಶ್ಯ.
4. ವಾಡಿಕೆ ಎಂದೆಣಿಸಿ ಪ್ರಾರ್ಥಿಸದಿರಿ, ಸರ್ವಶಕ್ತನಾದ ದೇವರೊಂದಿಗೆ, ಮಾತಾಡಲು ಹೋಗುವಿರಿ ಎಂಬ ಗ್ರಹಿಕೆಯೊಂದಿಗೆ ಸಿದ್ಧವಾಗಿದ್ದು ಪ್ರಾರ್ಥನೆಯಲ್ಲಿ ತೊಡಗಿರಿ.

### ವಾಗ್ದಾನ ವಚನ : ಯೆಶಾಯ 43:19

**ಇಗೋ, ಹೊಸ ಕಾರ್ಯವನ್ನು ಮಾಡುವೆನು, ಈಗ ತಲೆದೋರುತ್ತಲಿದೆ, ನಿಮಗೆ ಕಾಣುವದಿಲ್ಲವೋ? ನಾನು ಅರಣ್ಯದಲ್ಲಿ ಮಾರ್ಗವನ್ನು ಏರ್ಪಡಿಸಿ ಅಡವಿಯಲ್ಲಿ ನದಿಗಳನ್ನು ಹರಿಸುವೆನು.**

## ನೂತನ ಮನಸ್ಸನ್ನು ಹೊಂದಿರಿ!

"ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ; ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದೂ ಅಂದರೆ ಉತ್ತಮವಾದದ್ದೂ ದೋಷವಿಲ್ಲದ್ದೂ ಮೆಚ್ಚಿಕೆಯಾದ್ದದ್ದೂ ಯಾವ ಯಾವದೆಂದು ವಿವೇಚಿಸಿ ತಿಳಿದುಕೊಳ್ಳುವಿರಿ" (ರೋಮಾ12:2).

ನಾವು ಉರಿದು ಪ್ರಕಾಶಿಸುವ ಬೆಳಕಾಗಿರುತ್ತೇವೆ ಎಂದು, ಅಷ್ಟಕ್ಕೆ ನಿಲ್ಲಬಾರದು ನಾವು ನೂತನಸ್ವಭಾವವನ್ನು ಧರಿಸಿಕೊಳ್ಳುವುದು ಅತೀಅವಶ್ಯ ನೂತನ ರೂಪ ಧರಿಸಿಕೊಳ್ಳುವುದು ಹೇಗೆ? ಸ್ವಲ್ಪ ಯೋಚಿಸಿ ನೋಡಿರಿ. ಸಾಧಾರಣವಾಗಿ ಒಂದು ಪೆಟ್ರೋಮ್ಯಾಕ್ಸ್ ದೀಪವನ್ನು ಹಚ್ಚುವಾಗ ಸ್ವಲ್ಪ ಸೀಮೆಎಣ್ಣೆಯನ್ನು ಹಾಕಿ ಹಚ್ಚುತ್ತಾರೆ. ಅದು ಸಾದಾರಣವಾಗಿ ಹಳದಿ ಬಣ್ಣದಲ್ಲಿ ಉರಿಯುತ್ತದೆ.

ನಂತರ ಅದರ ಪಕ್ಕದಲ್ಲಿರುವ ಪಂಪನ್ನು ತೆಗೆದು ಗಾಳಿಹೊಡೆದು ಹೊರಗೆ ಬಿಟ್ಟಾಗ ಸ್ವಲ್ಪ ಹೊತ್ತಿಗೆಲ್ಲಾ ಅದು ಬೆಳ್ಳಗೆ ಬಹಳ ಪ್ರಕಾಶಮಾನವಾಗಿ ಉರಿಯಲು ಆರಂಭಿಸುತ್ತದೆ. ಇನ್ನೂ ಅಧಿಕವಾಗಿ ಗಾಳಿಯನ್ನು ಹೊಡೆದಾಗ ಇನ್ನೂ ಅಧಿಕವಾಗಿ ಪ್ರಕಾಶಿಸುತ್ತದೆ. ಅದರ ಬೆಳಕು ಕಣ್ಣಿಗೆ ತಂಪಾಗಿರುತ್ತದೆ. ಹಾಗೆಯೇ ರಕ್ಷಣೆ ಹೊಂದಿರುವ ದೇವರ ಮಕ್ಕಳು ಪ್ರತಿಯೊಬ್ಬರೂ ಕೂಡ ಕ್ರಿಸ್ತನೊಂದಿಗೆ ಸೇರಿಕೊಂಡು ಆತನ ಐಕ್ಯತೆಯಲ್ಲಿ ಜೀವಿಸುವಾಗ ಆತನ ಕಲ್ವಾರಿಯ ಪ್ರೀತಿಯಿಂದ ತುಂಬಲ್ಪಟ್ಟು ಅವರ ಆಂತರ್ಯವೂ ಜೀವಿತವೂ ನೂತನವಾಗಿ ಪ್ರಕಾಶಿಸುವದು.

## ಹೊಸ ದರ್ಶನ!

**ಒಂದು ಸಾರಿ ಒಬ್ಬ ಭಕ್ತನೂ ಒಬ್ಬ ನಾಸ್ತಿಕನೂ ಆರೇಬಿಯಾ ದೇಶದಲ್ಲಿ ಒಂದು ವನವೃಕ್ಷಗಳ ಮಾರ್ಗವಾಗಿ ನಡೆದು ಹೋಗುತ್ತಿರುವಾಗ ಮಾರ್ಗತಪ್ಪಿ ಹೋಗಿದ್ದರು. ಅವರು ಹಲವಾರು ಗಂಟೆಗಳು ನಡೆದ ಬಳಿಕ ಒಂದು ಕಡೆ ದಿಢೀರೆಂದು ಒಂಟೆಗಳು ನಡೆದು ಹೋದ ಹೆಜ್ಜೆಯನ್ನು ಕಂಡರು. ಒಡನೆ ಮುಂದೆ ನಡೆಯಬೇಕಾದ ಮಾರ್ಗ ಕಾಣಿಸಿದ ಸಂತೋಷದಿಂದ ಭಕ್ತನು ತಕ್ಷಣವೇ ಮೊಣಕಾಲೂರಿ ದೇವರಿಗೆ ಸ್ತೋತ್ರ ಸಲ್ಲಿಸಿದನು. ಮಾತ್ರವಲ್ಲ, ನಾಸ್ತಿಕನನ್ನು ನೋಡಿ, "ನೋಡಿದೆಯಾ ಈ ಹೆಜ್ಜೆಗಳನ್ನು! ಇದನ್ನು ನೋಡಿದೊಡನೆ ಇಲ್ಲಿ ನಡೆದು ಹೋಗಿರುವುದು ಮನುಷ್ಯನ ಹೆಜ್ಜೆಯಲ್ಲ, ಒಂಟೆಗಳು ಎಂಬುದನ್ನು ಕಂಡುಕೊಂಡೆನು. ಈ ವನವೃಕ್ಷದ ಮಧ್ಯದಲ್ಲಿ ಈ ಹೆಜ್ಜೆಗಳಿಂದ ಒಂಟೆಯೊಂದು ಈ ಮಾರ್ಗದಲ್ಲಿ ನಡೆದುಕೊಂಡು ಹೋಗಿದೆ ಎಂದು ಗೊತ್ತಾಗುತ್ತದೆ.**



**ಹಾಗೆಯೇ ಆಕಾಶಮಂಡಲವನ್ನೆಲ್ಲಾ ನೋಡುವಾಗ ಅವುಗಳನ್ನು ಸೃಷ್ಟಿಸಿದ ಕರ್ತನು ಇದ್ದಾನೆ ಎಂಬುದನ್ನು ಅರಿತುಕೊಳ್ಳುವೆವು. ಆತನ ಹೆಜ್ಜೆಜಾಡನ್ನು ಈ ಲೋಕದ ಎಲ್ಲಾ ಕಡೆಗಳಲ್ಲಿಯೂ ನಾನು ಕಾಣುತ್ತಿದ್ದೇನೆ. ಒಂದೊಂದು ಸೃಷ್ಟಿಯಲ್ಲಿಯೂ ಕಂಡುಕೊಂಡಿದ್ದೇನೆ. ಒಂದೊಂದು ಮರಗಳಲ್ಲಿಯೂ ಕಾಣುತ್ತೇನೆ. ನದಿಗಳಲ್ಲಿಯೂ, ಪಕ್ಷಿಗಳಲ್ಲಿಯೂ ಕಾಣುತ್ತೇನೆ ಎಂದರು.**


**"ದುರ್ಮತಿಗಳು ದೇವರಿಲ್ಲವೆಂದು ಅಂದುಕೊಳ್ಳುತ್ತಾರೆ" ಎಂದು ವೇದವಾಕ್ಯವು ತಿಳಿಸುತ್ತದೆ (ಕೀರ್ತ 14:1). ಪ್ರಕೃತಿಯ ಸೌಂದರ್ಯವನ್ನು ನೋಡುವಾಗಲೆಲ್ಲಾ ನಮ್ಮ ಹೃದಯವು ಸಂತೋಷದಿಂದ ಕರ್ತನನ್ನು ಸ್ತುತಿಸುತ್ತೇವೆ. ಆತನ ಸೃಷ್ಟಿಯೆಲ್ಲವೂ ಆತನನ್ನು ಅಂಟಿಕೊಂಡಿರುವುದು. ನಾವೂ ಕರ್ತನನ್ನು ಸ್ತುತಿಸೋಣ. ಆತನಲ್ಲಿ ನೆಲೆಗೊಂಡಿರೋಣ. "ದೇವರು ನಿನಗೆ ಆಕಾಶದ ಮಂಜನ್ನೂ ಸಾರವುಳ್ಳ ಭೂಮಿಯನ್ನೂ ಕೊಟ್ಟು ಧವಸ ಧಾನ್ಯಗಳನ್ನೂ ದ್ರಾಕ್ಷಾಸರವನ್ನೂ ನಿನಗೆ ಹೇರಳವಾಗಿ ಅನುಗ್ರಹಿಸಲಿ" (ಆದಿ 27:28).**

## ಪ್ರಾರ್ಥಿಸಿರಿ

1. **ಹೊಸ ವರುಷವು ಎಲ್ಲಾರಿಗೆ ಹರ್ಷದಾಯಕವಾಗಿರಲಿ ಎಂದು ಹಾರೈಸೋಣ.**
2. **ಜನರ ಎಲ್ಲಾ ಅಗತ್ಯತೆಗಳು ಸಂಧಿಸಲ್ಪಟ್ಟು ದೇಶದಲ್ಲಿ ಶಾಂತಿ ಸಮಾಧಾನ ನೆಲೆಸಲಿ ಎಂದು ಕರ್ತನನ್ನು ಬೇಡಿಕೊಳ್ಳೋಣ.**
3. **ಒಳ್ಳೇಯ ವಾತಾವರಣಕ್ಕಾಗಿ ಸಕಾಲಕ್ಕೆ ಮಳೆ ಬೆಳೆಗಾಗಿ, ಸಮೃಧಿಗಾಗಿ ಕರ್ತನನ್ನು ಬೇಡಿಕೊಳ್ಳೋಣ.**
4. **ಎಲ್ಲಾ ಕ್ರೈಸ್ತ ಸೇವಾ ಸಂಸ್ಥೆಗಳೂ ನಿಷ್ಠೆಯಿಂದ ಸೇವೆ ಸಲ್ಲಿಸುವಂತೆ ಬೇಡಿಕೊಳ್ಳೋಣ.**
5. **ದೇಶದ ನಾಯಕರುಗಳಿಗಾಗಿ ಉತ್ತಮ ಆಡಳಿತಕ್ಕಾಗಿ, ಸುರಕ್ಷತೆಗಾಗಿ ಪ್ರಾರ್ಥಿಸೋಣ.**
6. **ಕರ್ನಾಟಕ ರಾಜ್ಯದ 30 ಜಿಲ್ಲೆಗಳ ಹೇಸರನು ಹೇಳಿ, ಮುಂಬರಲಿರುವ ಚುನಾವಣೆಗಾಗಿ ಪ್ರಾರ್ಥಿಸೋಣ.**

### ವಾಚಕರ ಗಮನಕ್ಕೆ ತಪ್ಪಿದ್ದರೆ ದಯಮಾಡಿ ನಮಗೆ ತಿಳಿಸಿರಿ.

ನಿಮ್ಮ ವಿಳಾಸವು ಸ್ಪಷ್ಟವಾಗಿ ಇದೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಿ ಹಾಗೂ ಮುಖ್ಯವಾಗಿ **ಪಿನ್‌ಕೋಡ್** ಸಂಖ್ಯೆ (Pincode) ಸರಿಯಾಗಿ ಇರಬೇಕು. **ಒಂದು ವೇಳೆ ತಪ್ಪಿದ್ದರೆ ದಯಮಾಡಿ ನಮಗೆ ತಿಳಿಸಿರಿ.** ಇದು ಅಂಚೆ ಇಲಾಖೆಯು ಸುಲಭವಾಗಿ ಕಾರ್ಯ ನಿರ್ವಹಿಸಲು ಅತೀ ಅವಶ್ಯ.



# ನಮ್ಮ ದೇಶದ ಸುದ್ದಿಗಳು
# (INDIA NEWS)

1. **ಮಹಿಳಾ ಶಕ್ತಿ ಕೇಂದ್ರಗಳ ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ :** ದೇಶದ ಅತ್ಯಂತ ಹಿಂದುಳಿದ 115 ಜಿಲ್ಲೆಗಳಲ್ಲಿ ಮಹಿಳಾ ಶಕ್ತಿ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಕೇಂದ್ರ ಹಣಕಾಸು ಸಚಿವರು 14 ಅಂಗನವಾಡಿ ಕೇಂದ್ರಗಳಲ್ಲಿ 'ಮಹಿಳಾ ಶಕ್ತಿ ಕೇಂದ್ರ' ಸ್ಥಾಪಿಸುವ ಬಗ್ಗೆ ಘೋಷಿಸಿದ್ದರು. ಇದಕ್ಕಾಗಿ ಪ್ರಸಕ್ತ ಬಜೆಟ್‌ನಲ್ಲಿ ರೂ.500 ಕೋಟಿ ನೀಡಿದ್ದರು ಎಂದು ತಿಳಿದು ಬಂದಿದೆ.
2. **ರೂ.80.18 ಕೋಟಿ ವೆಚ್ಚದ ಯೋಜನೆಗೆ ಅನುಮೋದನೆ :** ನಗರದಲ್ಲಿ ಬಿಎಂಟಿಸಿ ಮತ್ತು ಮೆಟ್ರೊ ಪ್ರಯಾಣಿಕರಿಗೆ ಬಾಡಿಗೆ ಆಧಾರದಲ್ಲಿ 'ಟ್ರಿಣ್ ಟ್ರಿಣ್ ಸೈಕಲ್' (ಪಬ್ಲಿಕ್ ಬೈಸಿಕಲ್ ಷೇರಿಂಗ್ ಸಿಸ್ಟಮ್) ಯೋಜನೆ ಜಾರಿಗೆ ಬರಲಿದೆ. ರೂ.80.18 ಕೋಟಿ ವೆಚ್ಚದ ಈ ಯೋಜನೆಗೆ ರಾಜ್ಯ ಸರ್ಕಾರ ಇತ್ತೀಚೆಗೆ ಅನುಮೋದನೆ ನೀಡಿದೆ. ಸಾರ್ವಜನಿಕರಿಗೆ ಬಾಡಿಗೆ ಆಧಾರದಲ್ಲಿ ಒದಗಿಸುವ ಯೋಜನೆಗೆ ಶೀಘ್ರಟೆಂಡರ್ ಆಹ್ವಾನಿಸಲು ಭೂಸಾರಿಗೆ ನಿರ್ದೇಶನಾಲಯ (ಡಿಯುಎಲ್‌ಟಿ) ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ತಿಳಿದು ಬಂದಿದೆ.
3. **ವಿಐಟಿಎಂನಲ್ಲಿ ನೂತನ ಬಾಹ್ಯಾಕಾಶ ತಂತ್ರಜ್ಞಾನ ಗ್ಯಾಲರಿ :** ರಾಕೆಟ್ ತಂತ್ರಜ್ಞಾನದ ಪಿತಾಮಹ ಎಂದೇ ಕರೆಯುವ ಹೈದರಾಲಿಯ ರಾಕೆಟ್‌ಗಳಿಂದ ಹಿಡಿದು ಈಗಿನ ಮಂಗಳಯಾನವರೆಗೆ ಬಾಹ್ಯಾಕಾಶದಲ್ಲಿನ ಭಾರತದ ಮೈಲಿಗಲ್ಲುಗಳ ಕುರಿತು ಒಂದೇ ವೇದಿಕೆಯಲ್ಲಿ ಕಾಣಬಹುದು. ಇದು ಸಾಧ್ಯವಾಗಿರುವುದು ನಗರದ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕಾ ವಸ್ತುಸಂಗ್ರಹಾಲಯದಲ್ಲಿ (ವಿಐಟಿಎಂ) ಹೊಸದಾಗಿ ರೂಪಿಸಲಾಗಿರುವ ಬಾಹ್ಯಾಕಾಶ ಗ್ಯಾಲರಿಯಲ್ಲಿ ಕಂಡು ಬಂದಿದೆ.
4. **ಚೇತರಿಕೆ ಹಾದಿಯಲ್ಲಿ ಆರ್ಥಿಕ ವೃದ್ಧಿ ದರ :** ಮಂದಗತಿಯಲ್ಲಿದ್ದ ಆರ್ಥಿಕ ವೃದ್ಧಿ ದರವು, ಪುಸಕ್ತ ಹಣಕಾಸು ವರ್ಷದ ದ್ವಿತೀಯ ತ್ರೈಮಾಸಿಕದಲ್ಲಿ ಚೇತರಿಕೆಯ ಹಾದಿಗೆ ಮರಳಿದೆ. ತಯಾರಿಕೆ ವಲಯದಲ್ಲಿನ ಚೇತರಿಕೆಯ ಫಲವಾಗಿ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಶೇ.6.3ರಷ್ಟು ದಾಖಲಾಗಿದೆ. ಮೊದಲ ತ್ರೈಮಾಸಿಕದಲ್ಲಿ ಶೇ 5.7ರಷ್ಟಾಗಿ ಮೂರು ವರ್ಷಗಳ ಕನಿಷ್ಠ ಮಟ್ಟಕ್ಕೆ ಕುಸಿದು ಆತಂಕ ಮೂಡಿಸಿತ್ತು. ಶೇ 6ಕ್ಕಿಂತ ಹೆಚ್ಚಿನ ಪ್ರಗತಿ ಕಂಡು ಬಂದಿದೆ ಎಂದು ತಿಳಿದು ಬಂದಿದೆ.
5. **ಎಚ್‌ಐವಿ ಸೋಂಕಿತರ ಸಂಖ್ಯೆ ಇಳಿಮುಖ :** ರಾಜ್ಯದಲ್ಲಿ ಎಚ್‌ಐವಿ ಸೋಂಕಿಗೆ ತುತ್ತಾಗುವ ಹೊಸಬರ ಸಂಖ್ಯೆ ಹಾಗೂ ಸಾವಿನ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದ್ದು, ಎಚ್‌ಐವಿ ಬಾಧಿತರಲ್ಲಿ ಭರವಸೆಯ ಹೊಂಬೆಳಕು ಮೂಡಿದೆ. ಮೂರು ವರ್ಷಗಳ ಹಿಂದೆ ದೇಶದಲ್ಲಿ ಹೆಚ್ಚು ಎಚ್‌ಐವಿ ಸೋಂಕಿತರನ್ನು ಹೊಂದಿರುವ ರಾಜ್ಯಗಳ ಪೈಕಿ ಐದನೇ ಸ್ಥಾನದಲ್ಲಿದ್ದ ಕರ್ನಾಟಕ ಇದೀಗ ಎಂಟನೇ ಸ್ಥಾನಕ್ಕೆ ಕುಸಿದಿದೆ ಎಂದು ತಿಳಿದು ಬಂದಿದೆ.





# ಹೊರ ದೇಶದ ಸುದ್ದಿಗಳು
# (FOREIGN NEWS)

1. **ರೊಬೋಟ್ ರಾಜಕಾರಣಿ :** ಜಗತ್ತಿನ ಮೊದಲ ಕೃತಕ ಬುದ್ಧಿಮತ್ತೆಯ ರೊಬೋಟ್ ರಾಜಕಾರಣಿಯನ್ನು ವಿಜ್ಞಾನಿಗಳು ಸೃಷ್ಟಿಸಿದ್ದಾರೆ. ಇದು ಶಿಕ್ಷಣ, ವಸತಿ, ವಲಸೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ನೀಡಲಿದೆ. "ಸ್ಯಾಮ್" ಹೆಸರಿನ ರೊಬೋಟ್ ಸಿದ್ಧಪಡಿಸಿರುವ ನ್ಯೂಜಿಲೆಂಡ್‌ನ ವಾಣಿಜ್ಯೋದ್ಯಮಿ ನಿಕ್ ಕ್ಯಾರಿಟ್‌ಸನ್ ಅವರು, 'ಸದ್ಯ ರಾಜಕೀಯದಲ್ಲಿ ಸಾಕಷ್ಟು ಪಕ್ಷಪಾತ ತುಂಬಿಕೊಂಡಿದೆ' ಎನ್ನುತ್ತಾರೆ.
2. **ರೂ.617 ಕೋಟಿ ಪಾವತಿ ಒಪ್ಪಂದ :** ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಗೋಪುರ ಧ್ವಂಸ ಪ್ರಕರಣ ಸಂಬಂಧ ಅಮೆರಿಕನ್ ಏರ್‌ಲೈನ್ಸ್ ಹಾಗೂ ಯುನೈಟೆಡ್ ಏರ್‌ಲೈನ್ಸ್ ಸಂಸ್ಥೆಗಳು ರೂ.617 ಕೋಟಿ (95 ಮಿಲಿಯನ್ ಡಾಲರ್) ಪಾವತಿಸುವ ಒಪ್ಪಂದಕ್ಕೆ ಬಂದಿದೆ. 13 ವರ್ಷಗಳ ಬಳಿಕ ಈ ವ್ಯಾಜ್ಯ ಕೊನೆ ಹಂತಕ್ಕೆ ಬಂದಿದೆ. ವಿಶ್ವ ವಾಣಿಜ್ಯ ಕೇಂದ್ರದ ಡೆವಲಪರ್ ಲ್ಯಾರಿ ಅವರಿಗೆ ವಿಮಾನಯಾನ ಸಂಸ್ಥೆಗಳ ಪರ ವಿಮಾ ಕಂಪೆನಿಗಳು ಪರಿಹಾರ ಪಾವತಿಸಲಿವೆ ಎಂದು ತಿಳಿದು ಬಂದಿದೆ.
3. **100 ನೇ ಸ್ಥಾನಕ್ಕೆ ಜಿಗಿದ ಭಾರತಕ್ಕೆ ಅಮೆರಿಕ ಅಭಿನಂದನೆ :** ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಉದ್ಯಮಸ್ನೇಹಿ ಪಟ್ಟಿಯಲ್ಲಿ ಭಾರತ 130ನೇ ಸ್ಥಾನದಿಂದ 100ನೇ ಸ್ಥಾನಕ್ಕೆ ಜಿಗಿತ ಕಂಡಿದ್ದಕ್ಕಾಗಿ ಅಮೆರಿಕ ಅಭಿನಂದನೆ ಸಲ್ಲಿಸಿದೆ. ಇದೊಂದು ಬಹುದೊಡ್ಡ ಸಾಧನೆ. ಜಾರಿಗೊಳಿಸಿರುವ ಹಲವು ಸುಧಾರಣ ಕ್ರಮಗಳು ಕಾರಣ ಎಂದು ಭಾರತ ಕುರಿತ ವ್ಯಾಪಾರ, ವಿದೇಶಿ ಕೃಷಿ ವ್ಯವಹಾರಗಳ ಯುಎಸ್‌ಡಿಎನ ಅಧೀನ ಕಾರ್ಯದರ್ಶಿ ಅಭಿಪ್ರಾಯಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ.
4. **ಹೈಡ್ರೋಜನ್ ಕಾರು ಶೀಘ್ರ ಬಳಕೆಗೆ :** ಹೇರಳವಾಗಿ ಲಭ್ಯವಿರುವ ನಿಕ್ಕಲ್, ಕಬ್ಬಿಣ ಹಾಗೂ ಕೋಬಾಲ್ಟ್ ನಂತಹ ಲೋಹಗಳನ್ನು ಬಳಸಿಕೊಂಡು ಹೈಡ್ರೋಜನ್ ಇಂಧನ ಉತ್ಪಾದಿಸುವ ಉಪಕರಣವೊಂದನ್ನು ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ್ದಾರೆ. ಇದು ಪರಿಸರ ಸ್ನೇಹಿ ಹೈಡ್ರೋಜನ್ ಚಾಲಿತ ಕಾರುಗಳನ್ನು ಬೃಹತ್ ಸಂಖ್ಯೆಯಲ್ಲಿ ರಸ್ತೆಗಿಳಿಸುವ ಕನಸಿಗೆ ರೆಕ್ಕೆ ಮೂಡಿಸಿದೆ.
5. **ಮಂಗಳನಲ್ಲಿ ಗುಮ್ಮಟದ ನಗರ :** ಭವಿಷ್ಯದಲ್ಲಿ ಮಂಗಳ ಗ್ರಹದಲ್ಲಿ ಸುಸ್ಥಿರ ನಗರ ನಿರ್ಮಾಣ ದತ್ತ ಗಮನ ನೀಡುವ ಸಲುವಾಗಿ ನಡೆಸಲಾದ 'ಮಾರ್ಸ್ ನಗರ ವಿನ್ಯಾಸ' ಸ್ಪರ್ಧೆಯಲ್ಲಿ ಮೆಸಾಚುಸೆಟ್ಸ್ ಇನ್‌ಸ್ಟಿ ಟ್ಯೂಟ್ ಆಫ್ ಟೆಕ್ನಾಲಜಿಯ (ಎಂಐಟಿ) ಎಂಜಿನಿಯರ್‌ಗಳು ಮತ್ತು ವಾಸ್ತುಶಿಲ್ಪಿಗಳ ತಂಡವು ಪ್ರಶಸ್ತಿ ಗೆದ್ದಿದೆ. 50 ಜನರ ವಾಸಕ್ಕೆ ಯೋಗ್ಯವಾಗುವಂಥ ಮರದ ಗುಮ್ಮಟ ವಿನ್ಯಾಸ ಮಾಡಿದ ಈ ಗುಮ್ಮಟವು ಮುಕ್ತವಾದ ಸ್ಥಳಾವಕಾಶ ಹೊಂದಿದ್ದು, ಸಸ್ಯಗಳು ಹಾಗೂ

**ಜನವರಿ 01** | **ಬೆಳಿಗ್ಗೆ : ಆದಿಕಾಂಡ 1,2,3** | **ಸಂಜೆ : ಮತ್ತಾಯ 1**

## ಪ್ರಕಾಶಮಯವಾದ ನೂತನ ವರುಷ!

**‘ಆತನನ್ನೇ ದೃಷ್ಟಿಸಿದವರು ಪ್ರಕಾಶವನ್ನು ಹೊಂದಿದರು ಅವರ ಮುಖವು ಲಜ್ಜೆಯಿಂದ ಕೆಡುವದೇ ಇಲ್ಲ’ (ಕೀರ್ತನೆ 34:5).**

"ಅನುದಿನದ ಆಹಾರ" ಕುಟುಂಬದವರಿಗೆ ನೂತನ ವರುಷದ ಶುಭಾಷಯಗಳು. ಕಳೆದ ವರುಷದಲ್ಲೆಲ್ಲಾ ಕರ್ತನು ನಿಮ್ಮನ್ನು ಆಶೀರ್ವದಿಸಿ ನಡೆಸಿದಂತೆ, ಈ ವರುಷವೂ ಆತನ ಕೃಪೆ, ಆಶೀರ್ವಾದ ನಿಮ್ಮೊಂದಿಗೆ ಇರಲೆಂದು ಹಾರೈಸುವವರಾಗಿರುವೆವು.

ಅರಸನೂ, ಕೀರ್ತನೆಗಾರನೂ ಆದಂಥ ದಾವೀದನು, ಜೀವನದಲ್ಲಿ ಪ್ರಕಾಶಿಸುವದು ಹೇಗೆ? ಎಂಬ ಆಳವಾದ ರಹಸ್ಯವನ್ನು ಕೀರ್ತನೆ ಮೂವತ್ತನಾಲ್ಕನೇ ಅಧ್ಯಾಯದಲ್ಲಿ ಹೀಗೆ ಬರೆದಿರುವನು –"ಆತನನ್ನೇ ದೃಷ್ಟಿಸಿದವರು ಪ್ರಕಾಶವನ್ನು ಹೊಂದಿದರು ಎಂದು. ಈ ವರುಷ ಪೂರ್ತಿ ನೀವು ದೇವರನ್ನೇ ದೃಷ್ಟಿಸಿ ನೋಡುವಿರಾದರೆ, ಪ್ರತಿದಿನವೂ, ಆತನು ನಿಮಗೆ ತನ್ನ ಪ್ರಕಾಶವನ್ನು ಬೆಳಕನ್ನು ನೀಡುವನು. ಸೂರ್ಯಕಾಂತಿ ಹೂವನ್ನು ನೋಡಿರಿ, ಅದು ಹೊತ್ತಾರೆಯಲ್ಲಿ ಸೂರ್ಯನಿಗೆ ಅಭಿಮುಖವಾಗಿ ತಿರುಗಿರುತ್ತದೆ. ಸೂರ್ಯನು ಆಕಾಶದಲ್ಲಿ ಪ್ರಯಾಣಿಸಿದಂತೆಲ್ಲಾ ಅದರ ಅಭಿಮುಖವಾಗಿಯೇ ಅದೂ ತಿರುಗುತ್ತಾ ಹೋಗುತ್ತದೆ. ಹಾಗೆಯೇ ಚಂದ್ರನಿಗೆ ತನ್ನದೇ ಆದ ಬೆಳಕಿಲ್ಲದಿದ್ದರೂ, ಇರುಳಿನಲ್ಲಿ ಸೂರ್ಯನ ಕಾಂತಿಯನ್ನು ತನ್ನಲ್ಲಿ ಪ್ರತಿಬಿಂಬಿಸಿ ಬೆಳಕು ಚೆಲ್ಲುತ್ತದೆ. ಅದರಂತೆಯೇ ಕರ್ತನ ಮಕ್ಕಳಾದ ನೀವು, ನಿಮ್ಮ ಜೀವಿತದ ಪ್ರತಿ ಹೆಜ್ಜೆಯಲ್ಲಿಯೂ, ಅಂದರೆ ನಿಮ್ಮ ಮಾತುಗಳಲ್ಲಿ ಆಲೋಚನೆಗಳಲ್ಲಿ ನಿರ್ಧಾರಗಳಲ್ಲಿ, ಕರ್ತನ ಆಜ್ಞೆಗಳ ಕಡೆಗೆ, ವಾಕ್ಯಗಳ ಕಡೆಗೆ ನಿಮ್ಮ ದೃಷ್ಟಿಯನ್ನು ಹರಿಸುವಿರಾದರೆ, ಯಾವದೇ ಸಂದರ್ಭಗಳಲ್ಲು, ನೀವು ಲಜ್ಜೆಗೆ ಒಳಗಾಗುವದಿಲ್ಲ. ಕರ್ತನು ನಿಮ್ಮನ್ನು ತಲೆಎತ್ತಿ ನಡೆಯುವಂತೆ ಮಾಡುವನು. ಶತ್ರುಗಳನ್ನು ಮಿತ್ರರನನ್ನಾಗಿ ಮಾರ್ಪಡಿಸುವನು.

ಭಕ್ತನಾದ ಮೋಶೆ, ಸೀನಾಯ್ ಬೆಟ್ಟದಲ್ಲಿ ನಾಲ್ವತ್ತು ದಿನಗಳು ಕರ್ತನ ಮುಖವನ್ನೇ ನೋಡುತ್ತಿದ್ದನು. ಇದರಿಂದ ಅವನ ಮುಖ ಪ್ರಕಾಶಗೊಂಡಿತು. ಮೋಶೆ ಆಜ್ಞಾಶಾಸನಗಳಾದ ಕಲ್ಲಿನ ಹಲಗೆಗಳನ್ನು ತೆಗೆದುಕೊಂಡು ಬೆಟ್ಟವನ್ನು ಇಳಿದು ಬಂದಾಗ, ಅವನ ಮುಖ ಪ್ರಕಾಶವಾಗಿತ್ತು. ಆರೋನನೂ ಇಸ್ರಾಯೇಲ್ಯರು, ಅವನ ಹತ್ತಿರಕ್ಕೆ ಬರುವದಕ್ಕೆ ಭಯಪಟ್ಟರು (ವಿಮೋ 34:29,30). ಮೋಶೆ ಕರ್ತನ ಮುಖವನ್ನೇ ನೋಡುತ್ತಾ, ಆತನೊಂದಿಗೆ ಮಾತಾಡುತ್ತಿದ್ದದರಿಂದ. ಅವನ ಮುಖವು ಪ್ರಕಾಶದಿಂದ ತುಂಬಿತ್ತು.

ದೇವಮಕ್ಕಳೇ, ನೀವು ನಿಮ್ಮ ದಿನ ನಿತ್ಯದ ಜೀವಿತದಲ್ಲಿ ಕರ್ತನ ವಾಕ್ಯಗಳ ಕಡೆಗೆ ನಿಮ್ಮ ಗಮನ ಹರಿಸುತ್ತಾ, ಆತನ ಆಜ್ಞೆಗಳಿಗೆ ವಿಧೇಯರಾಗಿ ನಡೆಯುವಿರಾದರೆ, ನಿಮ್ಮ ಮುಖ ಪ್ರಕಾಶವನ್ನು ಹೊಂದಿ, ಜಯಶಾಲಿಗಳಾಗಿ ಮುಂದೆ ಸಾಗುವಿರಿ.

**ನೆನಪಿಗೆ : ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು (2ಕೊರಿ 4:6).**



**ಜನವರಿ 02** | **ಬೆಳಿಗ್ಗೆ : ಆದಿ 4,5,6** | **ಸಂಜೆ : ಮತ್ತಾಯ 2**

## ಏಳು ಪ್ರಕಾಶಿಸು!

**‘ಏಳು ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ’ (ಯೆಶಾ 60:1).**

ಈ ವರುಷ ನಿಮಗೆ ಪ್ರಕಾಶಮಯವಾದ ವರುಷ ಮಾತ್ರವಲ್ಲ, ನೀವು ಎದ್ದು ಪ್ರಕಾಶಿಸುವ ವರುಷವಾಗಿದೆ. ಏಳು ಪ್ರಕಾಶಿಸು ಎಂದು ಕರ್ತನು ಹೇಳುವಾಗಲೇ, ಇರುಳಿನ ಆಧಿಪತ್ಯಗಳನ್ನು ಕುರಿತು, "ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ" (ಯೆಶಾ 60:2) ಎಂದು ಎಚ್ಚರಿಕೆ ನೀಡುತ್ತಾನೆ. ಸುವಾರ್ತೆಯ ಬಾಗಿಲುಗಳು ಕೃಪೆಯ ಬಾಗಿಲುಗಳು, ದೇಶದಲ್ಲಿ ಮುಚ್ಚಲ್ಪಡುವ ವೇಳೆ ಸಮೀಪಿಸುತ್ತಿರುವದು. ನೀವು ಕರ್ತನಿಗಾಗಿ ಎದ್ದು ಪ್ರಕಾಶಿಸಬೇಕಾದರೆ, ಇದುವೇ ಕರ್ತನು ನೀಡಿರುವ ಸುಸಮಯವಾಗಿದೆ. ನಿಮ್ಮ ಕುರಿತಾದ ದೇವರ ಉದ್ದೇಶ ನೆರವೇರುವ ವೇಳೆ ಸಮೀಪಿಸಿರುವದು.

ಮಾರ್ಟಿನ್ ಲೂಥರನ ದಿನಗಳಲ್ಲಿ ಕ್ರೈಸ್ತ ಸಮುದಾಯವನ್ನು ಕಾರಿರುಳು ಆವರಿಸಿತ್ತು. ಕ್ರಿಸ್ತನಿಗೂ, ಮರಿಯಳಿಗೂ ಸಂತರಿಗೂ, ವಿಗ್ರಹಗಳನ್ನು ಮಾಡಿ ನಮಸ್ಕರಿಸುತ್ತಾ ಬಂದರು. ಆದುದರಿಂದ ಲೂಥರ್, ಸತ್ಯವೇದವನ್ನು ಭಾಷಾಂತರಿಸಿ, ಸತ್ಯವನ್ನು ಜನರಿಗೆ ಪ್ರಕಟಿಸಿದನು. ಕತ್ತಲೆಯಲ್ಲಿ ಪ್ರಕಾಶಿಸುವ ಬೆಳಕಾದನು. ಈ ಪ್ರಪಂಚದಲ್ಲಿ ಸಾವಿರಾರು ಧರ್ಮಗಳಿದ್ದರೂ. ಆತ್ಮದಲ್ಲಿ ಬೆಳಕು ಮೂಡಿಸುವ ಮಾರ್ಗ ಒಂದಾದರೂ ಇಲ್ಲ. ಆದರೆ ಯೇಸುಕ್ರಿಸ್ತನು _ "ನಾನೇ ಲೋಕಕ್ಕೆ ಬೆಳಕು, ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು" (ಯೋಹಾ 8:12) ಎಂದು ಹೇಳಿರುವನು. ನೀವೂ ಲೋಕಕ್ಕೆ ಬೆಳಕಾಗಿದ್ದೀರಿ ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು (ಮತ್ತಾ 5:14) ಎಂದು ದೇವರ ವಾಕ್ಯ ಹೇಳುತ್ತದೆ.

ಇಂದು ಸಮಾಜದಲ್ಲಿ ಇರುಳಿನ ಆಧಿಪತ್ಯ ಎಲ್ಲಿ ನೋಡಿದರೂ ತಾಂಡವವಾಡುತ್ತಿರುವದು. ಧರ್ಮದ ಹೆಸರಿನಲ್ಲಿ ಭಾಷೆಯ ಹೆಸರಿನಲ್ಲಿ ಒಂದು ಕಡೆ ಅಧರ್ಮ ಸ್ವರೂಪನಾದ ಸೈತಾನನು, ಜನರ ಮಧ್ಯೆ ವೈಷಮ್ಯವನ್ನು ಬಿತ್ತುತ್ತಾ ತನ್ನ ಸಾಮ್ರಾಜ್ಯವನ್ನು ಅಡೆತಡೆ ಇಲ್ಲದೆ ಸ್ಥಾಪಿಸುತ್ತಿರುವದಾದರೆ, ಮತ್ತೊಂದೆಡೆ ಕ್ರಿಸ್ತನ ಬರೋಣದ ಸೂಚನೆಗಳೂ ಕಂಡು ಬರುತ್ತಿರುವದು.

ದೇವಮಕ್ಕಳೇ, ನೀವು ಎದ್ದು ಪ್ರಕಾಶಿಸುವ ಸಮಯ ಇದುವೇ. ಕರ್ತನಿಗಾಗಿ ವೈರಾಗ್ಯವಾಗಿ ಎದ್ದು ಸುವಾರ್ತಾ ಸೇವೆಯನ್ನು ಚುರುಕುಗೊಳಿಸಿರಿ. ನಾಳೆ ಕ್ರಿಸ್ತನು ಬಂದಾಗ, ನಿನ್ನ ಭ್ರಾತ ಎಲ್ಲಿಗೋದ ಎಂದು ಕೇಳುವ ಪ್ರಶ್ನೆಗೆ ಉತ್ತರ ನೀಡಬೇಕಲ್ಲವೇ?.

**ನೆನಪಿಗೆ : ‘ಜ್ಞಾನಿಗಳು ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರು ಬಹು ಜನರನ್ನು ಸದ್ಧರ್ಮಿಗಳನ್ನಾಗಿ ಮಾಡುವವರು ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು’ (ದಾನಿ 12:3).**

**ಜನವರಿ 03** | **ಪ್ರಕಾಶಿಸುವದರ ರಹಸ್ಯ!** | ಬೆಳಿಗ್ಗೆ : ಆದಿ 7,8,9 | ಸಂಜೆ : ಮತ್ತಾಯ 3

## ಪ್ರಕಾಶಿಸುವದರ ರಹಸ್ಯ!

**‘ಅವರ ಕಣ್ಣ ಮುಂದೆ ಆತನ ರೂಪ ಬೇರೆಯಾಯಿತು. ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು. ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು’ (ಮತ್ತಾ 17:2).**

ಯೇಸುಕ್ರಿಸ್ತನು ಪೇತ್ರ, ಯಾಕೋಬ, ಯೋಹಾನರನ್ನು ಕರೆದುಕೊಂಡು ಬೆಟ್ಟದ ಮೇಲೆ ಪ್ರಾರ್ಥಿಸಿದಾಗ, ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು ಎಂದು ಸತ್ಯವೇದ ಹೇಳುತ್ತದೆ. ಒಬ್ಬನು ಎದ್ದು ಪ್ರಕಾಶಿಸಬೇಕಾದರೆ ಪ್ರಾರ್ಥನೆ ಬಹಳ ಮುಖ್ಯವಾದದ್ದು. ಯೇಸುಕ್ರಿಸ್ತನಿಗೆ ಪ್ರಾರ್ಥನೆಯೇ ಆತನ ಉಸಿರಾಗಿತ್ತು. ತಂದೆ ದೇವರೊಂದಿಗೆ ಸಂಭಾಷಿಸಬೇಕೆಂಬ ದಾಹ ಆತನಲ್ಲಿ ಅಧಿಕವಾಗಿತ್ತು. ಹೊತ್ತಾರೆ ವೇಳೆಯಲ್ಲಿ, ಇರುಳಿನಲ್ಲಿ, ಪ್ರಾರ್ಥನೆಯಲ್ಲೇ ತನ್ನ ಸಮಯವನ್ನು ಕಳೆಯುವದು ಆತನ ದಿನ ನಿತ್ಯದ ಪರಿಪಾಠವಾಗಿತ್ತು.

ಒಬ್ಬ ಮನುಷ್ಯನ ಪ್ರಾರ್ಥನಾ ಜೀವಿತ, ಅವನ ಆಂತರ್ಯವನ್ನು ಪ್ರಕಾಶಗೊಳಿಸುವದು. ಎರಡನೆಯದಾಗಿ ಅವನ ಕುಟುಂಬವನ್ನು ಪ್ರಕಾಶಗೊಳಿಸುವದು ಮೂರನೆಯದಾಗಿ, ಅವನ ಸೇವೆಯನ್ನು ಪ್ರಕಾಶಗೊಳಿಸುವದು. "ಯೇಸುಕ್ರಿಸ್ತನು ಪ್ರಾರ್ಥಿಸುತ್ತಿರಲು ಆತನ ಮುಖಭಾವವು ಬೇರೆಯಾಯಿತು (ಲೂಕ 9:29). "ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡು ದಡಕ್ಕೆ ಬರಲು ಆಕಾಶವು ತೆರೆಯಲ್ಪಟ್ಟಿತು" (ಮತ್ತಾ 3:16). ಗೆತ್ಸೇಮನೆತೋಟದಲ್ಲಿ ಪ್ರಾರ್ಥಿಸುತ್ತಿದ್ದಾಗ ದೇವದೂತನು ಇಳಿದು ಬಂದು ಆತನನ್ನು ಬಲಪಡಿಸಿದನು (ಲೂಕ 22:43) ಎಂದು ಸತ್ಯವೇದ ಹೇಳುತ್ತದೆ. ಯೇಸುಕ್ರಿಸ್ತನು ರಾತ್ರಿಯೆಲ್ಲಾ ಪ್ರಾರ್ಥಿಸಿ ತನಗಾಗಿ ಶಿಷ್ಯರನ್ನು ಆರಿಸಿಕೊಂಡನು. ಪ್ರಾರ್ಥನೆ ಮಾಡಿ ಐದು ರೊಟ್ಟಿ ಎರಡು ಮೀನುಗಳನ್ನು ಐದು ಸಾವಿರ ಜನರಿಗೆ ಉಣಬಡಿಸಿದನು.

ಪ್ರಾರ್ಥನೆಯ ಮೂಲಕ ಕೊರಿಯಾ ದೇಶದಲ್ಲಿರುವ ಬೋಧಕರಾದ ಪಾಲ್ ಯಾಂಗಿ ಚೋರವರ ಸಭೆಯಲ್ಲಿ ದೊಡ್ಡ ಉಜ್ಜೀವನವೇ ಉಂಟಾಯಿತು. ಇಂದು ಲಕ್ಷಕ್ಕೂ ಮೀರಿ ಸಭೆ ಬೆಳೆದಿರುವದು. ಜಾನ್ ವೆಸ್ಲಿ ಎಂಬ ಭಕ್ತರು ಎದ್ದು ಪ್ರಕಾಶಿಸಿದ್ದರ ಮುಖ್ಯಕಾರಣ, ಆತನ ಪ್ರಾರ್ಥನಾ ಜೀವಿತ. ಅವರು ಸುವಾರ್ತಾ ಕೂಟಗಳಲ್ಲಿ ಮಾತಾಡುವದಕ್ಕೆ ಹೋಗುವ ಮೊದಲು ಎರಡು ಮೂರು ದಿನಗಳು, ತನ್ನ ಕೋಣೆಯಲ್ಲಿ ಏಕಾಂತವಾಗಿ ಪ್ರಾರ್ಥಿಸುವರು, ಆಗ ಆತನ ಒಂದೊಂದು ಮಾತುಗಳು ಅಗ್ನಿಬಾಣಗಳಂತೆ ಕೇಳುವವರ ಹೃದಯಗಳಲ್ಲಿ ತೂರಿಹೋಗಿ ಜನರು ಕರ್ತನಿಗೆ ತಮ್ಮನ್ನು ಒಪ್ಪಿಸಿಕೊಡುತ್ತಿದ್ದರು.

ದೇವಮಕ್ಕಳೇ, ಕರ್ತನಿಗಾಗಿ ಎದ್ದು ಪ್ರಕಾಶಿಸಬೇಕಾ? ಕೆಡುಕನ ಬಾಣಗಳನ್ನು ಎದುರಿಸಿ ನಿಲ್ಲಬೇಕಾ? ಆತ್ಮೀಕವಾಗಿ ಲೌಕೀಕವಾಗಿ ಆಶೀರ್ವಾದ ಹೊಂದಲು ಆತ್ಮನ ವರಗಳನ್ನು ಪಡೆಯಲು ಪವಿತ್ರಾತ್ಮನ ಅಭಿಷೇಕವನ್ನು ಹೊಂದಿ ಜಯಭರಿತ ಜೀವನವನ್ನು ಸಾಗಿಸಲು ನಿಮ್ಮ ಪ್ರಾರ್ಥನಾ ಸಮಯವನ್ನು ಅಧಿಕಗೊಳಿಸಿರಿ.

**ನೆನಪಿಗೆ : ‘ಕತ್ತಲಲ್ಲಿ ಸಂಚರಿಸಿದ ಜನರಿಗೆ ದೊಡ್ಡ ಬೆಳಕು ಕಾಣಿಸಿತು ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಪ್ರಕಾಶವು ಹೊಳೆಯಿತು’ (ಯೆಶಾ 9:2).**



**ಜನವರಿ 04** | **ದೇವಪ್ರಸನ್ನತೆಯಿಂದ ಪ್ರಕಾಶ!** | ಬೆಳಿಗ್ಗೆ : ಆದಿ 10,11,12 | ಸಂಜೆ : ಮತ್ತಾಯ 4

## ದೇವಪ್ರಸನ್ನತೆಯಿಂದ ಪ್ರಕಾಶ!

**‘ಮೋಶೆ ಆಜ್ಞಾಶಾಸನಗಳಾದ ಆ ಎರಡು ಕಲ್ಲಿನ ಹಲಿಗೆಗಳನ್ನು ಕೈಯಲ್ಲಿ ಹಿಡಿದುಕೊಂಡು ಸೀನಾಯಿಬೆಟ್ಟದಿಂದ ಇಳಿದು ಬಂದಾಗ, ಅವನು ಯೆಹೋವನ ಸಂಗಡ ಸಂಭಾಷಿಸಿದ್ದರಿಂದ, ಅವನ ಮುಖವು ಪ್ರಕಾಶಮಾನವಾಗಿತ್ತು’ (ವಿಮೋ 34:29).**

ಸೇವೆಗಾಗಿ ಹಲವು ಸ್ಥಳಗಳನ್ನು, ಮನೆಗಳನ್ನು ಸಂಧಿಸುವದಕ್ಕಿಂತ, ಕರ್ತನೊಂದಿಗೆ ಪ್ರಾರ್ಥನೆಯಲ್ಲಿ ಒಂಟಿಯಾಗಿದ್ದು ಸಂಭಾಷಿಸುವದು ಒಳ್ಳೆಯದು. ಒಬ್ಬ ಸ್ನೇಹಿತನೊಡನೆ ಮಾತಾಡುವಂತೆ ಕರ್ತನು ಮೋಶೆಯೊಂದಿಗೆ ಮಾತಾಡುತ್ತಿದ್ದನು (ವಿಮೋ 33:11).

ದೇವರೊಂದಿಗೆ ಮುಖಾಮುಖಿಯಾಗಿ ಮಾತಾಡಿದ್ದರಿಂದ ಮೋಶೆಯ ಮುಖ ಪ್ರಕಾಶಗೊಂಡಿತ್ತು. ಇಸ್ರಾಯೇಲ್ಯರು ಅವನೊಂದಿಗೆ ಮಾತಾಡಲು, ಅವನ ಹತ್ತಿರಕ್ಕೆ ಬರಲು ಹೆದರಿದರು. ಹೌದು ನಿಜವಾಗಿಯು, ದೇವರ ಸಮ್ಮುಖ, ಆತನ ಪ್ರಸನ್ನತೆ, ನಿಮ್ಮ ಆಂತರ್ಯವನ್ನು ಪರವಶಗೊಳಿಸುವದು, ಮುದಗೊಳಿಸುವದು, ನಿಮ್ಮೊಳಗೆ ಧೈರ್ಯವನ್ನು, ಬಲವನ್ನು ಉಂಟುಮಾಡುವದು. ನಿಮ್ಮ ಶಾರೀರಿಕ ಸ್ವಭಾವಗಳು ನೀಗಿ, ದೈವೀಕಸ್ವಭಾವಗಳನ್ನು, ಧರಿಸಿ ಯೇಸುಕ್ರಿಸ್ತನಂತೆ ಮಾರ್ಪಡುವಿರಿ.

ಬೋಧಕರಾದ ಪಾಲ್ ಯಾಂಗಿ ಚೋರವರು. ತಮ್ಮ ಸಭೆಗೆ ಅಧಿಕವಾದ ಆತ್ಮಗಳ ಆದಾಯಕ್ಕಾಗಿ ದಿನವೆಲ್ಲಾ ಮನೆಗಳನ್ನು ಸಂಧಿಸುತ್ತಿದ್ದರು. ಒಂದು ದಿನ ಕರ್ತನು – "ಅರಣ್ಯದಲ್ಲಿ ಇಸ್ರಾಯೇಲ್ಯರು, ಲಾವಕ್ಕಿಗಳನ್ನು ಹಿಡಿಯಲು ದಿನವೆಲ್ಲಾ ಓಡಾಡಿದ್ದರೂ, ಎಷ್ಟು ಮಾತ್ರ ಲಾವಕ್ಕಿಗಳನ್ನು ಹಿಡಿಯಲು ಸಾಧ್ಯವಾಗುತ್ತಿತ್ತು? ಆದರೆ ಅವರು ನನ್ನ ಸಮುಖ್ಮದಲ್ಲಿ ಕುಳಿತಾಗ, ಲಾವಕ್ಕಿಗಳು ಪಾಳಯದಲೆಲ್ಲಾ ತುಂಬಿಹೋಗುವಷ್ಟು ಸುರಿಸಿದೆನು ನೀನು ಆತ್ಮಗಳನ್ನು ಹುಡುಕಿ ಓಡಿದರೆ, ನೀನು ಆತ್ಮ ಆದಾಯ ಮಾಡಲಾರೆ. ನನ್ನ ಪಾದದಲ್ಲಿ ಕುಳಿತಿದ್ದು, ಪ್ರಾರ್ಥಿಸು, ನಿನ್ನನ್ನು ಅಗ್ನಿಯಿಂದಲೂ, ಆತ್ಮನಿಂದಲೂ ತುಂಬಿಕೊಳ್ಳುವಿಯಾದರೆ, ನಿನ್ನ ಸಭೆಯಲ್ಲಿ ಜನರು ಓಡಿಬಂದು ತುಂಬುವರು. ನಾನು ನಿನಗೆ ಸಹಾಯ ಮಾಡುವೆನು" ಎಂದು ಹೇಳಿದನು. ಅಂದಿನಿಂದ ಪಾಲ್ ಯಾಂಗಿ ಚೋ, ತಮ್ಮ ಪ್ರಾರ್ಥನಾ ಸಮಯವನ್ನು; ಅಧಿಕಗೊಳಿಸಿದರು. ಹೇರಳವಾದ ಆತ್ಮಗಳು ಸಭೆಗೆ ಬಂದು ಸೇರಿದವು.

ದೇವಜನರೇ, ಇಂದು ನಿಮ್ಮ ಪ್ರಾರ್ಥನಾ ಜೀವಿತದ ಕುರಿತು ಒಮ್ಮೆ ಅವಲೋಕಿಸಿ ನೋಡಿರಿ. ಕಷ್ಟಗಳಾ? ಚಿಂತೆಗಳಾ? ವ್ಯಾಧಿಯಾ? ಕಳವಳಗೊಳ್ಳದಿರಿ. ನಿಮ್ಮ ಪ್ರಾರ್ಥನಾ ಸಮಯವನ್ನು ಅಧಿಕಗೊಳಿಸಿರಿ. ಕರ್ತನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ. ಆತನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ (ಕೀರ್ತ 16:11 ). ಆತನ ಸಾನ್ನಿಧ್ಯವನ್ನು ಅಧಿಕವಾಗಿ ಬಯಸಿರಿ. ಆತನ ಪ್ರಸನ್ನತೆ ನಿಮ್ಮನ್ನು ಆವರಿಸಿಕೊಳ್ಳುವಾಗ ನಿಮ್ಮ ಬಲಹೀನತೆಗಳೆಲ್ಲಾ ಮಾರ್ಪಟ್ಟು. ಆತನ ಬೆಳಕಿನಲ್ಲಿ ನಿಮ್ಮ ಜೀವಿತ ಪ್ರಕಾಶಿಸುವದು.

**ನೆನಪಿಗೆ : ‘ಚಂದ್ರನಂತೆ ಸೌಮ್ಯಳು, ಸೂರ್ಯನಂತೆ ಶುಭ್ರಳು, ಪತಾಕಿನಿಯಂತೆ ಭಯಂಕರಳು ಆಗಿರುವ ಇವಳಾರು?’ (ಪ.ಗೀ 6:10).**

**ಜನವರಿ 05**

## ಕರೆಯಲ್ಲಿ ಪ್ರಕಾಶ!

**ಬೆಳಿಗ್ಗೆ : ಆದಿ 13,14,15**
**ಸಂಜೆ : ಮತ್ತಾ 5:1–26**

**'ಯೋಹಾನನು ಉರಿಯುವ ದೀಪದೋಪಾದಿಯಲ್ಲಿ ಪ್ರಕಾಶಿಸಿದನು. ಅವನು ಕೊಡುವ ಬೆಳಕಿನಲ್ಲಿ ಸ್ವಲ್ಪಕಾಲ ವಿನೋದಗೊಳ್ಳುವದಕ್ಕೆ ಮನಸ್ಸುಮಾಡಿದಿರಿ' (ಯೋಹಾನ 5:35).**

ಸ್ನಾನಿಕನಾದ ಯೋಹಾನನು, ತನ್ನ ಕರೆಯಲ್ಲಿ ದೃಢವಾಗಿದ್ದನು ಮತ್ತು ಕರ್ತನಿಗಾಗಿ ಎದ್ದು ಪ್ರಕಾಶಿಸಿದನು. ಅವನ ಬಳಿಗೆ ಬಂದವರೆಲ್ಲರೂ ತಾವು ಏನು ಮಾಡಬೇಕು? ತಮ್ಮ ಕುಂದು ಕೊರತೆಗಳು ನೀಗಲ್ಪಡಲು, ಯಾವ ಮಾರ್ಗ ಉಂಟೆಂದು ಕೇಳುತ್ತಿದ್ದರು. ಜನರು ತಮ್ಮ ತಪ್ಪುದೋಷಗಳನ್ನು ಅರಿತುಕೊಳ್ಳುವ ರೀತಿಯಲ್ಲಿ ಆತನು ಸೇವೆ ಮಾಡಿದನು ಜನರ ತಪ್ಪುಗಳನ್ನು ಖಂಡಿಸಿ ಅವರಿಗೆ ತಿಳಿಯಪಡಿಸಿದನು.

ಆತನ ಕರೆಯುವಿಕೆ ಯಾವದಾಗಿತ್ತು? ದೊಡ್ಡ ದೊಡ್ಡ ಅದ್ಭುತಗಳನ್ನು ಮಾಡುವದಲ್ಲ, ದೊಡ್ಡ ಪ್ರವಾದಿಯಾಗಿ ಪ್ರಕಾಶಿಸುವದಲ್ಲ, ಕರ್ತನ ಕುರಿತಾಗಿ ಪುಸ್ತಕಗಳನ್ನು ಬರೆಯುವದಲ್ಲ, ಮಾನಸಾಂತರಪಟ್ಟ ಜನರಿಗೆ ನೀರಿನಿಂದ ದೀಕ್ಷಾಸ್ನಾನಕೊಡುವದಾಗಿತ್ತು. ಕ್ರಿಸ್ತನ ಮಾರ್ಗವನ್ನು ಸಿದ್ದ ಪಡಿಸುವದು, ಹಳ್ಳಕೊಳ್ಳಗಳನ್ನು ಮುಚ್ಚಿ ಸಮ ಮಾಡುವದು ಆತನ ಕರೆಯುವಿಕೆಯಾಗಿತ್ತು. ಆ ಕರೆಯಲ್ಲಿ ಯೋಹಾನನು ದೃಢವಾಗಿದ್ದನು. ಆತನು ತನ್ನನ್ನು ಲೋಕಕ್ಕೆ ಪ್ರಕಟಪಡಿಸಿಕೊಳ್ಳದೆ. ಕರ್ತನಲ್ಲಿ ತನ್ನನ್ನು ಮರೆಮಾಡಿಕೊಂಡನು. ಅರಣ್ಯದಲ್ಲಿ ಸಂಚರಿಸುತ್ತಾ ಮಿಡತೆಗಳನ್ನು, ಕಾಡುಜೇನನ್ನು ತನ್ನ ಆಹಾರವಾಗಿ ಸೇವಿಸುತ್ತಿದ್ದನು.

ಸ್ನಾನಿಕನಾದ ಯೋಹಾನನು ಯೇಸುಕ್ರಿಸ್ತನನ್ನು ಈ ಪ್ರಪಂಚಕ್ಕೆ ಎರಡು ವಿಧದಲ್ಲಿ ಪರಿಚಯಿಸಿದನು. ಮೊದಲನೆಯದು, ಲೋಕದ ಪಾಪವನ್ನು ನಿವಾರಣೆ ಮಾಡುವ ಯಜ್ಞದ ಕುರಿಮರಿ (ಯೋಹಾ 1:29). ಎರಡನೆಯದು, ಪವಿತ್ರಾತ್ಮನಿಂದಲೂ, ಅಗ್ನಿಯಿಂದಲೂ ದೀಕ್ಷಾಸ್ನಾನ ಕೊಡುವವನು (ಮತ್ತಾ 3:11). ಹೌದು, ಮೊದಲನೆಯದಾಗಿ ಆತನು ರಕ್ಷಕನು ಎರಡನೆಯದಾಗಿ, ಆತನು ಅಭಿಷೇಕನಾಥನು. ಸ್ನಾನಿಕನಾದ ಯೋಹಾನನು, ಕರ್ತನು ಎದ್ದು ಪ್ರಕಾಶಿಸಲು ಸ್ಥಳನೀಡಿ, ತನ್ನನ್ನು ಮರೆಮಾಡಿಕೊಂಡನು. ಅವನು ಪ್ರಕಾಶಿಸಲು ಮುಖ್ಯಕಾರಣ, ಅವನಲ್ಲಿದ್ದ ತಾಳ್ಮೆ, ಕ್ರಿಸ್ತನಿಗೆ ತಾನು ದೀಕ್ಷಾಸ್ನಾನ ಕೊಟ್ಟೆನೆಂದು ಹೆಮ್ಮೆಪಡಲಿಲ್ಲ ಕ್ರಿಸ್ತನ ಕೆರಗಳ ಭಾರನ್ನು ಬಿಚ್ಚಲೂ, ತಾನು ಅಯೋಗ್ಯನೆಂದು ತನ್ನನ್ನು ಭಾವಿಸಿಕೊಂಡನು. ಆದ್ದರಿಂದಲೇ, ಕ್ರಿಸ್ತನು ಅವನ ಕುರಿತು, ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವರು ಎದ್ದಿಲ್ಲ" (ಮತ್ತಾ 11:11) ಎಂದು ಸಾಕ್ಷಿಕೊಟ್ಟನು.

ದೇವಮಕ್ಕಳೇ ಇಂದು ನೀವು ಲೋಕದಲ್ಲಿ ಪ್ರಕಾಶಿಸಬೇಕಾ? ಕರ್ತನು ನಿಮಗೆ ನೀಡಿರುವ ಕರೆಯಲ್ಲಿ ದೃಢವಾಗಿ ನಿಲ್ಲಿರಿ ಕರ್ತನಲ್ಲಿ ನಿಮ್ಮನ್ನು ಮರೆಮಾಡಿಕೊಳ್ಳಿರಿ. ಆಗ ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಉನ್ನತಿಗೆ ತರುವನು.

**ನೆನಪಿಗೆ : 'ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದು... ದೀರ್ಘಶಾಂತಿಯಿಂದಲೂ ವಿನಯ ಸಾತ್ವಿಕತ್ವದಿಂದ ಕೂಡಿದವರಾಗಿ ಒಬ್ಬರನ್ನೊಬ್ಬರು ಪ್ರೀತಿಯಿಂದ ಸಹಿಸಿಕೊಳ್ಳಿರಿ' (ಎಫೆ 1:1–3).**



**ಜನವರಿ 06**

## ಪವಿತ್ರಾತ್ಮನಿಂದ ಪ್ರಕಾಶ!

**ಬೆಳಿಗ್ಗೆ : ಆದಿ 16,17**
**ಸಂಜೆ : ಮತ್ತಾ 5:27–48**

**'ಆಗ ಹಿರೀಸಭೆಯಲ್ಲಿ ಕೂತಿದ್ದವರೆಲ್ಲರೂ ಅವನನ್ನು ದೃಷ್ಟಿಸಿ ನೋಡಿ ಅವನ ಮುಖವು ದೇವದೂತನ ಮುಖದಂತೆ ಇರುವದನ್ನು ಕಂಡರು' (ಅ.ಕೃ 6:15).**

ಸ್ತೆಫನನನ್ನು ವಿಚಾರಣೆಗಾಗಿ ಹಿರೀಸಭೆಯ ಮುಂದೆ ನಿಲ್ಲಿಸಿದಾಗ, ಅವನ ಮುಖವು ದೇವದೂತನ ಮುಖದಂತೆ ಇರುವದನ್ನು, ಸಭೆಯಲ್ಲಿದ್ದವರು ಕಂಡರೆಂದು ದೇವರ ವಾಕ್ಯ ತಿಳಿಸುತ್ತದೆ. ಹೌದು ಅಂತರಂಗದಲ್ಲಿನ ಆತ್ಮೀಕ ಸೌಂದರ್ಯ ಮುಖದಲ್ಲಿ ಕಂಡುಬರುವದು. ಅಂತರ್ಯದಲ್ಲಿ ದೇವಪ್ರಸನ್ನತೆ ತುಂಬಿರುವದಾದರೆ, ಮುಖವು ನಿಶ್ಚಯವಾಗಿ ದೇವ ಪ್ರಸನ್ನತೆಯನ್ನು ಪ್ರಕಟಿಸುವದು.

ಸ್ತೆಫನನು ನಂಬಿಕೆಯಿಂದ ತುಂಬಿದವನೂ, ಪವಿತ್ರಾತ್ಮಭರಿತನೂ ಆಗಿದ್ದನೆಂದು ಅವನ ಕುರಿತು ಸತ್ಯವೇದ ಹೇಳುತ್ತದೆ (ಅ.ಕೃ 6:5,8). ಆದಕಾರಣ ಅವನು ಕರ್ತನಿಗಾಗಿ ಎದ್ದು ಪ್ರಕಾಶಿಸಿದನು. ಅವನ ಮುಖ ದೇವದೂತನ ಮುಖದಂತಿರುವದನ್ನು ಜನರು ಕಂಡರು. ಸರಿ, ದೇವದೂತನ ಮುಖ ಹೇಗಿರುವದು? ಸತ್ಯವೇದ ಹೇಳುತ್ತದೆ. ದೇವದೂತನ ಮುಖವು ಮಿಂಚಿನಂತೆ ಇತ್ತು. ಅವನ ಉಡುಪು ಹಿಮದಂತೆ ಬೆಳ್ಳಗಿತ್ತು" ಎಂದು (ಮತ್ತಾ 28:3,4). ದೇವ ಪ್ರಸನ್ನತೆಯಿಂದ ತುಂಬಿರುವವರ ಅಂತರ್ಯದಲ್ಲಿಯೂ ಮುಖದಲ್ಲಿಯೂ, ಕತ್ತಲೆ ಇರುವದಿಲ್ಲ. ಸೂರ್ಯನನ್ನು ಕಂಡ ಮಂಜಿನಂತೆ ಇರುಳು ಓಡಿಹೋಗುವದು. "ಆದ್ದರಿಂದ ನಿಮ್ಮನ್ನು ಪವಿತ್ರಾತ್ಮನಿಂದಲೂ ದೇವಬಲದಿಂದಲೂ ತುಂಬಿಕೊಳ್ಳಿರಿ. ಕರ್ತನ ಮಹಿಮೆ ನಿಮ್ಮ ಪಾತ್ರೆಯನ್ನು ತುಂಬಿ ಹೊರಸೂಸಲಿ. ನೀವು ಏನನ್ನು ಹೊಂದಿಕೊಂಡರೂ, ಹೊಂದಿಕೊಳ್ಳದೇ ಹೋದರೂ, ಪವಿತ್ರಾತ್ಮನನ್ನು ಖಂಡಿತವಾಗಿ ಹೊಂದಿಕೊಳ್ಳಿರಿ. ಪವಿತ್ರಾತ್ಮನ ಸಹಾಯವಿಲ್ಲದೆ ಈ ಲೋಕದಲ್ಲಿ ನಾವು ಏನನ್ನೂ ಸಾಧಿಸಲಾಗದು, ಎದ್ದು ಪ್ರಕಾಶಿಸಲೂ ಸಾಧ್ಯವಿಲ್ಲ. ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಿಂದಲೇ, ಎಂಬುದು ಸೇನಾಧೀಶ್ವರನಾದ ಯೆಹೋವನ ನುಡಿ" (ಜೆಕರ್ಯ 4:6).

19ನೇ ಶತಮಾನದಲ್ಲಿ ಸ್ಮಿತ್‌ವಿಗಲ್ಸ್‌ವರ್ತ್ ಎಂಬ ಭಕ್ತನು, ಅವಿದ್ಯಾವಂತನು ಕೊಳಾಯಿ ರಿಪೇರಿ ಮಾಡುವ ವೃತ್ತಿಯಲ್ಲಿದ್ದವನು. ದೇವರು ಆತನನ್ನು ತನ್ನ ಆತ್ಮನಿಂದ ಅಭಿಷೇಕಿಸಿದಾಗ ಮನೆಯಲ್ಲಿರುವಾಗಲೂ, ಕೆಲಸದಲ್ಲಿರುವಾಗಲೂ ಅನ್ಯಭಾಷೆ ಮಾತಾಡುತ್ತಲೇ ಇರುತ್ತಿದ್ದನು. ಆತನಲ್ಲಿದ್ದ ಅಭಿಷೇಕದ ಮಹಿಮೆಯಿಂದಾಗಿ ಮರಣಹೊಂದಿದ, 23 ಜನರನ್ನು ಜೀವದಿಂದ ಎಬ್ಬಿಸಿದನು.

ದೇವಜನರೇ, ಎದ್ದು ಪ್ರಕಾಶಿಸಿರಿ, "ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು ಅರಸರು ನಿನ್ನಲ್ಲಿನ ಉದಯ ಪ್ರಕಾಶಕ್ಕೆ ಬರುವರು" (ಯೆಶಾ 60:3).

**ನೆನಪಿಗೆ : 'ಪವಿತ್ರಾತ್ಮ ಭರಿತರಾಗಿದ್ದು ಕೀರ್ತನೆಗಳಿಂದಲೂ, ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ತಂದೆಯಾದ ದೇವರಿಗೆ ಸ್ತೋತ್ರಮಾಡಿರಿ' (ಎಫೆ 5:19).**

ಜನವರಿ 07

## ಪರಿಶುದ್ಧತೆಯಿಂದ ಪ್ರಕಾಶ!

ಬೆಳಗ್ಗೆ : ಆದಿ 18,19
ಸಂಜೆ : ಮತ್ತಾ 6:1-18

**'ಆತನ ದೀಪವು ನನ್ನ ತಲೆಯ ಮೇಲೆ ಪ್ರಕಾಶಿಸುತ್ತಿತ್ತು ಆತನ ಬೆಳಕಿನಿಂದ ಕತ್ತಲಲ್ಲೂ ಸಂಚರಿಸುತ್ತಿದ್ದೆನು' (ಯೋಬ 29:3).**

ಈ ನೂತನ ವರುಷದಲ್ಲಿ ಕರ್ತನಿಗಾಗಿ ಎದ್ದು ಪ್ರಕಾಶಿಸುವದು ಹೇಗೆ? ಎಂಬುದನ್ನು ಕುರಿತು ಧ್ಯಾನಿಸುತ್ತಾ ಬಂದಿರುವೆವು. ಭಕ್ತನಾದ ಯೋಬನು ತನ್ನ ಅನುಭವವನ್ನು ಕುರಿತು ಹೇಳುವಾಗ – "ಆತನ ದೀಪವು ನನ್ನ ತಲೆಯ ಮೇಲೆ ಪ್ರಕಾಶಿಸುತ್ತಿತ್ತು. ಆತನ ಬೆಳಕಿನಲ್ಲಿ ಕತ್ತಲಲ್ಲೂ ಸಂಚರಿಸುತ್ತಿದ್ದೆನು" ಎಂದು ಹೇಳುತ್ತಾನೆ. ಆತನ ದೀಪವು ನನ್ನ ತಲೆಯ ಮೇಲೆ ಪ್ರಕಾಶಿಸುತ್ತಿತ್ತು ಎಂದು ಹೇಳುವದರ ಅರ್ಥ, ಕರ್ತನ ಪ್ರಸನ್ನತೆಯಿಂದ ಉಂಟಾದ ಬೆಳಕನ್ನು ಸೂಚಿಸುವದು. ಆ ಬೆಳಕಿನ ಪ್ರಕಾಶದಲ್ಲಿ ಯೋಬನು ಶೋಧನೆಗಳೆಂಬ ಕಾರಿರುಳನ್ನು ದಾಟಿಹೋದನು.

ಇಂದು ಸತ್ಯವೇದ ವಾಕ್ಯಗಳು, ಪವಿತ್ರಾತ್ಮನು ನಮಗೆ ಬೆಳಕಿನಂತಿರುವನು. ಅಪೊ. ಪೇತ್ರನು. "ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದು ಒಳ್ಳೇದು ಎಂದು ಹೇಳುತ್ತಾನೆ (2ಪೇತ್ರ 1:19). ಒಬ್ಬ ವಿಶ್ವಾಸಿ ತನ್ನನ್ನು ಪರಿಶುದ್ಧವಾದ ಜೀವಿತಕ್ಕೆ ಒಪ್ಪಿಸಿಕೊಡುವಾಗ, ಪವಿತ್ರಾತ್ಮನು, ಅವನೊಳಗೆ ಇಳಿದು ಬಂದು ಅವನಿಗೆ ದಾರಿತೋರಿಸುವನು, ದೇವರಹಸ್ಯಗಳನ್ನು ಬೋಧಿಸುವನು. "ಯೋಬನು ದೀಪವೆಂದು ಹೇಳುವಾಗ, ಅದು ಬೆಳಕನ್ನು ಸೂಚಿಸುವದು ದೀಪ ಉರಿದು ಬೆಳಕು ನೀಡಬೇಕಾದರೆ ದೀಪದಲ್ಲಿರುವ ಬತ್ತಿ ಎಣ್ಣೆಯಲ್ಲಿ ಮುಳುಗಿರಬೇಕು. ಇಲ್ಲಿ ಎಣ್ಣೆಯು ಪವಿತ್ರಾತ್ಮನಿಗೆ ಸೂಚಕವಾಗಿರುವದು. ಆ ಅಭಿಷೇಕದಿಂದ ನೀವು ಎದ್ದು ಪ್ರಕಾಶಿಸುವಿರಿ. ಒಂದು ಕಡೆ, ಆ ಬೆಳಕಿನಿಂದ, ಕತ್ತಲೆಯನ್ನು ದಾಟಿಹೋಗಬಹುದು, ಇನ್ನೊಂದೆಡೆ, ಸತ್ಯವೇದದಲ್ಲಿನ ಗೂಢಾರ್ಥಗಳು ಪ್ರಕಟವಾಗುವವು.

ಯೋಬನನ್ನು ಸೈತಾನನು ಹಲವು ರೀತಿಯಲ್ಲಿ ಶೋಧಿಸಿದನು. ಅವೆಲ್ಲವುಗಳ ನಡುವೆಯೂ, ಯೋಬನು ಪಾಪ ಮಾಡಲಿಲ್ಲ, ದೇವರ ಮೇಲೆ ತಪ್ಪು ಹೊರಿಸಲಿಲ್ಲ (ಯೋಬ 1:22). ನನ್ನನ್ನು ದ್ವೇಷಿಸುವವನಿಗೆ ಕೇಡು ಬಂದಾಗ ಉಬ್ಬಿಕೊಂಡು ಅವನ ನಾಶನಕ್ಕೆ ಹಿಗ್ಗಿ ಅವನನ್ನು ಶಪಿಸಿ ಅವನ ಪ್ರಾಣ ಹೋಗಲಿ ಎಂದು ಬೇಡಿಕೊಂಡು, ಪಾಪವಶವಾಗುವದಕ್ಕೆ ನಾನು ಒಪ್ಪಲೇ ಇಲ್ಲ (ಯೋಬ 31:30) ಎಂದು ಹೇಳುತ್ತಾನೆ.

ದೇವಜನರೇ, ನಿಮ್ಮ ಜೀವಿತದ ಕುರಿತಾದ ಸಾಕ್ಷಿ ಏನಾಗಿದೆ? ದೇವರ ಬೆಳಕು ನಿಮ್ಮ ಮೇಲೆ ಪ್ರಕಾಶಿಸಬೇಕೆಂದರೆ, ನಿಮ್ಮ ಜೀವಿತದಲ್ಲಿ ಪರಿಶುದ್ಧತೆ ಅತಿ ಅವಶ್ಯವಾದದ್ದು. ಶೋಧನೆಗಳು ಬರುವಾಗ ನಂಬಿಕೆಯಲ್ಲಿ ಬಿದ್ದು ಹೋಗದಂತೆ ಪವಿತ್ರಾತ್ಮನ ಬಲ ಅವಶ್ಯವಾದದ್ದು. ಆದಕಾರಣ, ಪರಿಶುದ್ಧವಾದ ಜೀವಿತಕ್ಕೆ ನಿಮ್ಮನ್ನು ಒಪ್ಪಿಸಿಕೊಡಿರಿ.

**ನೆನಪಿಗೆ : 'ತನ್ನ ಮಕ್ಕಳು ಒಂದು ವೇಳೆ ಹೃದಯದಲ್ಲಿ ದೇವರನ್ನು ದೂಷಿಸಿ ಪಾಪ ಮಾಡಿರಬಹುದು ಎಂದು.... ಬೆಳಿಗ್ಗೆ ಎದ್ದು ಅವರ ಸಂಖ್ಯೆಗೆ ತಕ್ಕಂತೆ ಹೋಮಗಳನ್ನು ಅರ್ಪಿಸುತ್ತಿದ್ದನು' (ಯೋಬ 1:5).**



ಜನವರಿ 08

## ಮರೆತು ಬಿಡೆನು!

ಬೆಳಗ್ಗೆ : ಆದಿ 20,21,22
ಸಂಜೆ : ಮತ್ತಾ 6:19-34

**'ಯಾಕೋಬೇ, ಇಸ್ರಾಯೇಲೇ, ಈ ವಿಷಯಗಳನ್ನು....ನಾನು ನಿನ್ನನ್ನು ನಿರ್ಮಿಸಿದೆನು. ನೀನು ನನ್ನ ಸೇವಕನು ನಿನ್ನನ್ನು ಮರೆತುಬಿಡೆನು' (ಯೆಶಾ 44:21).**

ದಾವೀದನು ಬತ್ಷೇಬಳೊಡನೆ ತಾನು ಮಾಡಿದ ಪಾಪದ ನಿಮಿತ್ತ ಬಳಲಿಹೋದಾಗ, ದುಃಖದಿಂದ "ನಾನು ಸತ್ತವರಂತೆ ಯಾರ ಜ್ಞಾಪಕಕ್ಕೂ ಬಾರದವನಾದೆನು; ಒಡೆದ ಬೋಕಿಯಂತಿದ್ದೇನೆ" (ಕೀರ್ತ 31:12) ಎಂದು ಹೇಳಿದನು. ಆದರೆ ದಾವೀದನನ್ನು ಜ್ಞಾಪಿಸಿಕೊಂಡ ಕರ್ತನು ತನ್ನ ಪ್ರವಾದಿಯಾದ ನಾತಾನನನ್ನು ದಾವೀದನ ಬಳಿಗೆ ಕಳುಹಿಸಿದನು, ನಾತಾನನು ಅವನ ಪಾಪವನ್ನು ದಾವೀದನಿಗೆ ತಿಳಿಯಪಡಿಸಿ ಮಾತಾಡಿದ್ದರಿಂದ, ದಾವೀದನು ತನ್ನ ಪಾಪವನ್ನು ಕರ್ತನ ಮುಂದೆ ಅರಿಕೆ ಮಾಡಿದನು. ದೇವರೊಂದಿಗೆ ಒಂದಾದನು, ಪುನಃ ಇಬ್ಬರ ನಡುವೆ ಪ್ರೀತಿ ಅಂಕುರಿಸಿತು. ಕರ್ತನು ಪ್ರೀತಿಸ್ವರೂಪಿ, ಕರುಣಾಮಯನು, ಅತನು ನಿಮ್ಮನ್ನು ಎಂದಿಗೂ ಮರೆಯನು. ಹಾಗೂ ತನ್ನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲ ಕಾರ್ಯಗಳನ್ನು ಅನುಕೂಲ ಮಾಡುವನು.

ಅನೇಕರು ದೇವರು ನನ್ನನ್ನು ಕೈ ಬಿಟ್ಟಿರುವನು, ಮರೆತು ಬಿಟ್ಟಿರುವನೆಂದು ಗೋಳಾಡುವರು. ಆದರೆ ಕರ್ತನು ಏನು ಹೇಳುತ್ತಾನೆ ಗೊತ್ತೇ? "ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆ ಇಡದೆ ತನ್ನ ಮೊಲೆಕೂಸನ್ನು ಮರೆತಾಳೇ, ಒಂದು ವೇಳೆ ಮರೆತಾಳು, ನಾನಾದರೋ ನಿನ್ನನ್ನು ಮರೆಯೆ. ಇಗೋ ನಿನ್ನನ್ನು ಅಂಗೈಗಳಲ್ಲಿ ಚಿತ್ರಿಸಿಕೊಂಡಿದ್ದೇನೆ; ನಿನ್ನ ಪೌಳಿಗೋಡೆಗಳು ಸದಾ ನನ್ನ ಕಣ್ಣೆದುರಿನಲ್ಲಿರುವದು" ಎಂದು (ಯೆಶಾ 49:15,16). ಗಂಡನು ಹೆಂಡತಿಯನ್ನು ಕೈಬಿಡಬಹುದು ಹೆತ್ತವರು ಮಕ್ಕಳನ್ನು ಕೈಬಿಡಬಹುದು. ಆದರೆ ಕರ್ತನು ನಿಮ್ಮನ್ನು ಎಂದಿಗೂ ಕೈಬಿಡುವದಿಲ್ಲ ದುಃಖ ಸಂಕಟಗಳ ಸಮಯದಲ್ಲಿ ಯೋಬನು ಹೀಗೆ ಹೇಳಿದನು 'ನನ್ನ ಬಂಧುಗಳು ನನ್ನನ್ನು ಬಿಟ್ಟುಬಿಟ್ಟಿದ್ದಾರೆ, ನನಗೆ ಪರಿಚಯವಿದ್ದವರು ನನ್ನನ್ನು ಮರೆತಿದ್ದಾರೆ, ಎಂದು (ಯೋಬ 19:14). ಅವನ ಹೆಂಡತಿಯೂ ಅವನ ಕೈಬಿಟ್ಟು – "ನಿನ್ನ ಯಥಾರ್ಥತ್ವವನ್ನು ಇನ್ನೂ ಬಿಡಲಿಲ್ಲವೋ? ದೇವರನ್ನು ದೂಷಿಸಿ ಸಾಯಿ" ಎಂದು ಹೇಳಿದಳು (ಯೋಬ 2:9).

ದೇವಮಕ್ಕಳೇ, ಯೋಬನಿಗಾದಂಥಹ ಅನುಭವ ನಮ್ಮ ಜೀವಿತಗಳಲ್ಲೂ ಆಗಿರಲು ಸಾಧ್ಯ. ಅಂಥಹ ಕೆಲವಾರು ಅನುಭವಗಳ ಮಧ್ಯೆ ನೀವೂ ಹಾದು ಹೋಗಿರಬಹುದು. ಅಥವಾ ಹಾದು ಹೋಗುತ್ತಿರಬಹುದು ಆದರೆ ಕರ್ತನ ವಾಗ್ದಾನಗಳನ್ನು ಮರೆಯದಿರಿ. "ನಿನ್ನನ್ನು ಕೈ ಬಿಡುವದಿಲ್ಲ; ತೊರೆಯುವದಿಲ್ಲ ಸ್ಥಿರಚಿತ್ತನಾಗಿರು ಧೈರ್ಯದಿಂದಿರು" ಎಂದು ವಾಗ್ದಾನ ಮಾಡಿದಂಥಹ ಕರ್ತನು ನಂಬಿಗಸ್ಥನು. ಆತನು ಎರಡು ಮಾತಿನವನಲ್ಲ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗುವಾಗ ಪ್ರತಿಯೊಬ್ಬನನ್ನು ಆತನು ಕೈಹಿಡಿದು ನಡೆಸುವನು ಕರ್ತನ ಪ್ರೀತಿ ಶಾಶ್ವತವಾದ ಪ್ರೀತಿ.

**ನೆನಪಿಗೆ : 'ದಿಕ್ಕಿಲ್ಲದವರು ಕಡೆಯವರೆಗೆ ಮರೆಯಲ್ಪಡುವದಿಲ್ಲ ದೀನರ ನಿರೀಕ್ಷಣೆಯು ಕೆಡುವದೇ ಇಲ್ಲ' (ಕೀರ್ತ 9:18).**

| ಜನವರಿ 09 | ಕುಗ್ಗಿದವರನ್ನು ನೆನಪಿನಲ್ಲಿಟ್ಟುಕೊಳ್ಳುವನು! | ಬೆಳಿಗ್ಗೆ : ಆದಿ 23,24 ಸಂಜೆ : ಮತ್ತಾ 7 |
|---|---|---|

**'ನಾನಾದರೋ ಕುಗ್ಗಿದವನೂ ದಿಕ್ಕಿಲ್ಲದವನೂ ಆಗಿದ್ದೇನೆ;....ನನ್ನ ದೇವರೇ, ನೀನೇ ನನಗೆ ಸಹಾಯಕನೂ ರಕ್ಷಕನೂ ಆಗಿದ್ದೀ; ತಡಮಾಡಬೇಡ' (ಕೀರ್ತ 40:17).**

ಜ್ಞಾಪಕಕ್ಕೆ ತಂದುಕೊಳ್ಳುವದು ಬೇರೆ, ಜ್ಞಾಪಕದಲ್ಲಿ ಇಟ್ಟುಕೊಳ್ಳುವದು ಬೇರೆ. ಜ್ಞಾಪಿಸಿಕೊಳ್ಳುವದು ಎಂದರೆ ಯಾವಾಗಲಾದರೊಮ್ಮೆ ನೆನಪಿಗೆ ಬಂದಾಗ, ಅವರನ್ನು ಕುರಿತು ಯೋಚಿಸುವದು. ಅದರೆ ಜ್ಞಾಪಕದಲ್ಲಿಟ್ಟುಕೊಳ್ಳುವದೆಂದರೆ, ಎಡಬಿಡದೆ ನೆನಸುತ್ತಲೇ ಇರುವದಾಗಿದೆ.

ಹಾಲುಣಿಸುವ ತಾಯಿ, ತನ್ನ ಮಗುವಿನ ನೆನಪಿನಲ್ಲೇ ಇರುತ್ತಾಳೆ. ಮಗು ಸ್ವಲ್ಪ ಅತ್ತರೂ, ಮಗುವಿಗೆ ಹಸಿವಾಗಿದೆಯಾ, ಯಾವದಾದರು, ಹುಳುಕಚ್ಚಿತಾ ಅಥವಾ ಕೆಳಗೆ ಬಿದ್ದು ಪೆಟ್ಟಾಯಿತಾ ಎಂದು ಚಡಪಡಿಸುವಳು. ಅದೇ ರೀತಿ ಕರ್ತನೂ, ನಿಮ್ಮ ಮೇಲೆ ಅಕ್ಕರೆಯುಳ್ಳವನಾಗಿ ತನ್ನ ನೆನಪಿನಲ್ಲಿ ನಿಮ್ಮನ್ನು ಇಟ್ಟುಕೊಂಡಿರುತ್ತಾನೆ. ಕಾರಣ ಆತನೇ ನಿಮ್ಮ ನಿರ್ಮಾಣಿಕನೂ, ಸೃಷ್ಟಿಕರ್ತನೂ ಆಗಿರುವನು. ನೀವು ಬಡವರಾಗಿರಬಹುದು ಅವಿದ್ಯಾವಂತರಾಗಿರಬಹುದು. ಕರ್ತನು ಯಾವಾಗಲೂ ನಿಮ್ಮನ್ನು ನೆನಸುವವನಾಗಿರುವನು. ತನ್ನ ಅಂಗೈಗಳಲ್ಲಿ ನಿಮ್ಮನ್ನು ಚಿತ್ರಿಸಿಕೊಂಡಿರುವನು. ನನ್ನ ಮಗನೇ/ ಮಗಳೇ, ನಿನ್ನ ಪಾಪಗಳ ಕ್ಷಮಾಪಣೆಗಾಗಿ ಇಗೋ, ನನ್ನ ಕೈಗಳನ್ನು ಜಡಿಯಲು ಒಪ್ಪಿಸಿಕೊಟ್ಟಿರುವೆನು, ತೂಕಡಿಸದ, ನಿದ್ರಿಸದ ದೇವನು ನಿನ್ನನ್ನು ನಾನು ಹೇಗೆ ಮರೆಯಲಿ? ಎಂದು ಹೇಳುವನು.

ಅಪೊ.ತೋಮನು, ಕರ್ತನು ನನ್ನನ್ನು ಮರೆತನೇ ನನಗೆ ಆತನ ದರ್ಶನ ಸಿಗಲಿಲ್ಲವೇ? ಎಂದು ಯೋಚಿಸಿ ಆತನ ಕೈಗಳಲ್ಲಿ ಪಕ್ಕೆಗಳಲ್ಲಿ ಉಂಟಾದ ಗಾಯಗಳಲ್ಲಿ ನನ್ನ ಬೆರಳನ್ನು ಇಡದ ಹೊರತು ನಾನು ನಂಬುವದಿಲ್ಲ (ಯೋಹಾ 20:25) ಎಂದು ಹೇಳಿದನು. ಆದರೆ ಕರ್ತನೋ ತೋಮನನ್ನು ಮರೆಯಲಿಲ್ಲ ತೋಮನಿಗೆ ತನ್ನನ್ನು ಪ್ರತ್ಯಕ್ಷಪಡಿಸಿಕೊಂಡು ಹೀಗೆ ಹೇಳಿದನು "ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿ ನೋಡು; ನಿನ್ನ ಕೈ ಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ ನಂಬುವವನಾಗು ಎಂದು ಹೇಳಿದನು" (ಯೋಹಾ 20:27).

ದೇವಮಕ್ಕಳೇ, ಕರ್ತನ ಕರಗಳೇ, ನಿಮ್ಮನ್ನು ಸೃಷ್ಟಿಸಿರುವದು, ಆತನ ಕರಗಳಿಂದ ನಿಮ್ಮನ್ನು ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. "ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅವು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾ 10:10). ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ. ನನ್ನ ಕೈಯೊಳಗಿಂದ ಅವುಗಳನ್ನು ಯಾರೂ ಕಸಿದುಕೊಳ್ಳರು ಎಂದು ನಮ್ಮ ರಕ್ಷಕನೂ ಕುರುಬನೂ ಆದ ಯೇಸುಕ್ರಿಸ್ತನು ಹೇಳಿರುವನು (ಯೋಹಾ 10:28).

**ನೆನಪಿಗೆ : ದಿಕ್ಕಿಲ್ಲದವನನ್ನು ಪರಾಂಬರಿಸುವವನು ಧನ್ಯನು; ಯೆಹೋವನು ಅವನನ್ನು ಆಪತ್ಕಾಲದಲ್ಲಿ ರಕ್ಷಿಸುವನು' (ಕೀರ್ತ 41:1).**



| ಜನವರಿ 10 | ವಿಧೇಯರನ್ನು ನೆನಪಿಸಿಕೊಳ್ಳುವನು! | ಬೆಳಿಗ್ಗೆ : ಆದಿ 25,26 ಸಂಜೆ : ಮತ್ತಾ 8:1-17 |
|---|---|---|

**'ದೇವರು ನೋಹನನ್ನೂ ಅವನ ಸಂಗಡ ನಾವೆಯಲ್ಲಿದ್ದ ಎಲ್ಲಾ ಮೃಗಪಶುಗಳನ್ನೂ ನೆನಪಿಗೆ ತಂದುಕೊಂಡನು' (ಆದಿ 8:1).**

ನೋಹನನ ದಿನಗಳಲ್ಲಿ ಭೂಮಿಯಲ್ಲಿ ಜನರ ಅಕ್ರಮ ಹೆಚ್ಚಿತು. ಆಗ ಕರ್ತನು ಈ ಪ್ರಪಂಚವನ್ನು ಜಲಪ್ರಳಯದಿಂದ ಅಳಿಸಿ ಹಾಕಲು ನಿರ್ಧರಿಸಿದನು. ಆದರೆ ಆ ದಿನಗಳಲ್ಲಿ ದೇವರು ತನಗೆ ವಿಧೇಯನಾಗಿದ್ದ ನೋಹನನ್ನೂ ಅವನ ಕುಟುಂಬವನ್ನೂ, ಮೃಗಜೀವಿಗಳನ್ನು ನೆನಸಿ ಅವರನ್ನು ರಕ್ಷಿಸುವಂತೆ, ಒಂದು ನಾವೆಯನ್ನು ಕಟ್ಟುವಂತೆ ನೋಹನನಿಗೆ ದೇವರು ಆಜ್ಞಾಪಿಸಿದನು.

ಒಂದು ಕಡೆ ನೋಹ, ತನ್ನ ಕುಟುಂಬವನ್ನು ಜಲಪ್ರಳಯದಿಂದ ತಪ್ಪಿಸುವಂತೆ ಕುಟುಂಬದವರನ್ನು ಸಿದ್ಧಪಡಿಸಿದನು. ಮತ್ತೊಂದೆಡೆ, ನಾವೆಯನ್ನು ಸಿದ್ಧಪಡಿಸಿದನು. ಅದೇ ವೇಳೆ ಸುವಾರ್ತೆಯನ್ನೂ ಸಾರಿದನು. ಬರಲಿರುವ ದೇವರ ನ್ಯಾಯತೀರ್ಪಿನ ಬಗ್ಗೆ ಜನರನ್ನು ಎಚ್ಚರಿಸಿದನು. ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು. ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು (ಆದಿ 6:9) ಎಂದು ದೇವರ ವಾಕ್ಯ ಹೇಳುತ್ತದೆ. ಅಂಥಹ ನೋಹನನನ್ನು ದೇವರು ಹೇಗೆ ತಾನೇ ಮರೆಯಲು ಸಾಧ್ಯ? ನೀನೂ ನಿನ್ನ ಮನೆಯವರೆಲ್ಲರೂ ನಾವೆಯಲ್ಲಿ ಸೇರಿರಿ. ಈಗಿನವರಲ್ಲಿ ನೀನೊಬ್ಬನೇ ನನ್ನ ಮುಂದೆ ನೀತಿವಂತನಾಗಿ ನಡೆಯುವದನ್ನು ನೋಡಿದ್ದೇನೆ ಎಂದು ಹೇಳಿದನು (ಆದಿ 7:1). ನಂತರದ ನಾಲ್ವತ್ತು ದಿನಗಳು ಮಳೆ ಸತತವಾಗಿ ಸುರಿಯುತ್ತಲೇ ಇತ್ತು. ನೋಹನು ಅವನ ಕುಟುಂಬ ಒಟ್ಟು 383 ದಿನಗಳು ನಾವೆಯೊಳಗೇ ಇದ್ದರು. ತರುವಾಯ ದೇವರು ನೋಹನನ್ನೂ ಅವನ ಸಂಗಡ ಇದ್ದ ಎಲ್ಲಾ ಮೃಗಪಕ್ಷಿಗಳನ್ನೂ ನೆನಪಿಗೆ ತಂದುಕೊಂಡನು. (ಆದಿ 8:1). ಕರ್ತನು ನಿಮ್ಮನ್ನೂ ನಿಮ್ಮ ಕುಟುಂಬವನ್ನು ನೆನಪಿನಲ್ಲಿಟ್ಟುಕೊಂಡಿರುವನು. "ಕರ್ತನಾದ ಯೇಸುಕ್ರಿಸ್ತನನ್ನು ನಂಬು ಆಗ ನೀನೂ ನಿನ್ನ ಮನೆಯವರೂ ರಕ್ಷಿಸಲ್ಪಡುವಿರಿ (ಅ.ಕೃ 16:31).

'ರಕ್ಷಣೆ' ಎಂದರೆ ಕಾಪಾಡಲ್ಪಡುವದು ಎಂದು ಅರ್ಥ. ಇನ್ನು ಮುಂದೆ ಬರಲಿರುವ ನ್ಯಾಯತೀರ್ಪಿನಿಂದಲೂ, ಕ್ರಿಸ್ತವಿರೋಧಿಯ ಅಕ್ರಮದಿಂದಲೂ ಕಾಪಾಡಲ್ಪಡಬೇಕಿದ್ದರೆ, ಕರ್ತನಲ್ಲಿ ನಂಬಿಕೆ. ಇಡಿರಿ ಕ್ರಿಸ್ತನೇ, ಇಂದು ನಾವೆಯಾಗಿರುವನು. ಆತನಲ್ಲಿ ಆಶ್ರಯ ಪಡೆಯಿರಿ. ಕರ್ತನ ನಾವೆ ಉನ್ನತಾಕಾಶದಲ್ಲಿ ಪರಲೋಕಕ್ಕೆ ಎತ್ತಲ್ಪಡುವ ಸಮಯ ಸಮೀಪವಾಗಿರುವದು. ತಡಮಾಡದೆ, ಕರ್ತನ ಆಜ್ಞೆಗೆ ವಿಧೇಯರಾಗಿ, ಕ್ರಿಸ್ತನೆಂಬ ರಕ್ಷಣೆಯ ನಾವೆಯೊಳಗೆ ಬಂದು ಸೇರಿರಿ. ನಿತ್ಯರಾಜ್ಯಕ್ಕೆ ಬಾಧ್ಯರಾಗಿರಿ.

**ನೆನಪಿಗೆ : 'ಎಫ್ರಾಯಿಮೇ ನಾನು ನಿನ್ನನ್ನು ಹೇಗೆ ತ್ಯಜಿಸಲಿ! ಇಸ್ರಾಯೇಲೇ ಹೇಗೆ ನಿನ್ನನ್ನು ಕೈಬಿಡಲಿ!....ಚೆಬೋಯಿಮಿನಂತೆ ಹೇಗೆ ನಾಶ ಮಾಡಲಿ! ನನ್ನೊಳಗೆ ಮನಸ್ಸು**

| ಜನವರಿ 11 | ಪ್ರಾರ್ಥಿಸುವವರನ್ನು ನೆನಸುವನು! | ಬೆಳಗ್ಗೆ : ಆದಿ 27,28<br>ಸಂಜೆ : ಮತ್ತಾ 8:18-38 |
|---|---|---|

**'ಬಹುದುಃಖದಿಂದ ಕಣ್ಣೀರು....ಯೆಹೋವನಿಗೆ ಮೊರೆಯಿಟ್ಟಳು' (1ಸಮು 1:10).**

ಹನ್ನಳು ಪ್ರಾರ್ಥಿಸುವ ಸ್ತ್ರೀಯಾಗಿದ್ದಳು, ಪ್ರಾರ್ಥನೆಯ ಮೂಲಕವಾಗಿ ತನ್ನ ಅಗತ್ಯತೆಗಳನ್ನು ಹೊಂದಿಕೊಳ್ಳಲು, ಶಾಪವನ್ನು ಆಶೀರ್ವಾದವಾಗಿ ಮಾರ್ಪಡಿಸಿಕೊಳ್ಳಲು ಸಾಧ್ಯ ಎಂಬ ಸತ್ಯವನ್ನು ಅರಿತವಳಾಗಿದ್ದಳು. ಕರ್ತನು ಪ್ರಾರ್ಥನೆಯನ್ನು ಕೇಳುವವನು ಮಾತ್ರವಲ್ಲ ಪ್ರಾರ್ಥನೆಗೆ ಉತ್ತರಿಸುವವನೂ ಆಗಿರುವನು.

ಹನ್ನಳ ಪ್ರಾರ್ಥನೆ ಏನಾಗಿತ್ತು? ಸೇನಾಧೀಶ್ವರನಾದ ಯೆಹೋವನೇ, ನಿನ್ನ ದಾಸಿಯ ದುಃಖವನ್ನು ಪರಿಹರಿಸು; ನನ್ನನ್ನು ತಿರಸ್ಕರಿಸದೆ ಕನಿಕರವಿಟ್ಟು ನನಗೊಬ್ಬ ಮಗನನ್ನು ಕೊಡಬೇಕು; ಅವನು ಜೀವದಿಂದಿರುವ ತನಕ, ನಿನ್ನವನಾಗಿಯೇ ಇರುವ ಹಾಗೆ ಪ್ರತಿಷ್ಟಿಸಿಕೊಡುವೆನು; ಅವನ ತಲೆಯ ಮೇಲೆ ಕ್ಷೌರದ ಕತ್ತಿಯನ್ನು ಬರಗೊಡಿಸುವದಿಲ್ಲ ಎಂಬ ಹರಕೆಯಿಂದ ಕೂಡಿದ ಪ್ರಾರ್ಥನೆ ಅವಳದಾಗಿತ್ತು. ಸತ್ಯವೇದದಲ್ಲಿ ಅನೇಕ ಪ್ರಾರ್ಥನೆಗಳುಂಟು. ಆದರೆ ಹನ್ನಳ ಪ್ರಾರ್ಥನೆ ವಿಶೇಷವಾದದು. ಅದು ಉತ್ತರ ಸಿಗುವ ಪ್ರಾರ್ಥನೆಯಾಗಿತ್ತು. ಅವಳು ನೆನಸಿದ್ದಕ್ಕಿಂತಲೂ, ಬೇಡಿಕೊಂಡದಕ್ಕಿಂತಲೂ, ಬಹಳವಾಗಿ ಕರ್ತನಿಂದ ಪಡೆದುಕೊಂಡಳು. ಕಾರಣವೇನು? ಅವಳು ತನ್ನ ಅಗತ್ಯತೆಯನ್ನು ಮಾತ್ರವಲ್ಲ; ಕರ್ತನ ಅಗತ್ಯತೆಗಳನ್ನು ಅರಿತಿದ್ದಳು.ಆಗ ಇಸ್ರಾಯೇಲಿನಲ್ಲಿ ಅರಸನಿರಲಿಲ್ಲ, ಪ್ರವಾದಿ ಇರಲಿಲ್ಲ, ಪರಿಶುದ್ಧರಾದ ಯಾಜಕರಿರಲಿಲ್ಲ, ಹನ್ನಳು ಕರ್ತನ, ದೇಶದ ಅಗತ್ಯತೆಗಳನ್ನು ಅರಿತು, ತನಗೆ ಒಬ್ಬ ಗಂಡು ಮಗುವನ್ನು ಕೊಟ್ಟರೆ, ಅವನನ್ನು ಕರ್ತನ ಸೇವೆಗೆಂದು ಪ್ರತಿಷ್ಟಿಸಿ ಕೊಡುತ್ತೇನೆ ಎಂದು ಹರಕೆಯೊಂದಿಗೆ ಪ್ರಾರ್ಥಿಸಿದಳು. ಆಗ ಕರ್ತನು ಅವಳ ಅಗತ್ಯತೆಯನ್ನು ಪೂರೈಸಿದನು. ಹನ್ನಳ ಪ್ರಾರ್ಥನೆ ಹರಕೆಯಿಂದ ಕೂಡಿದ ಪ್ರಾರ್ಥನೆಯಾಗಿತ್ತು.

ಕರ್ತನು ಹನ್ನಳ ಬಿನ್ನಹವನ್ನು ಲಾಲಿಸಿದನು "ಹನ್ನಳು ಗರ್ಭವತಿಯಾಗಿ ಒಂದು ಗಂಡು ಮಗುವನ್ನು ಹೆತ್ತಳು, ಯೆಹೋವನನ್ನು ಬೇಡಿ ಪಡಕೊಂಡೆನೆಂದು ಹೇಳಿ ಆ ಮಗುವಿಗೆ ಸಮುವೇಲನೆಂದು ಹೆಸರಿಟ್ಟಳು" (1ಸಮು 1:20). ಅವಳು ತನ್ನ ಹರಕೆಯಂತೆ ಮಗು ಮೊಲೆ ಬಿಟ್ಟ ಮೇಲೆ ಅವನನ್ನು ದೇವರ ಸನ್ನಿಧಿಯಲ್ಲಿ ಬಿಟ್ಟು ಬಂದಳು. ಅವಳ ಭಕ್ತಿಗೆ ಮೆಚ್ಚಿದ ಕರ್ತನು, ಅವಳಿಗೆ ಇನ್ನೂ ಮೂವರು ಗಂಡು ಮಕ್ಕಳನ್ನೂ ಇಬ್ಬರು ಹೆಣ್ಣು ಮಕ್ಕಳನ್ನೂ ಅನುಗ್ರಹಿಸಿದನು. ಯಾಬೇಚನ ಪ್ರಾರ್ಥನೆಯನ್ನು ಕರ್ತನು ಮರೆಯಲಿಲ್ಲ. ತನ್ನನ್ನು ಪ್ರಾರ್ಥಿಸುವವರನ್ನು ಮರೆಯನು ಎಂಬುದಕ್ಕೆ ಉದಾಹರಣೆಯಾಗಿದೆ (1ಪೂ.ವೃ 4:10).

ದೇವಮಕ್ಕಳೇ, ಪ್ರಾರ್ಥನೆ ನಿಮ್ಮ ಉಸಿರಾಗಿರಲಿ. ನಿಮ್ಮ ಯಾವದೇ ಅಗತ್ಯತೆಗಳಿಗಾದರೂ ಕರ್ತನ ಬಳಿ ವಿಜ್ಞಾಪಿಸಿರಿ. ನಿಶ್ಚಯವಾಗಿ ಉತ್ತರ ನೀಡುವನು. ಆದರೆ ನಿಮ್ಮ ಪ್ರಾರ್ಥನೆ ದೇವರ ಚಿತ್ತಕ್ಕೆ ಅನುಗುಣವಾಗಿರಲಿ.

**ನೆನಪಿಗೆ : 'ತ್ರಿಕಾಲದಲ್ಲಿಯೂ ಹಂಬಲಿಸುತ್ತಾ ಮೊರೆಯಿಡುವೆನು ಆತನು ಹೇಗೂ ನನ್ನ ಮೊರೆಯನ್ನು ಕೇಳುವನು' (ಕೀರ್ತ 55:17).**



| ಜನವರಿ 12 | ಹಿಂಬಾಲಿಸುವವರನ್ನು ಮರೆಯನು! | ಬೆಳಗ್ಗೆ : ಆದಿ 29,30<br>ಸಂಜೆ : ಮತ್ತಾ 9:1-17 |
|---|---|---|

**'ಅವರು ಸುಟ್ಟ ಮೀನಿನ ಒಂದು ತುಂಡನ್ನು ಆತನಿಗೆ ಕೊಟ್ಟರು, ಆತನು ತೆಗೆದುಕೊಂಡು ಅವರ ಮುಂದೆ ತಿಂದನು' (ಲೂಕ 24:42,43).**

ಯೇಸುಕ್ರಿಸ್ತನು ತನಗೆಂದು ಶಿಷ್ಯರನ್ನು ಆರಿಸಿಕೊಂಡಾಗ, ಶಿಷ್ಯರು ಆತನನ್ನು ಪ್ರೀತಿಯಿಂದ ತಮ್ಮ ಗುರುವಾಗಿ ಅಂಗೀಕರಿಸಿಕೊಂಡರು. ಆತನನ್ನು ಮೂರುವರೆ ವರುಷಗಳು ಹಿಂಬಾಲಿಸಿದರು. ಕ್ರಿಸ್ತನು ಸಹೋದರನಂತೆಯೂ ಸ್ನೇಹಿತನಂತೆಯೂ ಅವರನ್ನು ಪ್ರೀತಿಸಿದನು. ಅವರನ್ನು ಸೇವೆಯಲ್ಲಿ ಚೆನ್ನಾಗಿ ಪಳಗಿಸಿದನು. ಅವರಿಗೆ ಅಭಿಷೇಕವನ್ನೂ ಉನ್ನತ ಶಕ್ತಿಯನ್ನು ನೀಡಿದನು. ದೆವ್ವಗಳನ್ನು ಓಡಿಸುವಂತೆ ವ್ಯಾಧಿಯುಳ್ಳವರನ್ನು ಗುಣಪಡಿಸುವಂತೆ ಪ್ರೋತ್ಸಾಹಿಸಿದನು.

ಶಿಲುಬೆಯನ್ನು ಏರುವ ಸಮಯ ಬಂತು, ಅನೇಕರು ಆತನನ್ನು ಬಿಟ್ಟು ಓಡಿಹೋದರು. ಆದರೆ ಪ್ರೀತಿಯ ಶಿಷ್ಯನಾದ ಯೋಹಾನನು, ಅಂತ್ಯದವರೆಗೂ ಕ್ರಿಸ್ತನನ್ನು ಹಿಂಬಾಲಿಸಿದನು, ಮರಣಕ್ಕೆ ಭಯಪಡಲಿಲ್ಲ. ಆದ್ದರಿಂದಲೇ ಯೇಸುಕ್ರಿಸ್ತನು ಶಿಲುಬೆಯಲ್ಲಿ ತೂಗಾಡುತ್ತಿದ್ದಾಗ, ತನ್ನ ತಾಯಿಯಾದ ಮರಿಯಳ ಜವಾಬ್ದಾರಿಯನ್ನು ಯೋಹಾನನಿಗೆ ಅಮ್ಮಾ ಇಗೋ ನಿನ್ನ ಮಗನು....ಆ ಶಿಷ್ಯನಿಗೆ ಇಗೋ ನಿನ್ನ ತಾಯಿ ಎಂದು ಹೇಳಿ ತನ್ನನ್ನು ಹೆತ್ತು ಸಾಕಿ ಬೆಳೆಸಿದ ತನ್ನ ತಾಯಿಯನ್ನು ಆತನು ಮರೆಯಲಿಲ್ಲ.

ಶಿಲುಬೆಯಲ್ಲಿ ಆತನೊಂದಿಗೆ ತೂಗಾಡುತ್ತಿದ್ದ ಇಬ್ಬರು ಕಳ್ಳರಲ್ಲಿ ಒಬ್ಬನು, ತನ್ನ ಪಾಪಗಳಿಗೆ ಪಶ್ಚಾತ್ತಾಪಪಟ್ಟು, ಯೇಸುವಿನಲ್ಲಿದ್ದ ದೈವತ್ವವನ್ನು ಅರಿತವನಾಗಿ, ಆತನನ್ನು ನೋಡು " ನೀನು ನಿನ್ನ ರಾಜ್ಯದೊಂದಿಗೆ ಬರುವಾಗ ನನ್ನನ್ನು ನೆನಸಿಕೋ" ಎಂದು ಬಿನ್ನಹ ಮಾಡಿದಾಗ, ಕರ್ತನು ಇಂದೇ ನೀನು ನನ್ನೊಂದಿಗೆ ಪರದೈಸಿನಲ್ಲಿರುವಿ, ಎಂದು ಹೇಳಿದನು (ಲೂಕ 23:42,43). ಮೊದಲು ಪೇತ್ರನು, ಕ್ರಿಸ್ತನನ್ನು ಅಲ್ಲಗಳೆದದ್ದು ನಿಜವೇ, ಆತನನ್ನು ಅರಿಯೆನು ಎಂದು ಹೇಳಿ ಆಣೆ ಇಟ್ಟದ್ದು ನಿಜವೇ, ಯೇಸುಕ್ರಿಸ್ತನು ಪುನರುತ್ಥಾನ ಹೊಂದಿದ ಮೇಲೆ ಪೇತ್ರನು ತನ್ನ ನಂಬಿಕೆಯಲ್ಲಿ ಹಿಂಜಾರಿ, ತನ್ನ ಹಿಂದಿನ ಕಸುಬಾದ ಮೀನು ಹಿಡಿಯಲು ಹೋದದ್ದು ನಿಜವೇ, ಆದರೆ ಯೇಸು ಅವನನ್ನು ಮರೆಯಲಿಲ್ಲ, ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಒಂದು ಮೀನನ್ನು ಹಿಡಿಯಲಾಗದೆ ಇದ್ದ ಪೇತ್ರನು ಕ್ರಿಸ್ತನ ಮಾತಿನಂತೆ ಬಲೆ ಬೀಸಿದಾಗ 150 ದೊಡ್ಡ ಮೀನುಗಳನ್ನು ಹಿಡಿದನು.

ದೇವಮಕ್ಕಳೇ, ನೀವೂ ನಿಮ್ಮ ಜೀವಿತದಲ್ಲಿ ಅನೇಕ ವೇಳೆ ಕ್ರಿಸ್ತನನ್ನು ಪೇತ್ರನಂತೆ ಅಲ್ಲಗಳೆದಿರಬಹುದು, ಆದರೆ ಕ್ರಿಸ್ತನು ತನ್ನ ಪ್ರೀತಿಯನ್ನು ಮರೆಯುವಾತನಲ್ಲ. ಆತನ ಪ್ರೀತಿ ಮಾರ್ಪಡದ ಪ್ರೀತಿ. ಪಶ್ಚಾತ್ತಾಪದ ಹೃದಯದಿಂದ ಕರ್ತನ ಕಡೆಗೆ ತಿರುಗುವಿರಾದರೆ, ನಿಶ್ಚಯವಾಗಿ ಆತನು ನಿಮ್ಮನ್ನು ಅಂಗೀಕರಿಸುವನು.

**ನೆನಪಿಗೆ : 'ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತಯೇಸು ಮರಣವನ್ನು ಹೊಂದಿದ್ದಲ್ಲದೆ, ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ' (ರೋಮಾ 8:34).**

| ಜನವರಿ 13 | **ಪ್ರೀತಿಯಿಂದ ವಿಚಾರಿಸುವನು!** | ಬೆಳಿಗ್ಗೆ : ಆದಿ 31,32<br>ಸಂಜೆ : ಮತ್ತಾ 9:18–38 |
|---|---|---|

**'ದಿನಂಪ್ರತಿಯೂ ಅವನ ಮೇಲೆ ಲಕ್ಷ್ಯವಿಟ್ಟು ಕ್ಷಣಕ್ಷಣಕ್ಕೂ ಅವನನ್ನು ಪರಿಶೋಧಿಸುವದೇಕೆ? ಮಾನವನು ಎಷ್ಟರವನು, ಅವನನ್ನು ನೀನು ಏಕೆ ಹೆಚ್ಚಿಸಬೇಕು? ಅವನಲ್ಲಿ ಏಕೆ ಮನಸ್ಸಿಡಬೇಕು?' (ಯೋಬ 7:18,17).**

ಕರ್ತನು ನಮ್ಮಲ್ಲಿ ಲಕ್ಷ್ಯವಿಟ್ಟು ವಿಚಾರಿಸುವನು, ಯಾಕೆಂದರೆ ಆತನ ನೆನಪಿನಲ್ಲಿ ನಾವು ಸದಾ ಕಾಲಕ್ಕೂ ಇರುವೆವು, ಆತನ ಪ್ರೀತಿ ನಿರಂತರವಾದದ್ದು.

ಒಬ್ಬ ಶ್ರೀಮಂತ ಮಹಿಳೆ ಬಹಳ ಆಡಂಬರದಿಂದ ಜೀವನ ನಡೆಸಿದಳು. ಆಕೆಗೆ ಅನೇಕ ಮಕ್ಕಳೂ, ಮೊಮ್ಮಕ್ಕಳೂ ಇದ್ದರು. ಆದರೆ ಆಕೆಯ ಮುಪ್ಪಿನ ಕಾಲದಲ್ಲಿ ಅವಳನ್ನು ಅವಳ ಮಕ್ಕಳು ಮೊಮ್ಮಕ್ಕಳು ಬಂದು ವೃದ್ಧಾಶ್ರಮಕ್ಕೆ ಸೇರಿಸಿದರು, ಆ ಅಜ್ಜಿ, ಪ್ರತಿದಿನವೂ ನನ್ನ ಮಕ್ಕಳು ಮೊಮ್ಮಕ್ಕಳು ತನ್ನನ್ನು ನೋಡಲು ಬರುವರೆಂದು ನಿರೀಕ್ಷಿಸುತ್ತಿದ್ದಳು. ಆದರೆ ಅವಳನ್ನು ನೋಡಲು ಒಬ್ಬರೂ ಬರಲಿಲ್ಲ. ಮನನೊಂದವಳಾಗಿ ಒಂದು ದಿನ ಮರಣಹೊಂದಿದಳು. ಆಕೆ ಬರೆದಿಟ್ಟಿದ್ದ ದಿನಚರಿ ಪುಸ್ತಕದಲ್ಲಿ ಒಂದೊಂದು ದಿನವೂ ದುಃಖದಿಂದ, ಈ ದಿನವಾದರೂ ಯಾರಾದರೂ ನನ್ನನ್ನು ನೋಡಲು ಬರುವರೆಂದು ನಿರೀಕ್ಷಿಸಿದೆ, ಒಬ್ಬರೂ ಬರಲಿಲ್ಲ, ಎಲ್ಲರು ನನ್ನನ್ನು ಮರೆತು ಬಿಟ್ಟರು, ಕೈಬಿಟ್ಟರು, ಎಂದು ಬರೆದಿದ್ದಳು.

ಈ ಪ್ರಪಂಚ, ಪ್ರೀತಿಗಾಗಿ ಹಂಬಲಿಸುವದು. ಇಂಥಹ ಪ್ರೀತಿರಹಿತವಾದ ಪ್ರಪಂಚದಲ್ಲಿ, ಯೇಸುಕ್ರಿಸ್ತನು, ನಮ್ಮನ್ನು ಸೃಷ್ಟಿಸಿರುವದರಿಂದಲೂ, ನಮ್ಮನ್ನು ಹುಡುಕಿ ಬಂದದ್ದರಿಂದಲೂ, ನಮಗಾಗಿ ಶಿಲುಬೆಯಲ್ಲಿ ಶ್ರಮಪಟ್ಟದ್ದರಿಂದಲೂ ನಮ್ಮನ್ನು ತನ್ನ ನೆನಪಿನಲ್ಲಿ ಇಟ್ಟುಕೊಂಡಿರುವನು. "ದೇವರು ಅವರ ನರಳಾಟವನ್ನು ಕೇಳಿ ತಾನು ಅಬ್ರಹಾಮ, ಇಸಾಕ, ಯಾಕೋಬರಿಗೆ ಮಾಡಿದ ವಾಗ್ದಾನವನ್ನು ನೆನಪಿಗೆ ತಂದುಕೊಂಡು ಇಸ್ರಾಯೇಲ್ಯರನ್ನು ನೋಡಿ ಅವರಲ್ಲಿ ಲಕ್ಷ್ಯವಿಟ್ಟನು" (ವಿಮೋ 2:24) ಎಂದು ದೇವರ ವಾಕ್ಯ ಹೇಳುತ್ತದೆ. ಆದ್ದರಿಂದ ಕರ್ತನು ಮೋಶೆಯನ್ನು ನೋಡಿ "ಅವರನ್ನು ಐಗುಪ್ತ್ಯರ ಕೈಯಿಂದ ತಪ್ಪಿಸುವದಕ್ಕೂ ಆ ದೇಶದಿಂದ ಬಿಡಿಸಿ ಹಾಲೂ ಜೇನೂ ಹರಿಯುವ ದೇಶಕ್ಕೆ ನಡೆಸಿಕೊಂಡು ಬರಲು ನಿನ್ನನ್ನು ಕಳುಹಿಸುತ್ತೇನೆ" ಅಂದನು (ವಿಮೋ 3:8–10).

ದೇವಜನರೇ, ನಿಮ್ಮ ಬಂಧುಗಳು ನಿಮ್ಮನ್ನು ಮರೆಯಬಹುದು, ಸ್ನೇಹಿತರು ಮರೆಯಬಹುದು. ಸೈತಾನನು ನಿಮ್ಮನ್ನು ವ್ಯಾಧಿ, ಬಲಹೀನತೆಗಳಿಂದ ಶೋಧಿಸಬಹುದು. ಆದರೆ, ಕರ್ತನು ನಿಮ್ಮನ್ನು ಮರೆಯುವದಿಲ್ಲ ಕೈಬಿಡುವದಿಲ್ಲ ಎಂಬ ಸತ್ಯವನ್ನು ಮರೆಯದಿರಿ. ಹದಿನೆಂಟು ವರುಷಗಳಿಂದ ಗೂನಿಯಾಗಿದ್ದ ಸ್ತ್ರೀಯನ್ನು ಕ್ಷಣ ಮಾತ್ರದಲ್ಲಿ ಗುಣಪಡಿಸಿದ ಕರ್ತನು ನಿಮ್ಮನ್ನು ವ್ಯಾಧಿಗಳಿಂದಲೂ ಎಲ್ಲಾ ಸೈತಾನನ ಕಟ್ಟುಗಳಿಂದಲೂ ಚಿಂತೆಗಳಿಂದಲೂ ಬಿಡಿಸಲು ಸಿದ್ದನಿರುವನು. ಆತನಲ್ಲಿ ನಂಬಿಕೆ ಇಡಿರಿ.

**ನೆನಪಿಗೆ : 'ನೀವು ದೇವಜನರಿಗೆ ಉಪಚಾರ ಮಾಡಿದಿರಿ, ಇನ್ನೂ ಮಾಡುತ್ತಾ ಇದ್ದೀರಿ .... ನೀವು ದೇವರ ನಾಮದ ವಿಷಯವಾಗಿ ತೋರಿಸಿದ ಪ್ರೀತಿಯನ್ನೂ ಆತನು ಮರೆಯುವದಕ್ಕೆ ಅನ್ಯಾಯಸ್ಥನಲ್ಲ' (ಇಬ್ರಿ 6:10).**



| ಜನವರಿ 14 | **ನೆನಪು ಮಾಡಿಕೊಂಡಿದ್ದಾನೆ ಆತನು ಆಶೀರ್ವದಿಸುವನು!** | ಬೆಳಿಗ್ಗೆ : ಆದಿ 33,34,35<br>ಸಂಜೆ : ಮತ್ತಾ 10:1–23 |
|---|---|---|

**'ಯೆಹೋವನು ನಮ್ಮನ್ನು ನೆನಪು ಮಾಡಿಕೊಂಡಿದ್ದಾನೆ; ಸಣ್ಣವರ ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರನ್ನೂ ಆಶೀರ್ವದಿಸುವನು' (ಕೀರ್ತ 115:12).**

ಯೋಸೇಫನ ಜೀವಿತ ಸಣ್ಣ ಪ್ರಾಯದಿಂದಲೂ ಶೋಧನೆಯಿಂದ ಕೂಡಿದ ಜೀವಿತವಾಗಿತ್ತು. ಅವನ ಸ್ವಂತ ಸಹೋದರರಿಂದ ದ್ವೇಷಿಸಲ್ಪಟ್ಟನು,ಮಿದ್ಯಾನ್ಯರಿಗೆ ಮಾರಲ್ಪಟ್ಟನು. ನಂತರ ಐಗುಪ್ತಕ್ಕೆ ಮಿದ್ಯಾನ್ಯರೊಂದಿಗೆ ಹೋದ ಯೋಸೇಫನು ಫೋಟಿಫರನಿಗೆ ದಾಸನಾಗಿ ಮಾರಲ್ಪಟ್ಟು, ಫೋಟಿಫರನ ಹೆಂಡತಿಯಿಂದ ಸುಳ್ಳು ಆಪಾದನೆ ಹೊರಿಸಲ್ಪಟ್ಟು 3 ವರುಷಗಳು ಸೆರೆವಾಸ ಅನುಭವಿಸಬೇಕಾಯಿತು. ಆದರೆ ದೇವರು, ಯೋಸೇಫನನ್ನು ಮರೆತು ಹೋಗಲಿಲ್ಲ. ಸತ್ಯಕ್ಕಾಗಿಯೂ, ಪರಿಶುದ್ಧತೆಗಾಗಿಯೂ ವೈರಾಗ್ಯದಿಂದ ನಿಂತ ಯೋಸೇಫನನ್ನು ಐಗುಪ್ತದಲ್ಲಿ ಫರೋಹನಿಗೆ ಎರಡನೆಯ ಸ್ಥಾನದಲ್ಲಿ ನಿಲ್ಲಿಸಿದನು, ಅಷ್ಟು ವರುಷಗಳು, ಅನುಭವಿಸಿದ ಅವನ ಕಷ್ಟ ಸಂಕಟಗಳಿಗೆ ಒಂದು ಅಂತ್ಯ ಬಂದಿತು.

ಆನಂತರ ಸುಮಾರು ಎಂಬತ್ತು ವರುಷಗಳು ಅವನು ತನ್ನ ತಂದೆಯನ್ನೂ ಸಹೋದರರನ್ನು ಕಾಪಾಡಿದನು. ಇದೇ ರೀತಿಯೇ, ಬಹಳ ಚಿಕ್ಕ ಪ್ರಾಯದಲ್ಲೇ ಕೆಲಸ ಹುಡುಕಿ ಚೆನ್ನೈ ಪಟ್ಟಣಕ್ಕೆ ಬಂದ ನನಗೆ ಅನೇಕ ಕಷ್ಟ ಇಕ್ಕಟ್ಟುಗಳು ಎದುರಾದರೂ, ಕರ್ತನು ನನ್ನನ್ನು ನಡೆಸಿ, ಆದಾಯ ತೆರಿಗೆ ಇಲಾಖೆಯಲ್ಲಿ ಒಳ್ಳೆಯ ಉದ್ಯೋಗ ದೊರಕಿಸಿ ಕೊಟ್ಟನು. ಸಂಸಾರವನ್ನು ಕಟ್ಟಿಕೊಟ್ಟನು. ಎಲ್ಲದಕ್ಕಿಂತ ಮಿಗಿಲಾಗಿ ತನ್ನ ಸೇವೆಗೆ ಆರಿಸಿಕೊಂಡು ಇದುವರೆಗೂ ಅನೇಕ ಆತ್ಮೀಕ ಪುಸ್ತಕಗಳನ್ನು ಬರೆಯುವ ಅವಕಾಶ ನೀಡಿರುವನು. ಯೋಸೇಫನ ಉಪಕಾರವನ್ನು ಸೆರೆಮನೆಯಲ್ಲಿದ್ದ ಫರೋಹನನ ಪಾನ ಪಾತ್ರೆಗಾರನು ಮರೆತು ಬಿಟ್ಟನು. ಆದರೆ ಕರ್ತನು ಯೋಸೇಫನನ್ನು ಮರೆಯಲಿಲ್ಲ. ಮನುಷ್ಯರು, ನಿಮ್ಮನ್ನು ಮರೆತು ಬಿಡಬಹುದು. ಆದರೆ ಕರ್ತನು ನಿಮ್ಮನ್ನು ಮರೆಯುವದಿಲ್ಲ. ಅರಸನಾದ ಅಹಷ್ವೇರೋಷನನ್ನು ಕೊಲೆ ಮಾಡಲು ಸಂಚುಮಾಡಿದವರನ್ನು ಮೊರ್ದೆಕೈ ಬಹಿರಂಗಪಡಿಸಿ ಅರಸನ ಪ್ರಾಣವನ್ನು ಮರಣಕ್ಕೆ ತಪ್ಪಿಸಿದನು. ಆದರೆ ಅವನನ್ನು ಎಲ್ಲರೂ ಮರೆತು ಬಿಟ್ಟರು. ಆದರೆ ಕರ್ತನು ಅವನನ್ನು ಮರೆಯಲಿಲ್ಲ. ಮೊರ್ದೆಕೈಯನ್ನು ಅರಸನ ಆಸ್ಥಾನದಲ್ಲಿ ಉನ್ನತ ಹುದ್ದೆಗೆ ಏರಿಸಿದನು.

ದೇವಮಕ್ಕಳೇ, ಕರ್ತನು ಭೂನಿವಾಸಿಗಳಿಗೆ ನ್ಯಾಯ ತೀರಿಸಲಿಕ್ಕೆ ಬರುತ್ತಾನೆ. ಆತನು ಲೋಕಕ್ಕೆ ನೀತಿಗನುಸಾರವಾಗಿಯೂ ಜನಾಂಗಗಳಿಗೆ ಯಥಾರ್ಥವಾಗಿಯೂ ತೀರ್ಪುಕೊಡುವನು. ನೀವು ಮಾಡಿದ ಒಳ್ಳೆಯ ಕಾರ್ಯಗಳಿಗೆ ಬದಲಾಗಿ ಜನರು ಕೆಟ್ಟದ್ದನ್ನು ಮಾಡಬಹುದು. ಆದರೆ ಕರ್ತನು, ನಿಮ್ಮ ಎಲ್ಲಾ ಸತ್ಕಾರ್ಯಗಳನ್ನು ತನ್ನ ನೆನಪಿನಲ್ಲಿ ಇಟ್ಟುಕೊಂಡು ತಕ್ಕ ಸಮಯದಲ್ಲಿ ನಿಮ್ಮನ್ನು ಉನ್ನತಿಗೆ ತರುವನು.

**ನೆನಪಿಗೆ : 'ಆತನು ಇಸ್ರಾಯೇಲನ ಮನೆತನದವರ ಕಡೆಗಿದ್ದ ತನ್ನ ಪ್ರೀತಿ ಸತ್ಯತೆಗಳನ್ನು ನೆನಪು ಮಾಡಿಕೊಂಡಿದ್ದಾನೆ, ಭೂಲೋಕದ ಎಲ್ಲಾ ಕಡೆಯವರೂ ನಮ್ಮ ದೇವರ ರಕ್ಷಾಕಾರ್ಯವನ್ನು ನೋಡಿದ್ದಾರೆ' (ಕೀರ್ತ 98:3).**

| | | |
|---|---|---|
| **ಜನವರಿ 15** | **ಬತ್ತಿಹೋಗದ ನೀರಿನ ಬುಗ್ಗೆ!** | ಬೆಳಗ್ಗೆ : ಆದಿ 36,37,38<br>ಸಂಜೆ : ಮತ್ತಾ 10:24-42 |

**'ನೀವು....ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನವಾಗುವಿರಿ' (ಯೆಶಾ 58:11).**

ನೀವು ಬತ್ತಿಹೋಗದ ನೀರಿನ ಬುಗ್ಗೆ! ನಿಮ್ಮ ಕುಟುಂಬಕ್ಕೂ ದೇಶಕ್ಕೂ ಕರ್ತನಿಂದ, ಏರ್ಪಡಿಸಿದ ಒಂದು ಆಶೀರ್ವಾದದ ಬುಗ್ಗೆಯಾಗಿರುವಿರಿ. ಕರ್ತನಿಗಾಗಿ ಮಹಿಮೆಯಾದ ಕಾರ್ಯಗಳನ್ನು ಮಾಡಲು ಆರಿಸಿಕೊಂಡ ಅಭಿಷೇಕದ ಬುಗ್ಗೆಯಾಗಿರುವಿರಿ. ಯಾರೂ ಒಣಗಿದ, ಬತ್ತಿದ ಭೂಮಿಯನ್ನು ಬಯಸುವದಿಲ್ಲ. ನಾವು, ನಮಗೆ ಪ್ರಿಯವಾದದ್ದನ್ನು ಹಸಿದವರಿಗೆ ಒದಗಿಸಿ ಕುಗ್ಗಿದವರ ಆಶೆಯನ್ನು ನೆರವೇರಿಸಿದರೆ ಕರ್ತನು ನಮ್ಮನ್ನು ನಿತ್ಯವೂ ನಡಿಸುತ್ತಾ ಮರುಭೂಮಿಯಲ್ಲಿಯೂ ನಮ್ಮ ಆತ್ಮವನ್ನು ತೃಪ್ತಿಗೊಳಿಸಿ ನಮ್ಮ ಎಲುಬುಗಳನ್ನು ಸಸಾರಮಾಡುವನು.

ನೀರಿನ ಬುಗ್ಗೆಯಲ್ಲಿ ಹಗಲಿರುಳು ನೀರು ಚಿಮ್ಮಿ ಹರಿಯುತ್ತಲೇ ಇರುತ್ತದೆ. "ಕರ್ತನ ಕೃಪೆಯಿಂದ, ನಾನು ನನ್ನ ಜೀವಿತಕಾಲವೆಲ್ಲಾ ಬತ್ತಿಹೋಗದ ನೀರಿನ ಬುಗ್ಗೆಯಂತೆ ಆತ್ಮದಲ್ಲಿ ಬೆಳೆಯುತ್ತಲೇ ಇರುವೆನು" ಎಂದು ನೀವು ವಿಶ್ವಾಸ ಅರಿಕೆ ಮಾಡಿರಿ. ಆಗ ಕರ್ತನು ನಿಮ್ಮನ್ನು ಆಶೀರ್ವಾದ ಬುಗ್ಗೆಯಾಗಿ, ಸಾವಿರಾರು ಜನರಿಗೆ ಉಪಯೋಗಉಳ್ಳ ಪಾತ್ರೆಯನ್ನಾಗಿ ಇಡುವನು. ನೀರಿನ ಬುಗ್ಗೆ ಎಲ್ಲಿ ಇರುವದೋ ಅದರಿಂದ ಹೊರಹೊಮ್ಮುವ ನೀರು ಎಲ್ಲೆಲ್ಲಿ ಹರಿಯುವದೋ ಅಂಥಹ ಸ್ಥಳಗಳಲ್ಲಿ ಗಿಡ ಮರಗಳು ಸೊಂಪಾಗಿ ಬೆಳೆಯುವವು. ಅಲ್ಲಿ ಸಮೃದ್ಧಿಯನ್ನೂ ಕಾಣಬಹುದು. ಅದೇ ರೀತಿಯಲ್ಲಿ ಒಬ್ಬ ವಿಶ್ವಾಸಿ, ಆತ್ಮೀಕ ರೀತಿಯಲ್ಲಿ ಬೆಳೆಯಲು ತನ್ನನ್ನು ಕರ್ತನಿಗೆ ಒಪ್ಪಿಸಿಕೊಡುವಾಗ, ಕರ್ತನು ಅವನನ್ನು ತನ್ನ ಆತ್ಮನ ವರಗಳಿಂದಲೂ ಪವಿತ್ರಾತ್ಮನ ಫಲಗಳಿಂದಲೂ ತುಂಬಿಸುವನು. ಅವನ ಸುತ್ತಲೂ ಇರುವವರಿಗೆ ಉಪಯೋಗಉಳ್ಳ ಪಾತ್ರೆಯನ್ನಾಗಿಯೂ, ಆಶೀರ್ವಾದದ ನಿಧಿಯಾಗಿಯೂ ಇಡುವನು. ಒಂದು ನೀರಿನ ಬುಗ್ಗೆಯು ಯಾವ ರೀತಿಯ ಸ್ವಾರ್ಥವಿಲ್ಲದೆ ಒಳಿತಿಗಾಗಿ, ಉಪಯೋಗಿಸಲ್ಪಡುವದೋ, ಅದೇ ರೀತಿಯಲ್ಲಿ ಕರ್ತನ ಆಶೀರ್ವಾದಗಳನ್ನು ಹೊಂದಿದ ವಿಶ್ವಾಸಿ, ತನಗೆ ಕರ್ತನಿಂದ ಕೊಡಲ್ಪಟ್ಟ ತಲಾಂತುಗಳನ್ನು, ವರಗಳನ್ನು ಇತರರ ಒಳಿತಿಗಾಗಿ ಉಪಯೋಗಿಸುವಾಗ ಅವನು ಕರ್ತನಿಗಾಗಿ ಎದ್ದು ಪ್ರಕಾಶಿಸುವನು.

ದೇವಜನರೇ, ಒಂದು ವೇಳೆ ನೀವು ಕೆಲಸವಿಲ್ಲದೆ ಕಷ್ಟದಲ್ಲಿರಬಹುದು. ಸಾಲದ ಸಮಸ್ಯೆಯಲ್ಲಿ ಸಿಲುಕಿರಬಹುದು. ಅಯ್ಯೋ, ನಾನು ಯಾರಿಗೂ ಪ್ರಯೋಜನಕ್ಕೆ ಬಾರದೇ ಇರುವೆನಲ್ಲಾ, ಎಂದು ಹಲಬುತ್ತಿರಬಹುದು. ಚಿಂತಿಸದಿರಿ, ಇಂದೇ ಕರ್ತನ ಬಳಿಗೆ ಬಂದು, ನಿಮ್ಮನ್ನೂ ನಿಮ್ಮ ಸಮಸ್ಯೆಗಳನ್ನು ಆತನ ಕೈಗಳಲ್ಲಿ ಒಪ್ಪಿಸಿಕೊಟ್ಟು ಕರ್ತನೇ ನನ್ನನ್ನು ತಂಪಾದ ತೋಟದಂತೆಯೂ, ನೀರಿಗೆ ಮೋಸವಿಲ್ಲದ ನೀರಿನ ಬುಗ್ಗೆಯಂತೆಯೂ ಮಾರ್ಪಡಿಸು ಎಂದು ಬೇಡಿರಿ. ಕರ್ತನು ನಿಶ್ಚಯವಾಗಿ ನಿಮ್ಮನ್ನು ಆಶೀರ್ವದಿಸುವನು.

**ನೆನಪಿಗೆ : ಆತನು ಬಂಡೆಯನ್ನು ಕೆರೆಯನ್ನಾಗಿಯೂ ಶಿಲೆಯನ್ನು ಬುಗ್ಗೆಯನ್ನಾಗಿಯೂ ಮಾರ್ಪಡಿಸುತ್ತಾನೆ' (ಕೀರ್ತ 114:8).**



| | | |
|---|---|---|
| **ಜನವರಿ 16** | **ತೆರೆಯಲ್ಪಟ್ಟ ಜೀವದ ಬುಗ್ಗೆ!** | ಬೆಳಗ್ಗೆ : ಆದಿ 39,40<br>ಸಂಜೆ : ಮತ್ತಾ 11 |

**'ಆ ದಿನಗಳಲ್ಲಿ ಪಾಪವನ್ನೂ ಅಶುಚಿಯನ್ನೂ ಪರಿಹರಿಸತಕ್ಕ ಒಂದು ಬುಗ್ಗೆಯು ದಾವೀದ ವಂಶದವರಿಗೂ ಯೆರೂಸಲೇಮಿನವರಿಗೂ ತೆರೆದಿರುವದು' (ಜೆಕರ್ಯ 13:1).**

'ತೆರೆದಿರುವ ಬುಗ್ಗೆ' ಅದು ಇಮ್ಮಾನುವೇಲನಾದ ಕ್ರಿಸ್ತನ ಶರೀರದಿಂದ ಹೊರಟು ಬರುವ ರಕ್ತದ ಬುಗ್ಗೆ. ನಮ್ಮ ಅಕ್ರಮದ ನಿಮಿತ್ತ, ಗಾಯಹೊಂದಿ, ನಮ್ಮ ಅನೀತಿ ಅಪರಾಧಗಳ ನಿಮಿತ್ತ ಜಜ್ಜಲ್ಪಟ್ಟು ಶರೀರದಿಂದ ಹೊರಟು ಬಂದು ನಮ್ಮ ಶಾಪಗಳನ್ನು, ಅಪರಾಧಗಳನ್ನೂ ಅಕ್ರಮಗಳನ್ನು ಕ್ಷಮಿಸುವ ಕೃಪೆಯೆಂಬ ಬುಗ್ಗೆಯಾಗಿದೆ. ನೀವು ಪಾಪವಿಲ್ಲದೆ ಪರಿಶುದ್ಧ ನಿಷ್ಕಳಂಕ ಮಕ್ಕಳಾಗಿರಬೇಕೆಂಬುದು ಆತನ ಬಯಕೆಯಾಗಿದೆ. ಹಾಗೆಯೇ ನಿಮಗಾಗಿ ಸುರಿಸಲ್ಪಟ್ಟ ಯಜ್ಞದ ಕುರಿಯ ರಕ್ತವನ್ನು ನಿಮ್ಮ ಮನೆಯ ಬಾಗಿಲಿಗೆ ಹಚ್ಚಿದರೆ ಮಾಟಮಂತ್ರ ಶಕ್ತಿಗಳು ನಿಮ್ಮನ್ನು ತಾಕುವುದೇ ಇಲ್ಲ.

ಕ್ರಿಸ್ತನ ಶ್ರಮೆಯ ಕುರಿತಾದ ಪ್ರವಾದನೆ, ಕೀರ್ತನೆ 22:16ರಲ್ಲಿ ಹೀಗೆ ಬರೆಯಲ್ಪಟ್ಟಿರುವದು – "ನಾಯಿಗಳು ನನ್ನನ್ನು ಸುತ್ತಿಕೊಂಡಿವೆ. ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿವೆ. ನನ್ನ ಕೈಕಾಲುಗಳನ್ನು ತಿವಿದಿದ್ದಾರೆ" ಎಂದು ಕ್ರಿಸ್ತನು ಪುನರುತ್ಥಾನದ ನಂತರ, ತಿವಿಯಲ್ಪಟ್ಟ ತನ್ನ ಕೈಗಳನ್ನು ಚಾಚಿ, ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿನೋಡು; ನಿನ್ನ ಕೈ ಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು ಎಂದು ತನ್ನ ಶಿಷ್ಯನಾದ ತೋಮನಿಗೆ ಹೇಳುತ್ತಾನೆ (ಯೋಹಾ 20:27). ಇಂದು ಅನೇಕರು ಹೆಸರಿನ ರಾಶಿಯ ಮೇಲೂ, ಜ್ಯೋತಿಷಿಗಳ ಮೇಲೂ ನಂಬಿಕೆ ಉಳ್ಳವರಾಗಿರುವರು, ಅವರ ಮುಂದೆ ತಮ್ಮ ಕೈಗಳನ್ನು ಚಾಚಿ ತಮ್ಮ ಭವಿಷ್ಯತ್ಕಾಲ ಹೇಗಿರುವದು? ಎಂದು ವಿಚಾರಿಸುವರು. ಆದರೆ ಯಾರ ಕೈಗಳು ಪಾಪದ ಕರೆಯಿಂದ ಕೂಡಿದ್ದಾಗಿರುವದೋ, ಅವರಿಗೆ ಒಳ್ಳೆಯ ಕಾಲ ಬರುವದೇ ಇಲ್ಲ. ಅದೇ ವೇಳೆಯಲ್ಲಿ ಯಾರ್ಯಾರ ಕೈಗಳು, ಯೇಸುಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟಿರುವದೋ, ಶುದ್ಧೀಕರಿಸಲ್ಪಟ್ಟಿರುವದೋ, ಅವರು ಭಾಗ್ಯವಂತರಾಗಿರುವರು. "ಯಾವನ ಪಾಪ ಪರಿಹಾರವಾಗಿದೆಯೋ, ಯಾವನ ಪಾಪಕ್ಷಮಿಸಲ್ಪಟ್ಟಿದೆಯೋ ಅವನೇ ಧನ್ಯನು" (ಕೀರ್ತ 32:1) ಎಂದು ದಾವೀದನು ಹೇಳುತ್ತಾನೆ.

ದೇವಮಕ್ಕಳೇ, ಕರ್ತನು ನಿಮ್ಮ ಪಾಪಗಳನ್ನು ತೊಳೆಯುವದಕ್ಕಾಗಿಯೇ, ನಿಮ್ಮನ್ನು ಆರಿಸಿಕೊಂಡು, ತನ್ನ ಕೈಗಳಲ್ಲಿ ಹಿಡಿದಿರುವನು. ಕೃಪೆಯ ಕಾಲ ಮುಗಿಯುವಾಗ, ಕ್ರಿಸ್ತ ವಿರೋಧಿಯ ಕಾಲ ಪ್ರಾರಂಭವಾಗುವದು. ಪವಿತ್ರಾತ್ಮನು, ದೇವಮಕ್ಕಳು ಎತ್ತಲ್ಪಡುವರು, ರಕ್ಷಣೆಯು ಹತ್ತಿರವಾಗಿರುವ ಈ ದಿನಗಳಲ್ಲಿ ಶಿಲುಬೆಯ ಬಳಿ ಬಂದು ಜಜ್ಜಿದ ಹೃದಯದಿಂದ "ಅಪ್ಪಾ ನನ್ನ ಪಾಪಗಳನ್ನೆಲ್ಲ ಕ್ಷಮಿಸಿ, ಇಂದು ನನಗೆ ರಕ್ಷಣೆ ನೀಡು" ಎಂದು ಕೇಳಿರಿ. ನೀವು ನಿಜವಾದ ಪಶ್ಚಾತ್ತಾಪದಿಂದ ಬೇಡುವಿರಾದರೆ ಕರ್ತನು ನಿಶ್ಚಯವಾಗಿ ನಿಮ್ಮನ್ನು ಕ್ಷಮಿಸುವನು.

**ನೆನಪಿಗೆ : 'ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು, ಅವುಗಳನ್ನು ಒಪ್ಪಿಕೊಂಡು ಬಿಟ್ಟು ಬಿಡುವವರಿಗೆ ಕರುಣೆ ದೊರೆಯುವದು' (ಜ್ಞಾನೋ 28:13).**

ಜನವರಿ 17 | **ಕಣ್ಣೀರು ಒಂದು ನೀರಿನ ಬುಗ್ಗೆ!** | ಬೆಳಗ್ಗೆ : ಆದಿ 41,42 ಸಂಜೆ : ಮತ್ತಾ 12:1–21

**'ಅಯ್ಯೋ, ನನ್ನ ಶಿರಸ್ಸು ಜಲಮಯವಾಗಿಯೂ, ನನ್ನ ನೇತ್ರಗಳು ಕಣ್ಣೀರಿನ ಬುಗ್ಗೆಯಾಗಿಯೂ ಇದ್ದರೆ ಎಷ್ಟೋ ಲೇಸು' (ಯೆರೆಮಿಾಯ 9:1).**

ಕರ್ತನು ಜಜ್ಜಿದ, ಮುರಿದ ಮನಸ್ಸಿನಿಂದ ತನ್ನ ಮಕ್ಕಳು ಕಣ್ಣೀರಿಡುವದನ್ನು ಸಹಿಸುವದಿಲ್ಲ. ಅದನ್ನು ಕಂಡು, ಮನಮರುಗಿ, ನಿಶ್ಚಯವಾಗಿ ತನ್ನ ಮಕ್ಕಳ ಅಗತ್ಯತೆಯನ್ನು ಪೂರೈಸುವನು, ಅದ್ಭುತಗಳನ್ನು ಮಾಡುವನು.

ನಾಲ್ಕು ಗಂಟೆಗಳು ಪ್ರಾರ್ಥಿಸುವದಕ್ಕಿಂತಲೂ ಅರ್ಧ ಗಂಟೆ ಮನಮುರಿದವರಾಗಿ ಕಣ್ಣೀರಿನಿಂದ ಪ್ರಾರ್ಥಿಸುವದು ಹೆಚ್ಚಿನ ಫಲ ನೀಡುವದು. ಆದ್ದರಿಂದಲೇ ದೇವರ ಸೇವಕರು ಕಣ್ಣೀರನ್ನು ಪ್ರಯತ್ನಿಸಿ ನೋಡು ಎಂದು ಹೇಳುವರು. ಎಷ್ಟೇ ಪ್ರಯಾಸಪಟ್ಟು ಸುವಾರ್ತೆ ಸಾರಿದರೂ, ಆತ್ಮಗಳ ಆದಾಯವಾಗಲಿಲ್ಲವಾ? ಗಂಡನಿಗಾಗಿ ಹೆಂಡತಿಗಾಗಿ ಮಕ್ಕಳಿಗಾಗಿ ಎಷ್ಟೇ ಪ್ರಾರ್ಥಿಸಿದರೂ ರಕ್ಷಿಸಲ್ಪಡಲಿಲ್ಲವಾ? ಕಣ್ಣೀರನ್ನು ಪ್ರಯತ್ನಿಸಿ ನೋಡಿರಿ. ಕಣ್ಣೀರಿನೊಂದಿಗೆ ಸೇರಿ, ಕೃಪೆಯ ಆತ್ಮವೂ, ವಿಜ್ಞಾಪಿಸುವ ಆತ್ಮವೂ ಬರುವದು. ಮುರಿದ ಮನಸ್ಸಿನಿಂದ ಕಣ್ಣೀರು ಉಕ್ಕಿ ಹರಿಯುವದು. "ಹಾಗೆಯೇ, ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ, ಹೇಗಂದರೆ ನಾವು ದೇವರ ಅಪೇಕ್ಷೆಯಂತೆ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ" (ರೋಮಾ 8:26) ಎಂದು ದೇವರ ವಾಕ್ಯ ಹೇಳುತ್ತದೆ.

ಯೇಸುಕ್ರಿಸ್ತನೂ ಈ ಭೂಮಿಯಲ್ಲಿದ್ದಾಗ, ಕಣ್ಣೀರಿಟ್ಟು ಪ್ರಾರ್ಥಿಸಿದ್ದನ್ನು ಸತ್ಯವೇದ ತಿಳಿಸುತ್ತದೆ. ತನ್ನ ಸ್ನೇಹಿತನಾದ ಲಾಜರನ ಸಮಾಧಿಯ ಬಳಿ ನಿಂತು ಕಣ್ಣೀರು ಸುರಿಸಿದನು (ಯೋಹಾ 11:35). ಯೆರೂಸಲೇಮ್ ಪಟ್ಟಣವನ್ನು ನೋಡಿ ಯೇಸು ಕಣ್ಣೀರಿಟ್ಟನು (ಲೂಕ 19:41). ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ, ಮರಣಕ್ಕೆ ತಪ್ಪಿಸಿ ಕಾಪಾಡಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಮಾಡಿದನೆಂದು ಇಬ್ರಿಯ 5:7 ರಲ್ಲಿ ಬರೆಯಲ್ಪಟ್ಟಿರುವದು. ಅನೇಕ ದೇವಭಕ್ತರು ಕಣ್ಣೀರಿನ ತಗ್ಗಿನಲ್ಲಿಯೇ ನಡೆದು, ಅದನ್ನು ಜೀವದ ಬುಗ್ಗೆಯನ್ನಾಗಿ ಮಾಡಿಕೊಂಡಿರುವ ನಿದರ್ಶನಗಳಿರುವವು.

ದೇವಮಕ್ಕಳೇ, ಹಿಜ್ಕೀಯ ರಾಜನ ಕಣ್ಣೀರನ್ನು ಕಂಡ ಕರ್ತನು, ಅವನ ಆಯುಷ್ಕಾಲವನ್ನು ಹದಿನೈದು ವರುಷಗಳನ್ನು ಹೆಚ್ಚಿಸಿದಂತೆ ನಿಮ್ಮ ಕಣ್ಣೀರನ್ನು ಆನಂದ ಭಾಷ್ಪವಾಗಿ ಮಾರ್ಪಡಿಸಲು ಶಕ್ತನಾಗಿರುವನು. ನಿಮ್ಮ ಎಲ್ಲಾ ದುಃಖದಲ್ಲಿ ಆತನು ಕಣ್ಣೀರಿಡುತ್ತಾನೆ. ನೀವು ದುಃಖದಿಂದ ಕಣ್ಣೀರಿಡುವುದನ್ನು ನೋಡಿದರೆ ಆತನಿಗೆ ಸಹಿಸಲಾಗುವುದಿಲ್ಲ, ನಮ್ಮನ್ನು ಎಲ್ಲಾ ವಿಷಯಗಳಲ್ಲಿ ಸಂತೈಸುವನು.

**ನೆನಪಿಗೆ : 'ಸಿಂಹಾಸನದ ಮಧ್ಯದಲ್ಲಿರುವ ಯಜ್ಞದ ಕುರಿಯದಾತನು ಅವರಿಗೆ ಕುರುಬನಂತಿದ್ದು ಜೀವಜಲದ ಒರತೆಗಳ ಬಳಿಗೆ ನಡಿಸುತ್ತಾನೆ. ದೇವರು ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು' (ಪ್ರಕ 7:17).**



ಜನವರಿ 18 | **ಬೋಧನೆಯೆಂಬ ಬುಗ್ಗೆ!** | ಬೆಳಗ್ಗೆ : ಆದಿ 43,44,45 ಸಂಜೆ : ಮತ್ತಾ 12:22–50

**'ಜ್ಞಾನಿಯ ಬೋಧೆ ಜೀವದ ಬುಗ್ಗೆ ಅದನ್ನಾಲಿಸುವವನು ಮೃತ್ಯುಪಾಶದಿಂದ ತಪ್ಪಿಸಿಕೊಳ್ಳುವನು' (ಜ್ಞಾನೋ 13:14).**

ಪ್ರಪಂಚದಲ್ಲಿ ಹಲವು ರೀತಿಯ ಉರುಲುಗಳ ಬಲೆಗಳ ಕುರಿತು ಓದುತ್ತೇವೆ. ಅವುಗಳಲ್ಲಿ ಕೆಲವು ಆತ್ಮಕ್ಕೆ ವಿರೋಧವಾಗಿ ಮಾಡಲ್ಪಟ್ಟ ಮಾಟಮಂತ್ರಗಳು, ಶೋಧನೆಗಾರನಾದ ಸೈತಾನನು ಇಂಥಹ ಮರಣದ ಉರುಲುಗಳನ್ನು ದೇವಮಕ್ಕಳ ವಿರೋಧವಾಗಿ ಇಡುವನು. ಅದಕ್ಕೆ ತಪ್ಪಿಸಿಕೊಳ್ಳುವ ಮಾರ್ಗ ಯಾವದು ಅದುವೇ, ಜೀವದ ಬುಗ್ಗೆಯಾದ, ಜ್ಞಾನಿಗಳ ಬೋಧನೆ.

ಇಸ್ರಾಯೇಲ್ಯರಿಗೆ ಇಟ್ಟಿದ್ದ ಹಲವು ಉರುಲುಗಳ ಕುರಿತು ದೇವರು ಅವರನ್ನು ಎಚ್ಚರಿಸಿದನು. ಅನ್ಯ ದೇವತೆಗಳನ್ನು ಸೇವಿಸುವದು ಒಂದು ಉರುಲಾಗಿರುವದು (ವಿಮೋ 23:33). ಅವರ ಹಬ್ಬಗಳು, ಆಚಾರ ವಿಚಾರಗಳು ಹೇಗೆ ಉರುಲಾಗಿ ಇರುವದು ಎಂಬುದನ್ನು ಯೆಹೋಶುವನು ವಿವರಿಸಿದನು (ಯೆಹೋ 23:13). ನಿಷಿದ್ಧವಾದ ಒಡಂಬಡಿಕೆಗಳು ಸಂಬಂಧಗಳು ಹೇಗೆ ಉರುಲಾಗಿ ಮಾರ್ಪಡುವದೆಂದು ವಿಮೋ 34:12ರಲ್ಲಿ ಯೆಹೋಶುವನು ಎಚ್ಚರಿಸಿದನು. ಮಹಾಬಲಶಾಲಿಯಾದ ಸಂಸೋನನಿಗೆ, ಸೈತಾನನು ಉರುಲನ್ನೊಡ್ಡಿದನು. ಅದುವೇ ಅನ್ಯ ಸ್ತ್ರೀಯರು. ಅವನು ತನ್ನ ಜನಾಂಗವಾದ ಇಬ್ರಿಯರಲ್ಲಿ ಹೆಣ್ಣು ಹುಡುಕದೆ, ತನಗೆ ಇಷ್ಟ ಬಂದಂತೆ ಶಾರೀರಿಕ ಇಚ್ಛೆಯಂತೆ ಫಿಲಿಷ್ಟಿಯ ಹೆಣ್ಣುಗಳನ್ನು ಆರಿಸಿಕೊಂಡನು. ಅದರಲ್ಲೂ ವೇಶ್ಯೆಯಾದ ದೆಲೀಲಳೊಂದಿಗೆ ಸಂಪರ್ಕ ಹೊಂದಿ ಆ ಉರುಲಿನಲ್ಲಿ ಸಿಕ್ಕಿ ಬಿದ್ದನು. ದೇವರ ಅಭಿಷೇಕವನ್ನು ಕಳೆದುಕೊಂಡು, ಕಣ್ಣು ಕೀಳಲ್ಪಟ್ಟು ಸೆರೆಮನೆಯಲ್ಲಿ ಹಿಟ್ಟು ಬೀಸ ಬೇಕಾಯಿತು. ಇಲಿಗೆ ಮಸಾಲೆ ವಡೆ ಇಡುವಂತೆ ದಾವೀದನಿಗೆ ಅವನ ಮಾವನಾದ ಸೌಲನು ತನ್ನ ಸ್ವಂತ ಮಗಳನ್ನೇ ಉರುಲಾಗಿ ಇಟ್ಟನು (1ಸಮು 18:20,21). ದಾವೀದನೋ, ಕರ್ತನನ್ನೇ ನಂಬಿದವನು. ದೇವರ ಆಲೋಚನೆಯನ್ನು ಯಾವಾಗಲೂ ಬಯಸಿದವನು. ಜ್ಞಾನಿಯ ಬೋಧೆ ಜೀವದ ಬುಗ್ಗೆ, ಅದನ್ನಾಲಿಸುವವನು ಮೃತ್ಯುಪಾಶದಿಂದ ತಪ್ಪಿಸಿಕೊಳ್ಳುವನು (ಜ್ಞಾನೋ 13:14) ಎಂಬ ವಾಕ್ಯದಂತೆ ಕರ್ತನನ್ನು ತನ್ನ ಜ್ಞಾನವಾಗಿಸಿಕೊಂಡ ದಾವೀದನು ಇಂಥಹ ಉರುಲುಗಳಿಂದ ತಪ್ಪಿಸಿಕೊಂಡನು.

ದೇವಜನರೇ, ಕರ್ತನ ಪ್ರಸನ್ನತೆಯನ್ನು ಹುಡುಕಿ ನೀವು ಓಡುವಿರಾದರೆ, ಆತನು ನಿಮ್ಮನ್ನು ಬೇಟೆಗಾರನ ಬಲೆಯಿಂದಲೂ, ಮರಣಕರ ವ್ಯಾಧಿಯಿಂದಲೂ ತಪ್ಪಿಸುವನು' ಇರುಳಲ್ಲಿ ಭಯಹುಟ್ಟಿಸುವ ಯಾವದಕ್ಕೂ ಹಗಲಲ್ಲಿ ಹಾರಿ ಬರುವ ಬಾಣಕ್ಕೂ ಕತ್ತಲೆಯಲ್ಲಿ ಸಂಚರಿಸುವ ವಿಪತ್ತಿಗೂ ಹಾನಿಕರವಾದ ಮಧ್ಯಾಹ್ನದ ಕೇಡಿಗೂ ಅಂಜಕಾರಣವಿಲ್ಲ (ಕೀರ್ತ 91:3,5,6). ಉರುಲುಗಳಿಗೆ ತಪ್ಪಿಸಿಕೊಳ್ಳುವಂತೆ ಕರ್ತನ ಬಳಿಗೆ ಬನ್ನಿರಿ. ಯೇಸುವಿನ ರಕ್ತ ಉರುಲುಗಳನ್ನು ಮುರಿದು ಹಾಕುವದು.

**ನೆನಪಿಗೆ : 'ಆಜ್ಞೆಯೇ ದೀಪ ಉಪದೇಶವೇ ಬೆಳಕು ಶಿಕ್ಷಣ ಪೂರ್ವಕವಾದ ಬೋಧನೆಯೇ ಜೀವದ ಮಾರ್ಗ' (ಜ್ಞಾನೋ 6:23).**

| ಜನವರಿ 19 | **ಯೆಹೋವನ ಭಯ ಜೀವದ ಬುಗ್ಗೆ!** | ಬೆಳಿಗ್ಗೆ : ಆದಿ 46,47,48<br>ಸಂಜೆ : ಮತ್ತಾ 13:1–30 |
|---|---|---|

**‘ಯೆಹೋವನ ಭಯ ಜೀವದ ಬುಗ್ಗೆ; ಮೃತ್ಯುಪಾಶದಿಂದ ತಪ್ಪಿಸಿಕೊಳ್ಳಲು ಅದು ಸಾಧನ’ (ಜ್ಞಾನೋ 14:27).**

ಜ್ಞಾನಿಗಳ ಬೋಧೆ, ಜೀವದ ಬುಗ್ಗೆ ಎಂದು ಹೇಳಿದ ಸೊಲೊಮೋನನು (ಜ್ಞಾನೋ 13:14) ಯೆಹೋವನಿಗೆ ಭಯಪಡುವದು ಜೀವದ ಬುಗ್ಗೆ ಎಂದೂ ಹೇಳುವನು. ಎರಡನ್ನೂ ಒಟ್ಟಿಗೆ ನೋಡುವಾಗ, ಜ್ಞಾನಿಗಳ ಬೋಧೆ ಯೆಹೋವನ ಭಯ, ನಿಮ್ಮನ್ನು ಮೃತ್ಯುಪಾಶದಿಂದ ತಪ್ಪಿಸುವದು. ಅನೇಕ ಜನರು, ಮೃತ್ಯುಪಾಶಕ್ಕೆ ಸಿಕ್ಕಿಕೊಳ್ಳಲು ಮುಖ್ಯವಾದ ಕಾರಣ, ಅವರ ಬಾಯಿ ನಾಲಿಗೆಯೇ ಆಗಿರುವದು. "ಜೀವನ ಮರಣಗಳು ನಾಲಿಗೆಯ ವಶ ವಚನ ಪ್ರಿಯರು ಅದರ ಫಲವನ್ನು ಅನುಭವಿಸುವರು" "ಜ್ಞಾನಹೀನನಿಗೆ ಬಾಯಿ ನಾಶ, ತುಟಿಗಳು ಪಾಶ" (ಜ್ಞಾನೋ 18:7,21).

ದಾವೀದ ರಾಜನು ಕರ್ತನ ಬಳಿ ಪ್ರಾರ್ಥಿಸುವಾಗ, ಯೆಹೋವನೇ, ನನ್ನ ಬಾಯಿಗೆ ಕಾವಲಿರಿಸು (ಕೀರ್ತ 141:3) ಎಂದು ಹೇಳಿ ಪ್ರಾರ್ಥಿಸಿದನು. ಮನೆಯನ್ನು ಕಾಯಲು ಸೆಕ್ಯುರಿಟಿ, ಗುರ್ಖಾಗಳನ್ನು ನೇಮಿಸುವರು. ಆದರೆ ಅದಕ್ಕಿಂತ ಆತ್ಮಕ್ಕೆ ನಿಜವಾಗಿ ಕಾವಲು ಬೇಕು. "ತನ್ನ ಬಾಯನ್ನೂ ನಾಲಿಗೆಯನ್ನೂ ಕಾಯುವವನು ತೊಂದರೆಗಳಿಂದ ರಕ್ಷಿಸಿಕೊಳ್ಳುವನು (ಜ್ಞಾನೋ 21:23). ನನ್ನ ತಂದೆಯವರ ಕಛೇರಿಯ ಮೇಜಿನ ಮೇಲಿನ ಒಂದು ಬೋರ್ಡ್‌ನಲ್ಲಿ ಹೀಗೆ ಬರೆದಿದ್ದರು.

"ಮಾತಾಡಬೇಡ, ಮಾತಾಡಿದರೆ ಮಿತವಾಗಿ ಮಾತಾಡು, ಜ್ಞಾನದಿಂದ ಮಾತಾಡು, ದೇವರ ಆಲೋಚನೆಯಂತೆ ಮಾತಾಡು, ವಾಗ್ದಾನ ವಚನಗಳನ್ನು ಮಾತಾಡು, ತಾಳ್ಮೆಯಿಂದ ಮಾತಾಡು, ಎಂದು ಸುಮಾರು 20 ಸೂಚನೆಗಳನ್ನು ಬರೆದಿದ್ದರು. ಅದರಂತೆಯೇ ಅವರು ನಡೆದುಕೊಳ್ಳುತ್ತಿದ್ದರು. ಶಿಲುಬೆಯಲ್ಲಿ ಯೇಸುಕ್ರಿಸ್ತನ ಪಕ್ಕದಲ್ಲಿ ಇಬ್ಬರು ಕಳ್ಳರು ತೂಗಾಡುತ್ತಿದ್ದರು. ಅವರಲ್ಲಿ ಒಬ್ಬನು ಕ್ರಿಸ್ತನನ್ನು ಪರಿಹಾಸ್ಯ ಮಾಡಿ, ಆತನಿಗೆ ವಿರೋಧವಾಗಿ ಮಾತಾಡಿ ಪಾತಾಳಕ್ಕೆ ಹೋದನು. ಮತ್ತೊಬ್ಬನೋ ಕರ್ತನೇ ನಿನ್ನ ರಾಜ್ಯದೊಂದಿಗೆ ಬರುವಾಗ ನನ್ನನ್ನು ನೆನಸಿಕೋ ಎಂದು ಹೇಳಿ ಆತನೊಂದಿಗೆ ಪರದೈಸಿಗೆ  ಹೋದನು. "ಜೀವನ ಮರಣಗಳು ನಾಳಿಗೆಯ ವಶ, ಆದ್ದರಿಂದ ನಿಮ್ಮ ಬಾಯಿಂದ ಯಾವಾಗಲೂ ನಂಬಿಕೆಯ ಭರವಸೆಯ, ಆಶೀರ್ವಾದದ ಮಾತುಗಳೇ ಬರಲಿ. ನಿಮ್ಮ ಬಾಯಿ ಅರಕೆಯಂತ್ತೆ ನಿಮ್ಮಗೆ ಆಗುತ್ತದೆ.

ದೇವಜನರೇ, ಕರ್ತನಿಗೆ ಭಯಪಟ್ಟು, ಕರ್ತನು ಗಮನಿಸುತ್ತಾನೆ, ಎಂಬ ಅರಿವಿನಿಂದ ಮಾತಾಡುವಿರಾದರೆ ನಿಮ್ಮನ್ನು ಪಾಶಕ್ಕೂ, ಮರಣಕ್ಕೂ ತಪ್ಪಿಸಬಹುದು. ದೇವ ಭಯವಿಲ್ಲದವರು ಬಾಯಿಗೆ ಬಂದಂತೆ ಮಾತಾಡುವರು, ಆದರೆ ನೀವು ದೇವರಿಗೆ ಮಹಿಮೆ ತರುವಂಥ ಮಾತುಗಳನ್ನೇ ಆಡಿರಿ.

**ನೆನಪಿಗೆ : ‘ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೆ, ನಿಮ್ಮ ಮುಖಾಂತರ ಮಾತಾಡುವನು’ (ಮತ್ತಾ 10:20).**



| ಜನವರಿ 20 | **ಬಾಯಿ ಒಂದು ಜೀವದ ಬುಗ್ಗೆ!** | ಬೆಳಿಗ್ಗೆ : ಆದಿ 49,50<br>ಸಂಜೆ : ಮತ್ತಾ 13:31–58 |
|---|---|---|

**‘ಶಿಷ್ಟನ ಬಾಯಿ ಜೀವದ ಬುಗ್ಗೆ’ (ಜ್ಞಾನೋ 10:11).**

ನಿಮ್ಮ ಬಾಯಿ ಶಿಷ್ಟನ ಬಾಯಾಗಿರಲಿ, ನಿಮ್ಮ ಬಾಯಿಂದ ದೇವರ, ಕೃಪೆಯ ಮಾತುಗಳು ಹೊರಬರಲಿ, ಇತರರನ್ನು ಸಂತೈಸುವ ಮಾತುಗಳು ಹೊರಬರಲಿ. ಯಾವುದೇ ಸಂದಿಗ್ಧ ಸಮಯವೇ ಆಗಿರಲಿ, ನಿಮ್ಮ ಬಾಯಿಯಲ್ಲಿ ಯಾವಾಗಲೂ ನಂಬಿಕೆಯ ಆಶೀರ್ವಾದದ ಮಾತುಗಳೇ ಹೊರಬರಲಿ.

ದುಷ್ಟರೊಂದಿಗೆ ಇರುವದಾದರೆ ಕೆಟ್ಟಮಾತುಗಳೇ ಬರುವದು. ಒಂದು ದಿನ ಪ್ರವಾದಿಯಾದ ಯೆಶಾಯನು, ತನ್ನ ಬಾಯಿಂದ, ನಾಲಿಗೆಯಿಂದ, ಹೊರಡುವ ಅಶುದ್ಧವಾದ ಮಾತುಗಳನ್ನು ನೆನಸಿ, ದುಃಖಪಟ್ಟು – ಅಯ್ಯೋ, ನನ್ನ ಗತಿ ಏನು ಹೇಳಲಿ, ನಾನು ಹೊಲಸು ತುಟಿಯವರ ಮಧ್ಯದಲ್ಲಿ ವಾಸಿಸುವವನು ಎಂದು ಅತ್ತನು. ಆಗ ಸೆರಾಫಿಯರಲ್ಲಿ ಒಬ್ಬನು ಯಜ್ಞವೇದಿಯಿಂದ ತಂಡಸದಲ್ಲಿ ಒಂದು ಕೆಂಡವನ್ನು ತಂದು ಅವನ ಬಾಯಿಗೆ ಮುಟ್ಟಿಸಿದನು. ಅಂದಿನಿಂದ ಅವನ ಬಾಯಲ್ಲಿ ಬತ್ತದ ಬುಗ್ಗೆಗಳು ಹೊರಬರಲಾರಂಭಿಸಿದವು. ಪ್ರವಾದನೆಗಳು ಹೊರ ಬಂದವು. (ಯೆಶಾ 6:1–6). ಪ್ರಿಯರೇ ನಿಮ್ಮ ಬಾಯಲ್ಲಿ ನೀರಿನ ಬುಗ್ಗೆಯಂತೆ ಅನ್ಯಭಾಷೆಗಳು ಹೊರಬರಲಿ. ಅನ್ಯಭಾಷೆಯಲ್ಲಿ ಮಾತಾಡುವವನು ದೇವರ ಸಂಗಡ ಮಾತಾಡುತ್ತಾನೇ ಹೊರತು ಮನುಷ್ಯರ ಸಂಗಡ ಮಾತಾಡುವದಿಲ್ಲ. ವಾಣಿಯನ್ನಾಡುವವನು ತನಗೆ ಮಾತ್ರ ಭಕ್ತಿವೃದ್ಧಿಯನ್ನುಂಟು ಮಾಡಿಕೊಳ್ಳುತ್ತಾನೆ (1ಕೊರಿಂ 14:2,4).

ನೀವು ಪ್ರವಾದಿಸುವಿರಾದರೆ, ಅದು ಇತರರಿಗೆ ಸಂತೈಸುವಿಕೆಯನ್ನು, ಆದರಣೆಯನ್ನು ತರುವದು. ನಿಮ್ಮ ಬಾಯಮಾತುಗಳು ಅನೇಕರ ಆಂತರ್ಯದ ಗಾಯಗಳನ್ನು ಕಟ್ಟುವ ಗಿಲ್ಯಾದಿನ ತೈಲದಂತೆ ಇರಲಿ. ಆಗ ನೀವು ತಂಪಾದ ತೋಟಕ್ಕೂ, ಬತ್ತಿಹೋಗದ ನೀರಿನ ಬುಗ್ಗೆಗೂ ಸಮನಾಗಿ ಇರುವಿರಿ. ನೀವು ಪವಿತ್ರಾತ್ಮನ ಅಭಿಷೇಕದಿಂದ ಅಭಿಷೇಕಿಸಲ್ಪಡುವಾಗ, ನಿಮ್ಮ ನಾಳಿಗೆಯನ್ನೂ, ಬಾಯನ್ನೂ, ಮಾತುಗಳನ್ನೂ ಪವಿತ್ರಾತ್ಮನಿಗೆ ಒಪ್ಪಿಸಿಕೊಡಿರಿ. ದಾವೀದನು ಹೇಳುತ್ತಾನೆ "ಯೆಹೋವನ ಆತ್ಮವು ನನ್ನಲ್ಲಿ ಉಸುರಿತು ಆತನ ವಾಕ್ಯವು ನನ್ನ ಬಾಯಲ್ಲಿತ್ತು (2ಸಮು 23:2).

ದೇವಮಕ್ಕಳೇ, ನಿಮ್ಮ ಬಾಯಮಾತುಗಳನ್ನು ಗಮನಿಸಿರಿ. "ನೀನು ಮಾತುಕೊಟ್ಟು ಪಾಶಕ್ಕೆ ಸಿಕ್ಕಿದ್ದೀ, ನಿನ್ನ ವಾಗ್ದಾನವು ನಿನ್ನನ್ನು ಹಿಡಿದಿದೆ" (ಜ್ಞಾನೋ 6:2) ಎಂದು. ಯಾರೂ ಹೇಳದಂತೆ ಗಮನವಿಟ್ಟು ನಿಧಾನಿಸಿ ಮಾತಾಡಿರಿ. ನೀವು ಅತಿಯಾದ ಸಂತೋಷದಲ್ಲಿರುವಾಗ, ಅತಿಯಾದ ಕೋಪದಲ್ಲಿರುವಾಗ, ನಿಮ್ಮ ಮಾತುಗಳ ಮೇಲೆ ಗಮನವಿಡಿ. "ಆಹಾರ ಚೆಲ್ಲಿದರೆ ಹಿಂದಕ್ಕೆ ತೆಗೆದುಕೊಳ್ಳಬಹುದು. ಆದರೆ ಮಾತು ಹೊರಬಿದ್ದರೆ ಹಿಂತೆಗೆದುಕೊಳ್ಳಲಾಗುವದಿಲ್ಲ.

**ನೆನಪಿಗೆ : ‘ಯೆಹೋವನೇ ನನ್ನ ಶರಣನೇ, ನನ್ನ ವಿಮೋಚಕನೇ ನನ್ನ ಮಾತುಗಳು, ನನ್ನ ಹೃದಯದ ಧ್ಯಾನವೂ ನಿನಗೆ ಸಮರ್ಪಕವಾಗಿರಲಿ’ (ಕೀರ್ತ 19:14).**

| ಜನವರಿ 21 | ಫಲನೀಡುವ ನೀರಿನ ಬುಗ್ಗೆ! | ಬೆಳಿಗ್ಗೆ : ವಿಮೋ 1,2,3<br>ಸಂಜೆ : ಮತ್ತಾ 14:1–12 |
|---|---|---|

**'ಅವರು ಎಲೀಮಿಗೆ ಬಂದರು. ಅಲ್ಲಿ ಹನ್ನೆರಡು ನೀರಿನ ಒರತೆಗಳೂ, ಎಪ್ಪತ್ತು ಖರ್ಜೂರದ ಮರಗಳೂ...ಆ ನೀರಿನ ಬಳಿಯಲ್ಲಿ ಇಳುಕೊಂಡರು' (ವಿಮೋ 15:27).**

ಇಸ್ರಾಯೇಲ್ಯರಿಗೆ, ವಾಗ್ದಾನಿಸಲ್ಪಟ್ಟ, ಹಾಲೂ ಜೇನೂ ಹರಿಯುವ ಕಾನಾನು ಇತ್ತು. ಆದರೆ ಅದನ್ನು ಪಡೆಯಲು ನಾಲ್ವತ್ತು ವರುಷಗಳು, ಅವರು ಅರಣ್ಯದಲ್ಲಿ ಪ್ರಯಾಣಿಸಬೇಕಾಗಿತ್ತು. ಹಾಗೆಯೇ, ನಾವೂ, ಈ ಭೂಲೋಕವನ್ನು ದಾಟಿ, ಆತ್ಮೀಕವಾದ ಪರಮ ಕಾನಾನನ್ನು ನೋಡಿ ಪ್ರಯಾಣ ಮಾಡುತ್ತಿರುವೆವು.

ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು, ಸಂತೋಷದಿಂದ ಹೊರಟರು. "ಫರೋಹನನ್ನೂ, ಅವನ ಸೈನ್ಯವನ್ನೂ ಕರ್ತನು ಕೆಂಪು ಸಮುದ್ರದಲ್ಲಿ ಮುಳುಗಿಸಿ ಬಿಟ್ಟನು. ಮೇಘಸ್ತಂಭವನ್ನೂ, ಅಗ್ನಿಸ್ತಂಭವನ್ನೂ ಕಳುಹಿಸಿದನು ಎಂದು ಆನಂದಿಸಿದರು. ಆದರೆ ತರುವಾಯ, ಶೂರ್ ಎಂಬ ಅರಣ್ಯದಲ್ಲಿ ನೀರು ಸಿಗದೆ ಮೂರು ದಿನಗಳು ದಾಹದಿಂದ ನಡೆದರು. ಅವರು ಮಾರಾ ಎಂಬ ಸ್ಥಳಕ್ಕೆ ಬಂದಾಗ, ಅಲ್ಲಿನ ನೀರು ಅವರಿಗೆ ಕಹಿಯಾಗಿತ್ತು. ಕುಡಿಯಲಾಗಲಿಲ್ಲ ಆಗ ಇಸ್ರಾಯೇಲ್ಯರು ಮೋಶೆಗೆ ವಿರೋಧವಾಗಿ ಗುಣುಗುಟ್ಟಲಾರಂಭಿಸಿದರು. ಕರ್ತನು ಮಾರಾವಿನ ನೀರನ್ನು ಮಧುರವಾಗಿಸಿದ್ದು ಮಾತ್ರವಲ್ಲ, ಅವರನ್ನು ಎಲೀಮ್ ಎಂಬ ಸ್ಥಳಕ್ಕೆ ಕರೆದುಕೊಂಡು ಬಂದನು. ಅಲ್ಲಿ ಕರ್ತನು ಹನ್ನೆರಡು ನೀರಿನ ಬುಗ್ಗೆಗಳನ್ನೂ, ಎಪ್ಪತ್ತು ಖರ್ಜೂರದ ಮರಗಳನ್ನು ಅವರಿಗಾಗಿ ಸಿದ್ಧಪಡಿಸಿದ್ದನು. ಅವರ ದುಃಖವೆಲ್ಲಾ ಸಂತೋಷವಾಗಿ ಮಾರ್ಪಟ್ಟಿತು.

ಕರ್ತನು ರಾತ್ರಿಯ ನಂತರ ಸುಂದರವಾದ ಸೂರ್ಯೋದಯವನ್ನು ತರುವನು. ಪ್ರಸವ ವೇದನೆಯ ನಂತರ ಸುಂದರವಾದ ಮಗುವನ್ನು ನೀಡುವನು. ದೇವರ ಮಕ್ಕಳು ನಂಬಿಕೆಯಿಂದ, ಕಣ್ಣೀರಿನ ತಗ್ಗುಗಳನ್ನು ದಾಟಿ ಅದನ್ನು ನೀರಿನ ಬುಗ್ಗೆಯಾಗಿಸಿಕೊಳ್ಳುವರು ಸೋಲಿನ ಮೆಟ್ಟಿಲನ್ನು ಗೆಲುವಿನ ಮೆಟ್ಟಿಲನ್ನಾಗಿಸಿಕೊಳ್ಳುವರು. ಮಾರಾವಿನ ನಂತರ ಎಲೀಮ್ ನಿಶ್ಚಯವಾಗಿ ಇರುವದು.

ದೇವಜನರೇ, ಕರ್ತನು ನಿಮಗೆ ನೀರಿನ ಬುಗ್ಗೆಯನ್ನು ತೋರಿಸುವದು ಮಾತ್ರವಲ್ಲ, ನಿಮ್ಮನ್ನೇ ನೀರಿನ ಬುಗ್ಗೆಯಾಗಿ, ಜೀವನದಿಯಾಗಿ ಮಾರ್ಪಡಿಸುವನು. ಎಷ್ಟರ ಮಟ್ಟಿಗೆ ನಿಮ್ಮ ಆತ್ಮೀಕ ದಾಹ ನೀಗಿಸಲ್ಪಡುವದೋ, ಅಷ್ಟರಮಟ್ಟಿಗೆ, ಆತ್ಮೀಕ ಫಲಗಳು ನಿಮ್ಮಲ್ಲಿ ಕಾಣಲ್ಪಡುವದು. ಹನ್ನೆರಡು ಎಪ್ಪತ್ತು ಎಂಬದು ಮುಖ್ಯವಾದವುಗಳು. ಯಾಕೋಬನ ಮಕ್ಕಳು ಹನ್ನೆರಡು ಮಂದಿ. ಐಗುಪ್ತಕ್ಕೆ ಬರುವಾಗ ಎಪ್ಪತ್ತು ಜನರಾಗಿದ್ದರು (ಆದಿ 46:27). ಮೊದಲು ಯೇಸುಕ್ರಿಸ್ತನ ಶಿಷ್ಯರು ಹನ್ನೆರಡು ಮಂದಿ. ನಂತರ ಅವರು ಎಪ್ಪತ್ತು ಮಂದಿಯಾದರು (ಲೂಕ 10:1–17). ಕರ್ತನು ನಿಮ್ಮನ್ನು ವೃದ್ಧಿಪಡಿಸುವನು ಎಂಬುದಕ್ಕೆ ಎಲೀಮ್ ಒಂದು ಸಾಕ್ಷಿ.

**ನೆನಪಿಗೆ : 'ತರುವಾಯ ಆ ಎಪ್ಪತು ಮಂದಿಯು ಸಂತೋಷವುಳ್ಳವರಾಗಿ ಹಿಂದಿರುಗಿ ಬಂದು ಸ್ವಾಮಿ ದೆವ್ವಗಳು ಕೂಡ ನಿನ್ನ ಹೆಸರನ್ನು ಕೇಳಿ ನಮಗೆ ಅಧೀನವಾಗುತ್ತವೆ ಅಂದರು' (ಲೂಕ 10:17).**



| ಜನವರಿ 22 | ಬೇಲಿಯೊಳಗಿನ ಬುಗ್ಗೆ! | ಬೆಳಿಗ್ಗೆ : ವಿಮೋ 4,5,6<br>ಸಂಜೆ : ಮತ್ತಾ 14:13–36 |
|---|---|---|

**'ನನ್ನ ಪ್ರಿಯಳು, ನನ್ನ ಮದಲಗಿತ್ತಿಯು, ಅಗುಳಿ ಹಾಕಿದ ಉದ್ಯಾನ ಬೇಲಿಯೊಳಗಿನ ಬುಗ್ಗೆ, ಮುಚ್ಚಿ ಮುದ್ರಿಸಿದ ಬಾವಿ ಆಗಿದ್ದಾಳೆ' (ಪ.ಗೀ 4:12).**

ನನಗೆ ಮದುವೆಯಾದ ಹೊಸದರಲ್ಲಿ ನಾನು ಸೈತಾನನ ಹೋರಾಟಗಳನ್ನು ಎದುರಿಸಬೇಕಾಯಿತು. ಒಂದು ರಾತ್ರಿ ನನಗೆ ವಿರೋಧವಾಗಿ ಕಳುಹಿಸಿದ. ಒಂದು ಘಟಸರ್ಪ ಧೀರುತ್ತಾ ನನ್ನ ಮುಂದೆ ಬಂದಿತು. ಆಗ ದೇವರಾತ್ಮನು ನನ್ನನ್ನು ತುಂಬಲು ನಿದ್ರೆಯನ್ನು ಬಿಟ್ಟು ಎದ್ದು, ಅನ್ಯಭಾಷೆಯಲ್ಲಿ ಮಾತಾಡಿ ಆ ಘಟಸರ್ಪವನ್ನು ಆತ್ಮದಲ್ಲಿ ಖಂಡಿಸುತ್ತಲೇ ಇದ್ದೆನು. ಅದುವರೆಗೂ ಉಗ್ರವಾಗಿದ್ದ ಆ ಸರ್ಪ, ತನ್ನ ಬಾಲವನ್ನು ಸುತ್ತಿಕೊಂಡು ಚಾಟಿಯಿಂದ ಹೊಡೆದು ಕೊಂಡಂತೆ ಹೊಡೆದುಕೊಂಡು ಬಂದ ಸ್ಥಳಕ್ಕೆ ಹಿಂತಿರುಗಿ ಹೋಯಿತು. ಆಗ ನಾನು ಮೊಣಕಾಲೂರಿ, "ದೇವರೇ ನೀನು ನಮಗೆ ಕೊಟ್ಟಿರುವ ರಕ್ಷಣೆ ಏನು? ಭದ್ರತೆ ಏನು? ಯಾಕೆ ಈ ರೀತಿಯ ಶೋಧನೆಗಳು ನಮ್ಮನ್ನು ಹಿಂಬಾಲಿಸುತ್ತಿರುವದು? ಎಂದು ಅರ್ಧ ಗಂಟೆ ಆಸಕ್ತಿಯಿಂದ ಪ್ರಾರ್ಥಿಸಿದ ಮೇಲೆ, ಕರ್ತನು, "ನೀನು ಅಗುಳಿ ಹಾಕಿದ ಉದ್ಯಾನ ಬೇಲಿಯೊಳಗಿನ ಬುಗ್ಗೆ ಮುಚ್ಚಿ ಮುದ್ರಿಸಿದ ಬಾವಿಯಾಗಿರುವಿ' ಎಂದು ನನ್ನ ಬಳಿ ಮಾತಾಡಿದನು. ನನಗೆ ಆಗ ದೊಡ್ಡ ಸಮಾಧಾನ ಉಂಟಾಯಿತು. ಇನ್ನು ನನಗೆ ಏನೂ ಸಂಭವಿಸುವದಿಲ್ಲ, ನಾನು ರಕ್ಷಿಸಲ್ಪಟ್ಟಿರುವೆನು' ಎಂದು ದೇವರು ದೃಢಪಡಿಸಿದನು.

ಮಾರನೆಯ ದಿನ ಸತ್ಯವೇದ ಓದಿ ಈ ಮೇಲಿನ ವಾಕ್ಯ ಪರಮ ಗೀತದಲ್ಲಿ ಬರೆಯಲ್ಪಟ್ಟಿರುವದಾಗಿ ಕಂಡುಕೊಂಡೆನು ಅಲ್ಲಿ ಮೂರು ವಿಧವಾದ ರಕ್ಷಣೆಯ ಕುರಿತು ಕರ್ತನು ಮಾತಾಡುವನು. 1.ಅಗುಳಿ ಹಾಕಲ್ಪಟ್ಟಿರುವ ತೋಟ, ಇದು ಶರೀರವನ್ನು ಸೂಚಿಸುವದು. 2.ಒಂದು ನೀರಿನ ಬುಗ್ಗೆ ಅದು ಬೇಲಿಹಾಕಲ್ಪಟ್ಟಿರುವದು. ನೀರಿನ ಬುಗ್ಗೆ ಎಂಬುದು ಆತ್ಮವನ್ನು ಸೂಚಿಸುವದು. ಬೇಲಿಹಾಕದಿದ್ದ ಬುಗ್ಗೆಗೆ ಗಾಳಿಯಿಂದ ಬರುವ ಧೂಳು, ಒಣಗಿದ ಎಲೆಗಳು, ಕಾಡು ಮೃಗಗಳು ಕಲ್ಮಷಗೊಳಿಸುವವು, ನಿಮ್ಮ ನೀರಿನ ಬುಗ್ಗೆಯಾದ ರಕ್ಷಣೆಯನ್ನು ಕಾಪಾಡಲ್ಪಡುವಂತೆ ಕ್ರಿಸ್ತನು ತನ್ನ ಪ್ರಾಣವನ್ನು ಧಾರೆಯೆರೆದು ಬೇಲಿಹಾಕಿರುವನು (ಯೆಶಾ 53:12). 3.ಒಂದು ಬಾವಿ ಇರುವದು, ಅದನ್ನು ಕಾಪಾಡುವಂತೆ ತನ್ನ ಆತ್ಮನಿಂದ ಮುದ್ರಿಸಿರುವನು, ಅದು ಮನುಷ್ಯನ ಪ್ರಾಣವನ್ನು ಸೂಚಿಸುವದು, ಒಬ್ಬ ವಿಶ್ವಾಸಿಯ ಪ್ರಾಣ ಪ್ರಪಂಚವನ್ನು ಬಿಟ್ಟು ಹೋಗುವಾಗ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆ ನಾಶಪಡಿಸದಂತೆ ತನ್ನ ಆತ್ಮನಿಂದ ಮುದ್ರಿಸಿರುವನು (ಎಫೆ 4:30).

ದೇವಜನರೇ, ನಿಮ್ಮ ಆತ್ಮ ಪ್ರಾಣ ಶರೀರ ರಕ್ಷಿಸಲ್ಪಡಬೇಕೆಂದು ಯೇಸುಕ್ರಿಸ್ತನು ತನ್ನ ಆತ್ಮ ಪ್ರಾಣ ಶರೀರದಲ್ಲಿ ಎಷ್ಟೋ ಶ್ರಮೆಯನ್ನು, ಗೆತ್ಸೇಮನೆ ತೋಟದಲ್ಲಿ ಮರಣಕ್ಕೆ ಒಳಗಾಗುವಷ್ಟು ದುಃಖಕ್ಕೆ ಒಳಗಾಯಿತು (ಮತ್ತಾ 26:38) ಎಂದು ಓದುತ್ತೇವೆ.

**ನೆನಪಿಗೆ : 'ನಾನು ಯೆಹೋವನಿಗೆ, ನೀನೇ ನನ್ನ ಶರಣನು ನನ್ನ ದುರ್ಗವೂ ನಾನು ಭರವಸವಿಟ್ಟಿರುವ ನನ್ನ ದೇವರು ಎಂದು ಹೇಳುವೆನು' (ಕೀರ್ತ 91:2).**

ಜನವರಿ 23

## ರಕ್ಷಣೆಯೆಂಬ ಬುಗ್ಗೆ!

ಬೆಳಗ್ಗೆ : ವಿಮೋ 7,8
ಸಂಜೆ : ಮತ್ತಾ 15:1–20

**'ರಕ್ಷಣೆಯೆಂಬ ಬಾವಿಗಳಿಂದ ನೀರನ್ನು ಉಲ್ಲಾಸದೊಡನೆ ಸೇದುವಿರಿ' (ಯೆಶಾ 12:3).**

ಯೇಸುಕ್ರಿಸ್ತನು, ನೀರಿನ ಬುಗ್ಗೆ ಅಥವಾ ಒರತೆಯನ್ನು ರಕ್ಷಣೆಗೆ ಹೋಲಿಸಿರುವನು (ಯೋಹಾ 4:14). ಆದರೆ ಅಭಿಷೇಕವನ್ನು ದೊಡ್ಡ ನದಿಗೆ ಹೋಲಿಸಿರುವನು (ಯೋಹಾ 7:37–39). ನೀರಿನ ಬುಗ್ಗೆ ಅಥವಾ ಒರತೆ ಸ್ವಲ್ಪ ಜನರಿಗೆ ಮಾತ್ರ ಪ್ರಯೋಜನಕಾರಿಯಾಗಿ, ಆಶೀರ್ವಾದಕರವಾಗಿ ಇರುತ್ತದೆ. ಆದರೆ ಒಂದು ನದಿಯೋ ಒಂದು ದೇಶಕ್ಕೇ ಆಶೀರ್ವಾದಕರವಾಗಿರುತ್ತದೆ.

ಕೆಲವರು ರಕ್ಷಣೆಯ ಅನುಭವದಲ್ಲೇ ನಿಂತು ಬಿಡುವರು. ಇನ್ನು ಕೆಲವರು ಅಭಿಷೇಕದ ಅನುಭವ ಬೇಡವೆಂದು ಜೀವನದಿಯಾಗಿರುವ ಪವಿತ್ರಾತ್ಮನನ್ನು ಅಲಕ್ಷ್ಯ ಮಾಡುವರು. ರಕ್ಷಣೆ ಹಾಗೂ ಅಭಿಷೇಕ ಎರಡರಿಂದಲೂ ಸಂತೋಷ ಸಿಗುವದು (ಕೀರ್ತ 51:12 1ಸಮು 2:1). ಪರಿಶುದ್ಧಾತ್ಮನು, ಈ ಲೋಕವು ನೀಡಲಾಗದಂಥಹ ನಮ್ಮಿಂದ ತೆಗೆಯಲಾರದಂಥ ಸಮಾಧಾನವನ್ನೂ ಸಂತೋಷವನ್ನು ನೀಡುವನು. ಕೆಲವರು ಪಾಪಮಾಡಿದಾಗ ಅವರ ಆತ್ಮ ಬಹಳವಾಗಿ ದುಃಖಕ್ಕೆ ಒಳಗಾಗುವದು. ದಾವೀದನು ಬತ್ಷೇಬಳೊಂದಿಗೆ ಪಾಪವನ್ನು ಮಾಡಿದಾಗ, ದುಃಖದಿಂದ ದೇವಸಮ್ಮುಖದಲ್ಲಿ ಕುಳಿತು "ನಿನ್ನ ರಕ್ಷಣಾನಂದವನ್ನು ತಿರುಗಿ ಅನುಭವಿಸುವಂತೆ ಮಾಡು; ನನ್ನಲ್ಲಿ ಸಿದ್ಧ ಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು" (ಕೀರ್ತ 51:12) ಎಂದು ಗೋಳಾಡಿದನು. ಆದರೆ ಪವಿತ್ರಾತ್ಮನಿಂದಾಗುವ ಸಂತೋಷವೋ, ದೊಡ್ಡನದಿಯಂಥದ್ದು. "ದೇವರ ರಾಜ್ಯ ತಿನ್ನುವದೂ ಕುಡಿಯುವದೂ ಅಲ್ಲ, ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದುಂಟಾಗುವ ಆನಂದವೂ ಆಗಿದೆ" (ರೋಮಾ 14:17).

ಕರ್ತನು ಕೃಪೆಯಾಗಿ ನೀಡುವ ಅಭಿಷೇಕವು ಮೂರು ಕಾರ್ಯಗಳನ್ನು ನಿಮ್ಮ ಆಂತರ್ಯದಲ್ಲಿ ಮಾಡುವದು. 1.ದೇವರ ನೀತಿ, 2.ಪರಲೋಕ ನೀಡುವ ಸಮಾಧಾನ, 3.ಪವಿತ್ರಾತ್ಮನಿಂದುಂಟಾಗುವ ಆನಂದ. ಪ್ರಿಯರೇ ನೀವು ಕರ್ತನಾದ ಯೇಸುಕ್ರಿಸ್ತನನ್ನು ಅಂಗೀಕರಿಸಿಕೊಂಡು ರಕ್ಷಣೆಯ ಅನುಭವದಲ್ಲೇ ನಿಂತು ಬಿಡಬೇಡಿರಿ. ಪವಿತ್ರಾತ್ಮನ ಅಭಿಷೇಕವನ್ನು ಪಡೆದು ದೇವರಾತ್ಮನು ನೀಡುವ ಸಮಾಧಾನ ಸಂತೋಷಗಳ ಅನುಭವವನ್ನು ಹೊಂದಿ, ಹರಿಯುವ ನದಿಯಂತೆ, ನಿಮಗೆ ನಿಮ್ಮ ಕುಟುಂಬಕ್ಕೆ, ಸಮಾಜಕ್ಕೆ ಆಶೀರ್ವಾದಕರವಾಗಿ ಜೀವಿಸಿ, ದೇವರ ನಾಮವನ್ನು ಮಹಿಮೆ ಪಡಿಸಿರಿ. ಇದುವೇ ನಿಜವಾದ ಕ್ರೈಸ್ತ ಜೀವಿತವಾಗಿರುವದು. ಹಾಗೂ ಕರ್ತನು ನಿಮಗೆ ದಯಪಾಲಿಸಿದ ಅಭಿಷೇಕದಿಂದ ಒಂದು ಕಡೆ ನೀವು ಉರಿದು ಪ್ರಕಾಶಿಸುವ ಹಾಗೆ ಮಾಡುವುದು. ಇನ್ನೊಂದು ಕಡೆ ಪಾತಾಳದ ಶಕ್ತಿಗಳು ನಿಮ್ಮನ್ನು ಜಯಿಸದ ಹಾಗೆ ತಡೆಯುವಂತೆ ಮಾಡುವುದು.

**ನೆನಪಿಗೆ : 'ಇಗೋ, ನನ್ನ ತಂದೆಯು ವಾಗ್ದಾನಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ, ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು' (ಲೂಕ 24:49).**



ಜನವರಿ 24

## ನಿತ್ಯವೂ ನಡೆಸುವನು!

ಬೆಳಗ್ಗೆ : ವಿಮೋ 9,10,11
ಸಂಜೆ : ಮತ್ತಾ 15:21–39

**'ಯೆಹೋವನು ನಿಮ್ಮನ್ನು ನಿತ್ಯವೂ ನಡಿಸುತ್ತಾ ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸಿ ನಿಮ್ಮ ಎಲುಬುಗಳನ್ನು ಸಸಾರಮಾಡುವನು' (ಯೆಶಾ 58:11).**

ಮೇಲಿನ ವಾಕ್ಯದಲ್ಲಿ ದೇವರು, "ನಾನು ನಿನ್ನನ್ನು ನಡೆಸುವೆನು" ಎಂದು ಹೇಳದೆ "ನಿನ್ನನ್ನು ನಿತ್ಯವೂ ನಡೆಸುವೆನು" ಎಂದು ವಾಗ್ದಾನ ಮಾಡಿರುವನು. ಈ ವಾಗ್ದಾನವು ಹಳೆ ಒಡಂಬಡಿಕೆಯಲ್ಲಿನ ಇಸ್ರಾಯೇಲ್ಯರಿಗೆ ಮಾತ್ರ ಕೊಡಲ್ಪಡಲಿಲ್ಲ, ಕ್ರಿಸ್ತನ ಮೂಲಕ, ಅಬ್ರಹಾಮನ ವಂಶಸ್ಥರಾದಂಥ ಪ್ರತಿ ಕ್ರೈಸ್ತನು/ಕ್ರೈಸ್ಥಳಿಗೂ ನೀಡಿರುವಂಥ ವಾಗ್ದಾನವಾಗಿರುವದು.

ಇಪ್ಪತ್ತು ಲಕ್ಷ ಇಸ್ರಾಯೇಲ್ಯರನ್ನು, ಕರ್ತನು ಒಬ್ಬ ತಂದೆಯಂತೆ ಪ್ರೀತಿಯಿಂದಲೂ, ಕನಿಕರದಿಂದಲೂ ಅರಣ್ಯದಲ್ಲಿ ನಡೆಸಿದನು. ಹಗಲಲ್ಲಿ ಬಿಸಿಲಿನ ಬೇಗೆಯನ್ನು ನೀಗಿಸಲು, ಮೇಘಸ್ತಂಭವನ್ನೂ ಇರುಳಿನಲ್ಲಿ ಅಗ್ನಿಸ್ತಂಭವನ್ನು ಏರ್ಪಡಿಸಿದನು. ಪ್ರತಿ ದಿನವೂ ಆಕಾಶದಿಂದ ಪರಲೋಕದ ಆಹಾರವಾದ ಮನ್ನವನ್ನು ಸುರಿಸಿದನು. ಮಾಂಸವನ್ನು ಬಯಸಿದಾಗ, ಲಾವಕ್ಕಿಗಳು ಬಂದು ಪಾಳೆಯದೊಳಗೆ ಬೀಳುವಂತೆ ಮಾಡಿದನು. ಸತ್ಯವೇದ ಹೇಳುತ್ತದೆ, "ಪ್ರಾಯದ ಸಿಂಹಗಳಾದರೋ, ಹೊಟ್ಟೆಗಿಲ್ಲದೆ ಹಸಿದಾವು, ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ ಎಂದು (ಕೀರ್ತ 34:10). ಯೆಹೋವನು ನನಗೆ ಕುರುಬನು ಕೊರತೆ ಪಡೆನು ಕೀರ್ತ 23:1 ಹೌದು ಇದು ಅರಸನಾದ ದಾವೀದನ ಅನುಭವವಾಗಿದೆ.

ದೇವರು ನೀಡುವ ಪ್ರತಿಯೊಂದು ವಾಗ್ದಾನದ ಹಿಂದೆ, ಒಂದು ನಿಬಂಧನೆ ಇರುವದು. ಆ ನಿಬಂಧನೆ ಯಾವದೆಂದರೆ ವಿಧೇಯತೆ. ಎಲ್ಲಿ ವಿಧೇಯತೆ ಇರುವದೋ ಅಲ್ಲಿ ಆಶೀರ್ವಾದವೂ ಇರುತ್ತದೆ. ಇದು ಒಂದು ನಾಣ್ಯದ ಎರಡು ಮುಖವಿದ್ದಂತೆ. ಕರ್ತನ ಆಜ್ಞೆಗಳಿಗೆ ವಿಧೇಯರಾಗುವಾಗ ಆತನು ತನ್ನ ಮಕ್ಕಳನ್ನು ನಿತ್ಯವೂ ನಡೆಸುವನು. ವಿಧೇಯತೆಯಿಂದ ಈ ಪ್ರಪಂಚದಲ್ಲಿ ನಿಮಗೆ ಕಷ್ಟ ಸಂಕಟಗಳು ಬರುವದೇ ಇಲ್ಲವೆಂದು ಅರ್ಥವಲ್ಲ. "ಈ ಲೋಕದಲ್ಲಿ ನಿಮಗೆ ಕಷ್ಟ ಉಂಟು, ಆದರೆ ನಾನು ಲೋಕವನ್ನು ಜಯಿಸಿದ್ದೇನೆ" ಎಂದು ಕರ್ತನಾದ ಯೇಸುಕ್ರಿಸ್ತನು ವಾಗ್ದಾನ ಮಾಡಿರುವನು. ಹೌದು ಆತನು ನಮ್ಮಂತೆ ನರನಾಗಿ ಹುಟ್ಟಿದ್ದರಿಂದ, ನಮ್ಮ ಈ ಲೋಕದಲ್ಲಿನ ಕಷ್ಟ ಸಂಕಟಗಳನ್ನು ಅರಿತಿರುವನು. ಆದ್ದರಿಂದಲೇ, ನಮಗೆ ಸಹಾಯಕನಾಗಿ ಪವಿತ್ರಾತ್ಮನನ್ನು ನಮ್ಮೊಂದಿಗಿರಲು ಕಳುಹಿಸಿರುವನು.

ದೇವಜನರೇ, ದೇವರ ಆಜ್ಞೆಗಳಿಗೆ, ವಾಕ್ಯಗಳಿಗೆ ನೀವು ವಿಧೇಯರಾಗಿ ನಡೆಯುವಿರಾದರೆ, ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲೇ ದೃಢವಾಗಿ ನೆರವೇರುತ್ತವೆ.

**ನೆನಪಿಗೆ : 'ನೋಡಿರಿ, ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು' (ಮತ್ತಾ 28:20).**

ಜನವರಿ 25 | **ಮಾರ್ಗನಡೆಸುವನು!** | ಬೆಳಗ್ಗೆ : ವಿಮೋ 12,13 / ಸಂಜೆ : ಮತ್ತಾ 16

**'ನಿನ್ನನ್ನು ಉಪದೇಶಿಸಿ ನಡೆಯ ಬೇಕಾದ ಮಾರ್ಗವನ್ನು ತಿಳಿಸುವೆನು; ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು ಅನ್ನುತ್ತಾನಲ್ಲಾ' (ಕೀರ್ತ 32:8).**

"ಮಗನೇ, ಮಗಳೇ, ನಾನು ನಿನ್ನನ್ನು ಕೈ ಹಿಡಿದು ನಡೆಸುವೆನು. ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿ ಕೊಡುವೆನು. (ವಿಮೊ 33:14) ಎಂದೂ "ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು" (ಯೆಹೋ 1:5) ಎಂದು. ಯೆಹೋಶುವನಿಗೂ ಇಸ್ರಾಯೇಲ್ಯರಿಗೂ ಹೇಳಿದಂತೆ ಇಂದು ನಿಮಗೂ ಹೇಳುತ್ತಿರುವನು. ಆತನು ಎಂದಿಗೂ ಬದಲಾಗದ ದೇವರಾಗಿರುವನು.

ಪ್ರವಾದಿಯಾದ ಯೆಶಾಯನ ಅನುಭವ ಏನಾಗಿತ್ತು? ಅವನು ಹೀಗೆ ಹೇಳುತ್ತಾನೆ – "ಕರ್ತನಾದ ಯೆಹೋವನು ಶಿಕ್ಷಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ; ಬೆಳ ಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಿತರಂತೆ ನಾನು ಕೇಳುವ ಹಾಗೆ ನನ್ನ ಕಿವಿಯನ್ನು ಜಾಗರಗೊಳಿಸುತ್ತಾನೆ" ಎಂದು (ಯೆಶಾ 50:4). ಪ್ರಿಯರೇ, ಪ್ರತಿದಿನವೂ ಕರ್ತನ ಪಾದದಲ್ಲಿ ಕುಳಿತು, "ಕರ್ತನೇ, ಹೇಳು, ದಾಸನಾದ/ದಾಸಳಾದ ನಾನು ಕೇಳುವೆನು. ನಾನು ಹೇಗೆ ನಡೆದುಕೊಳ್ಳಬೇಕು ಎಂದು ಬೋಧಿಸು ಎಂದು ಕೇಳಿರಿ. 'ನಿನ್ನ ದೇವರಾದ ಯೆಹೋವನು ನಾನೇ, ನಿನಗೆ ವೃದ್ಧಿ ಮಾರ್ಗವನ್ನು ಬೋಧಿಸಿ ನೀನು ನಡೆಯಬೇಕಾದ ದಾರಿಯಲ್ಲಿ ನಿನ್ನನ್ನು ನಡೆಸುವವನಾಗಿದ್ದೇನೆ' ಎಂದು ಆತನು ವಾಗ್ದಾನ ಮಾಡಿರುವನಲ್ಲವೇ (ಯೆಶಾ 48:17). ಹೌದು, ಕರ್ತನು ನಿಮಗೆ ಪ್ರಯೋಜನ ಕರವಾದವುಗಳನ್ನು ಹೇಳಿಕೊಡುವನು, ಬೋಧಿಸುವನು. ದಾರಿ ತೋರಿಸುವನು. ದಾವೀದನೂ, ತನ್ನ ಎಲ್ಲಾ ಕಾರ್ಯಗಳಲ್ಲೂ ಕರ್ತನ ಆಲೋಚನೆಯನ್ನೇ ನಿರೀಕ್ಷಿಸುತ್ತಿದ್ದನು. "ನಿನ್ನ ಸತ್ಯಾನುಸಾರವಾಗಿ ನನ್ನನ್ನು ನಡೆಸುತ್ತಾ ಉಪದೇಶಿಸು, ನೀನೇ ನನ್ನನ್ನು ರಕ್ಷಿಸುವ ದೇವರು; ಹಗಲೆಲ್ಲಾ ನಿನ್ನನ್ನೇ ನಿರೀಕ್ಷಿಸುವವನಾಗಿದ್ದೇನೆ" ಎಂದು ಬೇಡುತ್ತಾನೆ (ಕೀರ್ತ 25:5). ನಿನ್ನ ಆಲೋಚನೆಯಂತೆ, ನೀನು ನನ್ನನ್ನು ನಡೆಸಿ, ಅಂತ್ಯದಲ್ಲಿ ನೀನು ನನ್ನನ್ನು ಮಹಿಮೆಯಲ್ಲಿ ಸೇರಿಸಿಕೊಳ್ಳುವಿ ಎಂಬುದು ಅವನ ನಂಬಿಕೆಯಾಗಿತ್ತು.

ದೇವಮಕ್ಕಳೇ, ಹದ್ದು ತನ್ನ ಮರಿಗಳನ್ನು ಹೊತ್ತುಕೊಂಡು ಹೋಗುವಂತೆ, ಕರ್ತನು ತನ್ನ ಮಕ್ಕಳನ್ನು ಹೊತ್ತು ನಡೆಸುವನು. ಕುರುಬನು ಕುರಿಮರಿಗಳನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಹೋಗುವಂತೆ, ಕರ್ತನು ನಿಮ್ಮನ್ನು ಹೊತ್ತು ಸಾಗುವನು. ನಿಮ್ಮ ಪ್ರತಿಯೊಂದು ಕಾರ್ಯಗಳಲ್ಲಿಯೂ, ಕರ್ತನ ಆಲೋಚನೆಯಂತೆ, ನೀವು ನಡೆಯಲು ನಿಮ್ಮನ್ನು ಒಪ್ಪಿಸಿಕೊಡುವಾಗ, ನಿಮ್ಮನ್ನು ಉಪದೇಶಿಸಿ ನಿಮ್ಮನ್ನು ಕಟಾಕ್ಷಿಸಿ ನಿಮ್ಮ ಮೇಲೆ ದಯೆತೋರಿಸುವನು ಮತ್ತು ನಿಶ್ಚಯವಾಗಿ, ಆತನು ನಿಮ್ಮ ಮಾರ್ಗಗಳನ್ನು ತಿಳಿಯಪಡಿಸಿ ಅದರಲ್ಲಿ ಸುರಕ್ಷಿತವಾಗಿ ನಡೆಸುವನು.

**ನೆನಪಿಗೆ : 'ಆತನು ಯುಗಯುಗಾಂತರಗಳಲ್ಲಿಯೂ ನಮ್ಮ ದೇವರು, ನಿರಂತರವೂ ನಮ್ಮನ್ನು ನಡಿಸುವವನಾಗಿದ್ದಾನೆ' (ಕೀರ್ತ 48:14).**



ಜನವರಿ 26 | **ನೀತಿಮಾರ್ಗದಲ್ಲಿ ನಡೆಸುತ್ತಾನೆ!** | ಬೆಳಗ್ಗೆ : ವಿಮೋ 14,15 / ಸಂಜೆ : ಮತ್ತಾ 17

**'ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿಯಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ' (ಕೀರ್ತ 23:3).**

ಕರ್ತನು ನಿಮ್ಮನ್ನು ನಡೆಸುವನು, ನಿತ್ಯವೂ ನಡೆಸುವನು, ಮಾತ್ರವಲ್ಲ ನೀತಿಮಾರ್ಗದಲ್ಲಿ ನಿಮ್ಮನ್ನು ನಡೆಸುವನು. ಆದರೆ ಕರ್ತನನ್ನು ಯಾರು ತಮ್ಮ ಕುರುಬನನ್ನಾಗಿಸಿಕೊಳ್ಳುವದಿಲ್ಲವೋ, ಆತನ ಪ್ರೀತಿ ಕರುಣೆ ಕೃಪೆಯನ್ನು ಕಂಡು ಕೊಳ್ಳುವದಿಲ್ಲವೋ ಅವರು ತಂದೆಯಿಲ್ಲದ ಮಕ್ಕಳಂತೆ ಅನಾಥರಾಗಿ, ದಿಕ್ಕೆಟ್ಟವರಾಗಿ, ನಡೆಯುವರು. ಅವರು ಮನ ಬಂದಂತೆ ನಡೆದು ಜೀವಿತವನ್ನು ವ್ಯರ್ಥಮಾಡಿಕೊಳ್ಳುವರು.

ಭಕ್ತನಾದ ಯೋಬನು, ಕರ್ತನು ತನ್ನನ್ನು ನಡೆಸುವಂತೆ ತನ್ನ ಕರಗಳನ್ನು ಕರ್ತನ ಕೈಗೆ ಒಪ್ಪಿಸಿಕೊಟ್ಟನು. ಆದ್ದರಿಂದಲೇ ಅವನು ಹೇಳುತ್ತಾನೆ – "ಆತನಾದರೋ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು" (ಯೋಬ 23:10) ಎಂದು ಹೇಳುತ್ತಾನೆ. ನೀವು ನಿಮ್ಮ ಜೀವಿತವನ್ನು ಕರ್ತನ ಕೈಗಳಲ್ಲಿ ಒಪ್ಪಿಸಿಕೊಟ್ಟು, ಆತನ ಮೇಲೆ ನಂಬಿಕೆ ಇಡುವಾಗ, ಆತನು ನೀತಿಯಲ್ಲೂ, ಪರಿಶುದ್ಧತೆಯಲ್ಲೂ, ಜಯದ ಮಾರ್ಗದಲ್ಲೂ, ನಿಮ್ಮನ್ನು ನಡೆಸುವನು. "ಅಲ್ಲಿ ರಾಜಮಾರ್ಗವಿರುವದು, ಅದು ಪರಿಶುದ್ಧ ಮಾರ್ಗ ಎನಿಸಿಕೊಳ್ಳುವದು; ಯಾವ ಅಶುದ್ಧನೂ ಅಲ್ಲಿ ನಡೆಯನು, ಅದು ದೇವಜನರಿಗಾಗಿಯೇ ಇರುವದು, ಅಲ್ಲಿ ಹೋಗುವ ಮೂಢನೂ ದಾರಿತಪ್ಪನು" (ಯೆಶಾ 35:8).

ನೀತಿಯ ಮಾರ್ಗದಲ್ಲಿ ನಿಮ್ಮನ್ನು ನಡೆಸುವದಕ್ಕಾಗಿಯೇ, ಕರ್ತನು ಪವಿತ್ರಾತ್ಮನನ್ನು ನಿಮಗೆ ಕೃಪೆಯಾಗಿ ನೀಡಿರುವನು. ಪರಿಶುದ್ಧಾತ್ಮನು ನಿಮ್ಮೊಳಗೆ ಬರುವಾಗ, ಪಾಪವನ್ನು ಕುರಿತೂ, ನೀತಿಯನ್ನು ಕುರಿತೂ ಖಂಡಿಸಿ ಸ್ಪಷ್ಟವಾಗಿ ತಿಳಿಸುವನು. ಮಾತ್ರವಲ್ಲ ಸಕಲ ವಿಷಯದಲ್ಲಿ ಸತ್ಯದೊಳಗೆ ನಿಮ್ಮನ್ನು ನಡೆಸುವನು (1ಯೋಹಾ 16:13). ನೀವು ಬಲಕ್ಕಾಗಲಿ ಎಡಕ್ಕಾಗಲಿ ತಿರುಗಿಕೊಳ್ಳುವಾಗ ಇದೇ ಮಾರ್ಗ ಇದರಲ್ಲೇ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವದು (ಯೆಶಾಯ 30:21). "ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ" (ಕೀರ್ತ 119:105) ಎಂದು ಸತ್ಯವೇದ ಹೇಳುತ್ತದೆ.

ದೇವಜನರೇ, ನೀವು ದೆಸೆಗೆಟ್ಟವರಲ್ಲ, ಅನಾಥರಲ್ಲ, ಯಾವ ದಾರಿಯಲ್ಲಿ ನಡೆಯಬೇಕೆಂದು ಮಾರ್ಗ ತಿಳಿಯದೇ ಪರಿತಪಿಸುವ ಅಗತ್ಯ ಇಲ್ಲ. ಕರ್ತನು ನಿಮ್ಮನ್ನು ತನ್ನ ಪರಿಶುದ್ಧವಾದ ಮಾರ್ಗದಲ್ಲಿ ನಡೆಸುವನು. "ಭಯಪಡಬೇಡ, ನಾನೇ ನಿನಗೆ ಸಹಾಯಕನು, ಇಸ್ರಾಯೇಲಿನ ಸದಮಲಸ್ವಾಮಿಯು ನಿನಗೆ ವಿಮೋಚಕನು ಎಂದು ಯೆಹೋವನು ಅನ್ನುತ್ತಾನೆ' (ಯೆಶಾ 41:13).

**ನೆನಪಿಗೆ : 'ಯೆಹೋವನೊಬ್ಬನೇ ಅವರನ್ನು ನಡಿಸಿಕೊಂಡು ಬಂದದ್ದೂ; ಆತನು ಅವರನ್ನು ಭೂಮಿಯ ಎತ್ತರವಾದ ಪ್ರದೇಶಗಳ ಮೇಲೆ ಹತ್ತಿಸಿ ಅವರಿಗೆ ವ್ಯವಸಾಯವೃದ್ಧಿಯನ್ನುಂಟು ಮಾಡುವನು' (ಧರ್ಮೋ 32:12,13).**

**ಜನವರಿ 27**

## ಮರುಭೂಮಿಯಲ್ಲಿಯೂ ನಡೆಸುವನು

ಬೆಳಗ್ಗೆ : ವಿಮೋ 16,17,18
ಸಂಜೆ : ಮತ್ತಾ 18:1-20

**'ಯೆಹೋವನು ನಿಮ್ಮನ್ನು ನಿತ್ಯವೂ ನಡಿಸುತ್ತಾ ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸಿ ನಿಮ್ಮ ಎಲುಬುಗಳನ್ನು ಸಸಾರಮಾಡುವನು' (ಯೆಶಾ 58:11).**

ಹಗಲು ಬಂದ ನಂತರ ರಾತ್ರಿ ಬರುವದು. ಸಂತೋಷ ದಿನಗಳೂ ಬರುವವು, ದುಃಖದ ದಿನಗಳೂ ಬರುವವು. ಕಷ್ಟ, ಸಂಕಟ ಉಪದ್ರವಗಳಿಲ್ಲದ, ಕ್ರೈಸ್ತ ಮಾರ್ಗವನ್ನು ಕರ್ತನು ನಮಗೆ ಪರಿಚಯಿಸಿಲ್ಲ. ಲೋಕದಲ್ಲಿ ನಿಮಗೆ ಸಂಕಟ ಉಂಟು; ಧೈರ್ಯವಾಗಿರ್ರಿ, ನಾನು ಲೋಕವನ್ನು ಜಯಿಸಿದ್ದೇನೆ ಎಂದು (ಯೋಹಾ 16:33).

ಕಷ್ಟದ ಕಾಲ ಬಂದು ಬಿಟ್ಟಿತೇ ಎಂದು ನೀವು ಚಿಂತಿಸಬೇಕಾಗಿಲ್ಲ "ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸಿ, ನಿಮ್ಮ ಎಲುಬುಗಳನ್ನು ಸಸಾರ ಮಾಡುವೆನು" ಎಂದು ಕರ್ತನು ಹೇಳುತ್ತಾನೆ. ಕರ್ತನು ನೀತಿವಂತರನ್ನು ಹಸಿವಿನಿಂದ ಕಂಗೆಡಿಸುವದಿಲ್ಲ. "ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು, ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ" "ಆತನು ಯಾವನಿಗೆ ಆಸ್ತಿ ಪಾಸ್ತಿಗಳನ್ನು ದಯಪಾಲಿಸುವದಲ್ಲದೆ ಅದನ್ನು ಅನುಭವಿಸಿ ಪಾಲಿಗೆ ಬಂದದ್ದನ್ನು ಹೊಂದಿ ತನ್ನ ಪ್ರಯಾಸದಲ್ಲಿ ಸಂತೋಷ ಪಡಲು ಶಕ್ತಿ ಕೊಡುವನೋ ಅವನ ಸುಖವು ದೇವರ ಅನುಗ್ರಹ" (ಪ್ರಸಂಗಿ 5:19). "ಅವರ ಪ್ರಾಣವನ್ನು ಮರಣದಿಂದ ತಪ್ಪಿಸುವೆನು, ಬರಗಾಲದಲ್ಲಿ ಅವರ ಜೀವವನ್ನು ಉಳಿಸುವೆನು" (ಕೀರ್ತ 33:19). "ಅವರಿಗೆ ವಿಪತ್ಕಾಲದಲ್ಲಿಯೂ ಆಶಾಭಂಗ ವಾಗುವದಿಲ್ಲ; ಬರಗಾಲದಲ್ಲಿಯೂ ಅವರಿಗೆ ಕೊರತೆಯಿಲ್ಲ" (ಕೀರ್ತ 37:19) ಎಂಬುದು ಕರ್ತನ ವಾಗ್ದಾನವಾಗಿರುವದು. ಬರಗಾಲದಲ್ಲಿ ಆಹಾರದ ಕೊರತೆಯಿಂದ ಉಂಟಾಗುವ ಬಲಹೀನತೆ, ಒಂದು ಕಡೆ ಇದ್ದರೂ, ಕರ್ತನ ವಾಕ್ಯಗಳನ್ನು ಕೇಳಲಾಗದ ಬರಗಾಲದ ದಿನಗಳು ಬರುವವು (ಆಮೋಸ 8:11). ಅಂಥಹ ಕಾಲಗಳು ಮಹಾಯಾಜಕನಾದ ಎಲಿಯನ ಕಾಲದಲ್ಲಿತ್ತು. ಆಗ ದೈವೋಕ್ತಿಗಳು, ದೇವದರ್ಶನಗಳು ಅಪರೂಪವಾಗಿದ್ದವು (1ಸಮು 3:1). ಇಂದು ಅನೇಕ ಕಮ್ಯೂನಿಸ್ಟ್ ದೇಶಗಳಲ್ಲೂ, ಇಸ್ಲಾಮಿಯಾ ದೇಶಗಳಲ್ಲೂ ಸತ್ಯವೇದ ವಾಕ್ಯಗಳು ಸಿಗದಂತೆ, ತಡೆಗಳೂ ಕಟ್ಟಳೆಗಳು, ಸರ್ಕಾರದ ವಿರೋಧಗಳು ಇರುವವು. ನಮ್ಮ ದೇಶದಲ್ಲೂ ಸುವಾರ್ತೆ ಸಾರುವದಕ್ಕೂ, ದೀಕ್ಷಾಸ್ನಾನ ಕೊಡುವದಕ್ಕೂ ತಡೆ ಆಜ್ಞೆಗಳುಂಟು.

ದೇವಜನರೇ, ಇಂದು ಕರ್ತನು ತನ್ನ ಕೃಪೆಯಿಂದ ಕನ್ನಡ ಮಕ್ಕಳ ಮಧ್ಯದಲ್ಲಿ ದೇವಸೇವಕರನ್ನು ಕಳುಹಿಸಿ ಸುವಾರ್ತಾ ಸೇವೆ ಅವಿರತವಾಗಿ ಸಾಗುವಂತೆ ಮಾಡಿರುವನು. ಈ ಕೃಪೆಯ ಬಾಗಿಲು ಮುಚ್ಚಲ್ಪಡುವದರ ಒಳಗೆ, ಕರ್ತನ ಬರುವಿಕೆಗಾಗಿ ನಿಮ್ಮ ಕುಟುಂಬಗಳನ್ನು ಸಿದ್ಧಪಡಿಸಿರಿ.

**ನೆನಪಿಗೆ : 'ಬಾಯಾರಿ ನಾಲಿಗೆ ಒಣಗಿ ನೀರನ್ನು ಹುಡುಕಿ ಹೊಂದದ ದೀನದರಿದ್ರರಿಗೆ ಯೆಹೋವನೆಂಬ ನಾನು ಪ್ರಸನ್ನನಾಗುವೆನು, ಇಸ್ರಾಯೇಲಿನ ದೇವರಾದ ನಾನು ಅವರನ್ನು ಕೈಬಿಡೆನು' (ಯೆಶಾ 41:17).**



**ಜನವರಿ 28**

## ನೆರಳಾದ ಯೇಸು!

ಬೆಳಗ್ಗೆ : ವಿಮೋ 19,20
ಸಂಜೆ : ಮತ್ತಾ 18:21-35

**'ನಿನ್ನನ್ನು ಕಾಯುವವನು ಯೆಹೋವನೇ; ನಿನ್ನ ಬಲಗಡೆಯಲ್ಲಿ ನೆರಳಿನಂತೆ ನಿಂತಿರುವಾತನು ಯೆಹೋವನೇ' (ಕೀರ್ತ 121:5).**

ಮೇಲಿನ ದೇವರ ವಾಕ್ಯ, ಯೆಹೋವನು ನಿನ್ನ ಬಲಗಡೆಯಲ್ಲಿ ನೆರಳಿನಂತೆ ನಿಂತಿರುವನು ಎಂದು ಹೇಳುತ್ತದೆ. ಹೌದು, ಕರ್ತನು ನಿಮಗೆ ಆಧಾರವಾಗಿಯೂ, ನೆರಳಾಗಿಯೂ ಇರುವನು. ಸಾಮಾನ್ಯವಾಗಿ, ನಿಮ್ಮ ಬಲಗೈ ಎಡಗೈಗಿಂತ ಬಲಉಳ್ಳದ್ದಾಗಿರುವದು. ಏನು ಮಾಡಬೇಕಾದರೂ ಬಲಗೈಯಿಂದ ಮಾಡುತ್ತೇವೆ. ಹಾಗೆಯೇ, ಕರ್ತನ ಬಲಗೈ ಪರಾಕ್ರಮವನ್ನು ನಡೆಸುತ್ತದೆ (ಕೀರ್ತ 118:16). ಆತನ ಬಲಗೈ ಆಪತ್ತುಗಳಿಂದ ಬಿಡಿಸುವದು (ಕೀರ್ತ 107:28). ಆತನ ಬಲಗೈ, ಆತನ ಮಕ್ಕಳಿಗೆ ಆಧಾರವಾಗಿರುವದು (ಕೀರ್ತ 18:25).

ಅರಸನಾದ ದಾವೀದನು ಹೀಗೆ ಹೇಳುತ್ತಾನೆ – "ಕರ್ತನು, ನನ್ನ ಬಲಗಡೆಯಲ್ಲಿ ಇರುವದರಿಂದ ನಾನು ಎಂದಿಗೂ ಕದಲುವದಿಲ್ಲ" ಎಂದು (ಕೀರ್ತ 16:8). ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ, ನಿಮ್ಮ ಬಲಗಡೆಯಲ್ಲಿ ಬಲೆ ಬೀಸಿರಿ ಎಂದು ಹೇಳಿದನು. ಹಾಗೆಯೇ ಬಲೆಹಾಕಿದಾಗ, ಹೇರಳವಾದ ಮೀನುಗಳನ್ನು ಹಿಡಿದರು. ಒಬ್ಬ ದೊಡ್ಡ ಐಶ್ವರ್ಯವಂತನಿಗೆ, ಮರಣ ಭಯ ಆವರಿಸಿತು. ಅವನು ಕರ್ತನಲ್ಲಿ ನಂಬಿಕೆ ಇಡದ ಕಾರಣ, ಕರ್ತನು ತನ್ನ ಬಲಗಡೆ ಇರುವನೆಂಬುದನ್ನು ಧೈರ್ಯವಾಗಿ ಹೇಳಲಾಗಲಿಲ್ಲ. ಅಣುಗುಂಡುಗಳಿಂದ ತನ್ನನ್ನು ತನ್ನ ಕುಟುಂಬವನ್ನೂ ತಪ್ಪಿಸಲು, ಭೂಮಿಯ ಒಳಗೆ ಒಂದು ಬಂಗಲೆಯನ್ನು ಅಧಿಕವಾದ ಹಣ ವೆಚ್ಚ ಮಾಡಿ ನಿರ್ಮಿಸಿದನು. ಅದರ ಪ್ರತಿಷ್ಠಾಪನೆಗಾಗಿ ಬಂದ ದೇವ ಸೇವಕರಾದ, ಘನ.ಮಾರಿಸ್ ಸೆರಿಲ್ಲೋ, ನಾನು ಇದಕ್ಕಿಂತ ಕಡಿಮೆ ಖರ್ಚಿನಲ್ಲಿ, ಬಹಳ ಭದ್ರವಾದ ಇನ್ನೊಂದು ಆಶ್ರಯ ಏರ್ಪಡಿಸಿಕೊಂಡಿರುವೆನು ಎಂದು ಹೇಳಿದರು. ಕೋಟಿಶ್ವರನಿಗೋ ಒಂದೇ ಆಶ್ಚರ್ಯ, ಎಲ್ಲಿರುವದು ಎಂದು ಕೇಳಿದನು. ಆಗ ಆ ಬೋಧಕರು, ಕೀರ್ತ 91:4 ಅನ್ನು ತೋರಿಸಿ, "ಆತನು, ನಿನ್ನನ್ನು ತನ್ನ ರೆಕ್ಕೆಗಳಿಂದ ಹೊದಗಿಸುವನು. ಆತನ ರೆಕ್ಕೆಗಳ ಮರೆಯನ್ನು ಆಶ್ರಯಿಸಿಕೊಳ್ಳುವಿ. ಆತನ ಸತ್ಯತೆಯೇ ನಿನಗೆ ಖೇಡ್ಯವೂ ಗುರಾಣಿಯೂ ಆಗಿದೆ" ಎಂದು ಹೇಳಿದರು. ಆ ಬೋಧಕರು ಸಾಕ್ಷಿಯಾಗಿ, ತಾನು ಹೇಗೆ ಪರಾತ್ಪರನಾದ ದೇವರ ಪಕ್ಕೆಗಳ ಮರೆಯನ್ನು ತನ್ನ ಆಶ್ರಯವಾಗಿಸಿಕೊಂಡರೆಂಬುದನ್ನು ವಿವರಿಸಿದಾಗ, ಆ ಕೋಟ್ಯಾಧಿಪತಿಯ ಬಾಯಿಂದ ಮಾತುಗಳೇ ಹೊರಡದಾಯಿತು.

ದೇವಮಕ್ಕಳೇ, ಕರ್ತನು ನಿಮ್ಮ ಬಲಪಾರ್ಶ್ವದಲ್ಲಿರುವದಾದರೆ, ನೀವು ಯಾವ ವಿಷಯವಾಗಿಯೂ ಚಿಂತಿಸಬೇಕಾಗಿಲ್ಲ. ಕರ್ತನ ಸಮ್ಮುಖದಲ್ಲಿ ನಿಮ್ಮ ಭಾರಗಳನ್ನೆಲ್ಲಾ ಇಳಿಸಿ ಬಿಟ್ಟು, ಆದರಣೆಯನ್ನು ಸಂತೈಸುವಿಕೆಯನ್ನು ಪಡೆಯಬಹುದು. ಯಾವ ಶತ್ರುವನ್ನು ಕಂಡು ಭಯಪಡಬೇಕಾಗಿಲ್ಲ. ಕರ್ತನೇ ಎಲ್ಲವನ್ನೂ ನೋಡಿಕೊಳ್ಳುವನು. ಆತನೇ ನಿಮಗಾಗಿ ಎಲ್ಲ ಮಾಡಿ ಮುಗಿಸುವನು.

**ನೆನಪಿಗೆ : 'ನೀನು ನನಗೆ ಸಹಾಯಕನಾಗಿದ್ದೀಯಲ್ಲಾ; ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷ ಮಾಡುತ್ತಿರುವೆನು' (ಕೀರ್ತ 63:7).**

**ಜನವರಿ 29** — **ಬಂಡೆಯ ನೆರಳು!** — **ಬೆಳಿಗ್ಗೆ : ವಿಮೋ 21,22 ಸಂಜೆ : ಮತ್ತಾ 19**

**'ಆತನು ಮರುಭೂಮಿಯಲ್ಲಿ ನೀರಿನ ಕಾಲಿವೆಗಳ ಪ್ರಕಾರವೂ ಬೆಂಗಾಡಿನಲ್ಲಿ ದೊಡ್ಡ ಬಂಡೆಯ ನೆರಳಿನೋಪಾದಿಯಲ್ಲಿಯೂ ಇರುವನು'** (ಯೆಶಾ 32:2).

ಬಾಲ್ಯದಲ್ಲಿ ಹೆತ್ತವರು ನಮಗೆ ಆಧಾರವಾಗಿಯೂ ನೆರಳಾಗಿಯೂ ಇರುವರು. ಬೆಳೆದು ದೊಡ್ಡವರಾದಾಗ, ಸಹೋದರ ಸಹೋದರಿಯರು ನಮಗೆ ಸಹಾಯ ಮಾಡುವ ನೆರಳಾಗಿರುವರು. ಮದುವೆಯಾಗುವಾಗ, ನಮ್ಮ ಬಾಳಸಂಗಾತಿಯಾಗಿ ಬರುವವರು ನೆರಳಾಗಿಯೂ ಸಹಾಯಕರಾಗಿಯೂ ಇರುವರು. ಅವರೆಲ್ಲರೂ ಕರ್ತನು ನಮಗೆ ಕೊಡುವ ಆಶೀರ್ವಾದವಾಗಿರುವದು.

ಇನ್ನು ಬಂಧು ಬಾಂಧವರು, ಸ್ನೇಹಿತರು ಆಪತ್ಕಾಲದಲ್ಲಿ ಸಹಾಯ ಮಾಡುವರು. ಆದಾಗ್ಯೂ, ಕರ್ತನೋ ಅತಿ ಶ್ರೇಷ್ಠನಾದಾತನು. ಆತನು ಎಂಥಹ ನೆರಳಾಗಿರುವನು? "ಆತನು ದೀನರಿಗೆ ಕೋಟೆ, ಇಕ್ಕಟ್ಟಿನಲ್ಲಿ ದರಿದ್ರನಿಗೆ ರಕ್ಷಣ ದುರ್ಗ, ಬಿಸಿಲಿಗೆ ನೆರಳು ಭೀಕರ ಶ್ವಾಸವು ಗೋಡೆಗೆ ಬಡಿದು ಬಿಡುವ ಬಿರುಗಾಳಿಯಂತಿರುವಾಗ ಆಶ್ರಯವೂ ಆಗಿರುವನು" (ಯೆಶಾ 25:4). ಬಂಡೆಯಾದ ಕರ್ತನ ನೆರಳು ನಿಮಗೆ ರಕ್ಷಣ ಕಾವಲಾಗಿಟ್ಟಿರುವದರಿಂದ, ನೀವು ಎಂದಿಗೂ ಚಿಂತೆ ಮಾಡಬೇಕಾಗಿಲ್ಲ. ಬಂಡೆಯ ಸುತ್ತಲೂ ಎಷ್ಟೋ ಜೀವರಾಶಿಗಳು ಬಹಳ ಜೋಪಾನವಾಗಿ ಕಾಪಾಡಲ್ಪಟ್ಟು ಜೀವಿಸುವವು. ನೀವು ಯಾವ ನೆರಳಿನಲ್ಲಿ ಆಶ್ರಯ ಹೊಂದಿರುವಿರಿ? ಹಣವಾ? ಐಶ್ವರ್ಯವಾ? ಅಥವಾ ಬಂಡೆಯಾದ ಕ್ರಿಸ್ತನಾ? ಕ್ರಿಸ್ತನೇ ದೈವೀಕ ಬಂಡೆಯಾಗಿರುವನು (1ಕೊರಿ 10:4). ನೀವೂ ವಿಶ್ರಾಂತಿ ಪಡೆಯುವ ನೆರಳಾಗಿರುವನು.

ಒಮ್ಮೆ ಒಬ್ಬ ಸೌವಾರ್ತಿಕರು ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಸೇವೆ ಮಾಡಿ ತನ್ನ ಮನೆಗೆ ಹಿಂತಿರುಗುತ್ತಿದ್ದರು. ಅವರು ಕಾಡಿನ ಮಾರ್ಗವಾಗಿ ನಡೆದು ಬರುತ್ತಿದ್ದರು. ಆಗ ಇದ್ದಕ್ಕಿದ್ದಂತೆ, ಒಂದು ಕರಡಿ ಅವರಿಗೆ ಎದುರಾಯಿತು. ಭಯಭೀತರಾದ ಆ ಸೇವಕರು ಓಡಲಾರಂಭಿಸಿದರು. ಆದರೆ ಕರಡಿಯೂ ಅವರನ್ನು ಅಟ್ಟಿಸಿಕೊಂಡು ಬಂದಿತು, ಕೊನೆಗೆ ಏನು ಮಾಡಬೇಕೆಂದು ತೋಚದೆ, ಅಲ್ಲೇ ಹತ್ತಿರದಲ್ಲಿದ್ದ ಒಂದು ಬಂಡೆಯ ಸೀಳಿನಲ್ಲಿ ನುಗ್ಗಿ ತನ್ನನ್ನು ಮರೆಮಾಡಿಕೊಂಡರು. ಅಲ್ಲಿಗೆ ಬಂದ ಕರಡಿ ಆ ಸೀಳಿನಲ್ಲಿ ನುಗ್ಗಲಾಗದೆ ಬಂಡೆಯನ್ನು ಹೊಡೆದು ಹೊಡೆದು ಸಾಕಾಗಿ, ಹೂಂಕರಿಸುತ್ತಾ ಹೊರಟು ಹೋಯಿತು. ಆಗ ಆ ಸೇವಕರಿಗೆ, ಕರ್ತನ ಪಂಚಗಾಯಗಳ ನೆನಪಾಯಿತು. ಆತನ ಗಾಯಗಳೇ, ಆ ಬಂಡೆಯ ಸೀಳಾಗಿದ್ದಿತೆಂದು ಅರಿತರು.

ದೇವಮಕ್ಕಳೇ, ಕರ್ತನಾದ ಯೇಸುಕ್ರಿಸ್ತನೇ ನಿಮಗೆ ಆಶ್ರಯ ಬಂಡೆಯೂ, ನೆರಳೂ ಆಗಿರುವನು. ಬಂಡೆಯ ನೀರಿನಿಂದ ನಿಮ್ಮ ದಾಹವನ್ನು ತಣಿಸುವನು. ನಿಮ್ಮನ್ನು ಕೆಟ್ಟಯೋಚನೆಗಳು, ಬಿಡಲಾಗದ ಕೆಟ್ಟ ಅಭ್ಯಾಸಗಳು, ಅಟ್ಟಿಸಿಕೊಂಡು ಬರುವಾಗ ಕ್ರಿಸ್ತನೆಂಬ ಬಂಡೆಯ ನೆರಳಿಗೆ ಬನ್ನಿರಿ.

**ನೆನಪಿಗೆ : 'ಹಗಲಿನ ಬಿಸಿಲಲ್ಲಿ ನೆರಳನ್ನೂ ಸಣ್ಣ ದೊಡ್ಡ ಮಳೆಗಳಲ್ಲಿ ಆಶ್ರಯವನ್ನೂ ಕೊಡುವ ಮಂಟಪವಿರುವದು'** (ಯೆಶಾ 4:6).



**ಜನವರಿ 30** — **ಕೃಪೆಯ ನೆರಳು!** — **ಬೆಳಿಗ್ಗೆ : ವಿಮೋ 23,24 ಸಂಜೆ : ಮತ್ತಾ 20:1-16**

**'ದೇವರೇ, ನಿನ್ನ ಪ್ರೀತಿ ಎಷ್ಟೋ ಅಮೂಲ್ಯವಾದದ್ದು; ಮಾನವರು ನಿನ್ನ ರೆಕ್ಕೆಗಳ ಮರೆಯನ್ನು ಆಶ್ರಯಿಸಿಕೊಳ್ಳುತ್ತಾರೆ'** (ಕೀರ್ತ 36:7).

ನಮ್ಮ ದೇವರು, ಕೃಪೆಯ ದೇವರು. ಆತನು ಕೃಪೆಯಿಂದಲೂ, ಸತ್ಯದಿಂದಲೂ ತುಂಬಿದವನಾಗಿದ್ದು, ನಮ್ಮೊಳಗೆ ವಾಸಮಾಡುವನು (ಯೋಹಾ 1:14). ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ಆತನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ಕೃಪೆಯು ಅಷ್ಟು ಅಪಾರವಾಗಿದೆ (ಕೀರ್ತ 103:11). ಮಾತ್ರವಲ್ಲ ನಮಗಾಗಿ ಕಲ್ವಾರಿಗೆ ಹೋಗಿ ತನ್ನ ಶಿಲುಬೆಯ ನೆರಳಿನಲ್ಲಿ ನಮಗೆ ಆಶ್ರಯ ನೀಡಿರುವನು.

ಒಂದು ಮರದ ನೆರಳಿನಲ್ಲಿ ತಂಗುವದೆಂದರೆ, ಅದು ಬಿಸಿಲನ್ನೂ, ಧಗೆಯನ್ನೂ ತಾನು ತೆಗೆದುಕೊಂಡು, ತಂಪಾದ ನೆರಳನ್ನು ನಮಗೆ ನೀಡುವದು ಅದನ್ನು ನೆನಸಿ, ಮದುವಣಗಿತ್ತಿ ಹೀಗೆ ಹೇಳುವಳು – "ಉದ್ಯಾನ ವೃಕ್ಷಗಳಲ್ಲಿ ಸೇಬು ಹೇಗೋ ಪುರುಷರಲ್ಲಿ ನನ್ನ ಕಾಂತನು ಹಾಗೆಯೇ ಇಷ್ಟನು. ನಾನು ಅವನ ನೆರಳಿನಲ್ಲಿ ಕೂತು ಸಂತಸಗೊಂಡೆನು. ಅವನ ಫಲವು ನನ್ನ ನಾಲಿಗೆಗೆ ರುಚಿಯಾಗಿತ್ತು" (ಪ.ಗೀ 2:3). ಕ್ರಿಸ್ತನ ನೆರಳು ಅಂದರೇನು? ಅದುವೇ ಆತನ ಪಾದದಲ್ಲಿನ ಆತನ ಪ್ರಸನ್ನತೆಯಾಗಿರುವದು. ಯೇಸುಕ್ರಿಸ್ತನು ಈ ಭೂಮಿಯಲ್ಲಿ ಇದ್ದಂಥ ದಿನಗಳಲ್ಲಿ ಆತನ ಆಶೀರ್ವಾದಗಳನ್ನು ಬಯಸಿ, ಅನೇಕರು ಆತನ ಪಾದದಲ್ಲಿ ಬಿದ್ದು ಅಧ್ಭುತಗಳನ್ನು ಪಡೆದುಕೊಂಡರು. ಮರಿಯಳು ಯೇಸುವಿನ ಪಾದದ ಬಳಿ ಕುಳಿತು, ಆತನ ಬಾಯಿಂದ ಹೊರಡುವ ಮಾತುಗಳಿಂದ ಲೋಕವು ತನ್ನಿಂದ ತೆಗೆಯಲಾದ, ಭಾಗ್ಯವನ್ನು ಪಡೆದುಕೊಂಡಳು" (ಲೂಕ 10:41,42).

ಕ್ರಿಸ್ತನ ಪಾದಪೀಠವೆಂಬ ನೆರಳಿನಲ್ಲಿ ನಿಮಗೆ ಪರಿಶುದ್ಧತೆ ಇರುವದು. ಆತನ ವಾಕ್ಯದಲ್ಲಿ ಸತ್ಯವಿರುವದು. ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು ನಿನ್ನ ವಾಕ್ಯವೇ ಸತ್ಯವು" (ಯೋಹಾ 17:17) ಎಂದು. ಯೇಸುಕ್ರಿಸ್ತನು, ಈ ಲೋಕದಲ್ಲಿದ್ದಾಗ ತನ್ನ ಶಿಷ್ಯರಿಗಾಗಿ ತಂದೆ ದೇವರಲ್ಲಿ ಪ್ರಾರ್ಥಿಸಿದನು. ಕ್ರಿಸ್ತನು ನಿಮ್ಮನ್ನು ತನ್ನ ವಾಕ್ಯಗಳಿಂದ ಶುದ್ಧೀಕರಿಸುವನು. ಎಲ್ಲಾ ಪಾಪಗಳನ್ನು, ಅಶುದ್ಧತೆಗಳನ್ನು ಹೋಗಲಾಡಿಸುವನು. ಅವುಗಳಿಂದ ತಪ್ಪಿಸುವನು ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು" (ಕೀರ್ತ 91:1).

ದೇವಜನರೇ, ನಿಮಗೆ ಎಷ್ಟೋ ಕರ್ತವ್ಯಗಳಿದ್ದರೂ ಅವುಗಳೆಲ್ಲಕ್ಕಿಂತಲೂ, ಮುಂಜಾನೆಯಲ್ಲಿ ಕರ್ತನ ಪಾದ ಸನ್ನಿಧಿಯಲ್ಲಿ ಕಾದಿದ್ದು ಮನ್ನದಂತೆ ಸುರಿಯುವ ದೇವರ ಕೃಪೆಯು ನಮಗೆ ದೊರೆಯುವುದು. ಆತನ ಕೃಪಾವರಗಳು ನಿಂತು ಹೋಗುವದಿಲ್ಲ ದಿನದಿನವು ಹೊಸ ಹೊಸದಾಗಿ ಒದಗುತ್ತವೆ. ಕರ್ತನ ಪಾದದಲ್ಲಿ ಕುಳಿತು ಕರ್ತನ ಹೊನ್ನಿನ ಮುಖವನ್ನು ದೃಷ್ಟಿಸಿ, ಆತನಿಂದ ದೊರಕುವ ಆಶೀರ್ವಾದ ಸಂತೋಷ, ಸಮಾಧಾನವನ್ನು ಪಡೆಯುವದರಲ್ಲಿ ತಪ್ಪಿಹೋಗದಿರಿ.

**ನೆನಪಿಗೆ : 'ನನ್ನ ಪ್ರಿಯಳೇ, ಎನ್ನ ಸುಂದರಿಯೇ, ಎದ್ದು ಬಾ! ಇಗೋ ಮಳೆಗಾಲ ಕಳೆಯಿತು. ವೃಷ್ಟಿಯು ನಿಂತುಹೋಯಿತು'** (ಪ.ಗೀ 2:10,11).